ಶನಿವಾರ, ಮಾರ್ಚ್ 16, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಸಪ್ತಾಹ
ಮುಂಬೈನಲ್ಲಿ ನಡೆದ ಫ್ಯಾಷನ್ ಸಪ್ತಾಹದಲ್ಲಿ ರೂಪದರ್ಶಿಯೊಬ್ಬರು ಪಾಲ್ಗೊಂಡಿದ್ದರು



Smart Pradesh Uttar Pradesh 1



Metro rail services in Noida, Greater Noida, Ghaziabad, Lucknow, Kanpur and Agra

Implementation of Safe City Project in 17 Municipal Corporations and Gautam Buddha Nagar

Rapid Rail Service from Meerut to Delhi, First in the country

Agra and Varanasi included in top 10 cities of the country in smart cities ranking.

Uttar Pradesh as an Achiever State in 10 Various Categories at India Smart Cities Conclave-2023, **Varanasi awarded as the top smart city of North Zone.**

Under the Smart City Mission, **670 projects of worth ₹9313 crore under progress in 10 cities** (Agra, Aligarh, Bareilly, Jhansi, Kanpur, Lucknow, Moradabad, Prayagraj, Saharanpur and Varanasi).

646 works completed out of approved works in 6 categories in 10 smart cities.

Development of Ayodhya, Firozabad, Gorakhpur, Ghaziabad, Mathura-Vrindavan, Meerut and Shahjahanpur as smart cities under the **State Smart City Scheme.**

Under Amrut Yojana, **157 projects of drinking water, 84 of sewerage, 530 of green land & parks have been completed, work on 91 projects under progress.**

Integrated Command & Control Centers and CCTV camera **Surveillance for Public Safety.**

Creating Vital Amenities for Women, Elderly, Differently-abled individuals and children.

Mukhyamantri Nagar Srijan Yojana operational for providing basic facilities in newly created/ extended/ upgraded municipal bodies, **Provision of ₹550 crore.**

Aspirational City Plan launched for overall development of 100 Aspirational Municipal Bodies.

Implementation of Aspirational City Scheme based on 3C approach i.e. **Convergence, Collaboration and Competition.**

Appointment of 100 professionals as Chief Minister Fellows in Aspirational Urban Bodies.

Construction of **9 lakh individual toilets, 69,381 community and public toilets.**

Construction of **1,100 pink toilets in civic bodies.**

Cleanliness campaign conducted at 75 tourist & historical places in the state.

Employment to more than **48,501 workers by registering 1.50 lakh workers** through 63 urban livelihood centers in 51 cities.

E-nagar service implemented in all urban bodies for the convenience of the general public.

Formation of Emergency Response Sanitation Unit to assist Safai Mitras in cleaning sewers and septic tanks.

Live monitoring of buses in cities through **'Chalo App'**

The work of preparing GIS based master plan in 59 AMRUT cities and **GIS based property tax management system in 15 municipal corporations under progress.**

Construction of 17 lakh 62 thousand houses under Pradhan Mantri Awas Yojana (Urban).

Construction of 1,040 houses in Lucknow under Light House Project based on Global Housing Technology Challenge.

Uttar Pradesh ranks third in the country in India Smart Cities Awards Contest

Arrangement of 'Sambhav' portal and statewide

Toll Free Number 1533

operational for resolving public grievances

Smart City
MISSION TRANSFORM-NATION







KAAM ASARDAAR-DOUBLE ENGINE KI SARKAR

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪುಸ್ತಕ ಮೇಳ
ಬೆಂಗಳೂರಿನಲ್ಲಿ ನಡೆದ ಪುಸ್ತಕ ಮೇಳದಲ್ಲಿ ಚಿತ್ರನಟ ಸಂಗೀತಾ ಶೃಂಗೇರಿ ಪಾಲ್ಗೊಂಡಿದ್ದರು



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಆರೋಗ್ಯದ 10 ತಿಂಗಳು



ಶ್ರೀ ದಿನೇಶ್‌ಗುಂಡೂರಾವ್
ಮಾನ್ಯ ಆರೋಗ್ಯ ಸಚಿವರು ಇಲಾಖಾ
ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು

ಆರೋಗ್ಯ ಇಲಾಖೆಯಲ್ಲಿ ಬದಲಾವಣೆಯ ಪರ್ವ



108 ಸೇವೆಗೆ ನೂತನ 262 ಆಂಬ್ಯುಲೆನ್ಸ್ ಸೇರ್ಪಡೆ

- 105 ALS ಹಾಗೂ 157 BLS ಆಂಬ್ಯುಲೆನ್ಸ್
- ಆಂಬ್ಯುಲೆನ್ಸ್ ಸಂಖ್ಯೆ 715ಕ್ಕೆ ಏರಿಕೆ
- ಯೋಜನಾ ವೆಚ್ಚ ₹80 ಕೋಟಿ



'ಅನೀಮಿಯ ಮುಕ್ತ ಪೌಷ್ಠಿಕ ಕರ್ನಾಟಕ' ಯೋಜನೆ ಜಾರಿ

- ಕರ್ನಾಟಕ ರಾಜ್ಯವನ್ನು ಅನೀಮಿಯ ಮುಕ್ತಗೊಳಿಸಲು "ಅನೀಮಿಯ ಮುಕ್ತ ಪೌಷ್ಠಿಕ ಕರ್ನಾಟಕ" ಯೋಜನೆ.
- ಪರೀಕ್ಷೆ, ಚಿಕಿತ್ಸೆ ಉಚಿತ ಅನೀಮಿಯ ಮುಕ್ತ ಖಚಿತ
- ಯೋಜನಾ ವೆಚ್ಚ ₹185.74 ಕೋಟಿ



8 ಜಿಲ್ಲೆಗಳಲ್ಲಿ ಆಶಾಕಿರಣ ಯೋಜನೆ ಜಾರಿ

- ಮನೆಬಾಗಿಲಿಗೆ ತೆರಳಿ ಕಣ್ಣಿನ ತಪಾಸಣೆ ಹಾಗೂ ಚಿಕಿತ್ಸೆ ನೀಡುವ ಮಹತ್ವಾಕಾಂಕ್ಷಿ ಕಾರ್ಯಕ್ರಮ.
- ಉಚಿತ ಶಸ್ತ್ರಚಿಕಿತ್ಸೆ ಹಾಗೂ ಉಚಿತ ಕನ್ನಡಕ ವಿತರಣೆ



ರಾಜ್ಯಾದ್ಯಂತ ಏಕಬಳಕೆ ಡಯಾಲೈಸರ್ ಡಯಾಲಿಸಿಸ್ ಯೋಜನೆ ಜಾರಿ

- 219 ಡಯಾಲಿಸಿಸ್ ಕೇಂದ್ರಗಳಲ್ಲಿ 800 ಡಯಾಲಿಸಿಸ್ ಯಂತ್ರಗಳ ಅಳವಡಿಕೆ
- ವಾರ್ಷಿಕ ₹108ಕೋಟಿ ಯೋಜನಾ ವೆಚ್ಚ
- ವಾರ್ಷಿಕ 7.20 ಲಕ್ಷ ಡಯಾಲಿಸಿಸ್ ಸೈಕಲ್ ಗಳು
- 48 ಹೊಸ ತಾಲ್ಲೂಕುಗಳು ಡಯಾಲಿಸಿಸ್ ಸೇವೆಗೆ ಸೇರ್ಪಡೆ



"ಶ್ರವಣದೋಷ ಮುಕ್ತ ಕರ್ನಾಟಕ" ನಿರ್ಮಿಸಲು ಶ್ರವಣ ಸಂಜೀವಿನಿ ಯೋಜನೆ ಜಾರಿ

- 'ಶ್ರವಣ ಸಂಜೀವಿನಿ' ಕಾಂಕ್ಲಿಯರ್ ಇಂಪ್ಲಾಂಟ್ ಯೋಜನೆ ಅನುಷ್ಠಾನ. ರಾಜ್ಯಾದ್ಯಂತ 12 ಸರ್ಕಾರಿ, 17 ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಶಸ್ತ್ರ ಚಿಕಿತ್ಸೆ
- 6 ವರ್ಷ ದೊಳಗಿನ ಶ್ರವಣ ದೋಷದಿಂದ ಬಳಲುತ್ತಿರುವ ಪ್ರತಿ ಮಗುವಿನ ಚಿಕಿತ್ಸೆಗೆ ₹6.20 ಲಕ್ಷ ವೆಚ್ಚ, ಈವರೆಗೂ 520 ಯಶಸ್ವಿ ಶಸ್ತ್ರಚಿಕಿತ್ಸೆ



ಕರ್ನಾಟಕ ರತ್ನ ಡಾ|| ಪುನೀತ್ ರಾಜ್ ಕುಮಾರ್ ಹೃದಯಜ್ಯೋತಿ ಯೋಜನೆ ಅನುಷ್ಠಾನ

- ರಾಜ್ಯಾದ್ಯಂತ 82 ಸ್ಪೋಕ್ ಹಾಗೂ ಸೂಪರ್ ಸ್ಪೆಷಾಲಿಟಿ ಕಾರ್ಡಿಯಕ್ ಆಸ್ಪತ್ರೆಗಳಲ್ಲಿ 11 ಹಬ್ ಕೇಂದ್ರಗಳ ಸ್ಥಾಪನೆ
- ಹೃದಯಾಘಾತ ಚಿಕಿತ್ಸೆಗೆ 30,000 ಮೌಲ್ಯದ ಉಚಿತ ಟೆನೆಕ್ಟ್ ಪ್ಲೇಸ್ ಚುಚ್ಚುಮದ್ದು
- ಸಾರ್ವಜನಿಕ ಆಸ್ಪತ್ರೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸ್ವಯಂಚಾಲಿತ ಬಾಹ್ಯ ಡಿಫಿಬ್ರಿಲೇಟರ್ (AED) ಅಳವಡಿಕೆ

ರಾಜ್ಯಾದ್ಯಂತ ಹುಕ್ಕಾ ನಿಷೇಧ ಹಾಗೂ ಗೋಬಿಮಂಚೂರಿ, ಕಾಟನ್‌ಕ್ಯಾಂಡಿಗೆ ಬಳಸುವ ಹಾನಿಕಾರಕ ಕೃತಕ ಬಣ್ಣದ ನಿಷೇಧ

ಅಂಗಾಂಗ ದಾನ ಮಾಡಿದ ದಾನಿಗಳ ಕುಟುಂಬದವರಿಗೆ ಸರ್ಕಾರದಿಂದ ಪ್ರಶಂಸಾ ಪತ್ರ ವಿತರಣೆಯ ಯೋಜನೆಗೆ ಚಾಲನೆ

ನನ್ನ ಮೈತ್ರಿ ಮುಟ್ಟಿನ ಕಪ್ ಹಾಗೂ ಶುಚಿ ಯೋಜನೆಗೆ ಮರುಚಾಲನೆ

- 6 ರಿಂದ 12ನೇ ತರಗತಿಯ 19 ಲಕ್ಷ ಹೆಣ್ಣುಮಕ್ಕಳಿಗೆ ಯೋಜನೆಯಿಂದ ಅನುಕೂಲ
- ಯೋಜನಾ ವೆಚ್ಚ 47 ಕೋಟಿ

8 ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಹಾಗೂ 4 ನವಜಾತ ಶಿಶು ಆಂಬ್ಯುಲೆನ್ಸ್ ಸೇವೆಗಳಿಗೆ ಚಾಲನೆ

40 ತಾಲ್ಲೂಕು ಆಸ್ಪತ್ರೆಗಳಲ್ಲಿ ಟೆಲಿ ಐಸಿಯು ಸೇವೆ ಜಾರಿ. ಯೋಜನಾ ವೆಚ್ಚ ₹40ಕೋಟಿ

ಕರ್ನಾಟಕ ಮೆದುಳು ಆರೋಗ್ಯ ಕಾರ್ಯಕ್ರಮಕ್ಕೆ ಚಾಲನೆ. ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ 33 ಮೆದುಳು ಆರೋಗ್ಯ ಚಿಕಿತ್ಸಾಲಯ ಸ್ಥಾಪನೆ. ನಿಮಾನ್ಸ್ ಸಂಸ್ಥೆಯೊಂದಿಗೆ ಸಹಯೋಗ. ಪ್ರಾಥಮಿಕ ಹಂತದಿಂದಲೇ ನರರೋಗ ನಿರ್ಣಯ ಹಾಗೂ ಸಕಾಲಿಕ ಚಿಕಿತ್ಸೆಗೆ ಅನುಕೂಲ

ಸಿಎಸ್‌ಆರ್ (CSR) ಯೋಜನೆಗಳು:

- CSR ಅನುದಾನದಲ್ಲಿ ₹100 ಕೋಟಿ ವೆಚ್ಚದಲ್ಲಿ ಆಸ್ಪತ್ರೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮ
- C-Camp ಸಹಯೋಗದೊಂದಿಗೆ ಆರೋಗ್ಯ ಸೇವೆಗಳಿಗಾಗಿ ತಂತ್ರಜ್ಞಾನಗಳ ಅಳವಡಿಕೆ
- ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಸಂಚಾರಿ ಆರೋಗ್ಯ ಘಟಕಕ್ಕೆ ಚಾಲನೆ

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಬದ್ಧತೆ.

ಶನಿವಾರ, ಮಾರ್ಚ್ 16, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 76 | ಪುಟ 26

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ರಂಜಾನ್ ಪವಿತ್ರ ಮಾಸದ ಉಪವಾಸ ಹೀಗಿರಲಿ



ಆಳ-ಅಗಲ
ಹೆಚ್ಚು ದೇಣಿಗೆ ನೀಡಿದ ಕಂಪನಿಗೆ ಲಕ್ಷ ಕೋಟಿಗೂ ಹೆಚ್ಚು ಗುತ್ತಿಗೆ

‘ಹೃದಯ ಬಗೆದರೆ ಮೋದಿ ಕಾಣ್ತಾರೆ’ 11

ಬಿಎಸ್‌ವೈ ವಿರುದ್ಧ ಪೋಕ್ಸೊ: ಸಿಐಡಿ ತನಿಖೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,643 ▼	22,023 ▼	₹67,650 (ಬೆಂಗಳೂರು) ▼	₹75,900 (ಬೆಂಗಳೂರು) ▲	82.86 ▼

ಬಿಎಸ್‌ವೈ ಮಗನ ವಿರುದ್ಧ ಈಶ್ವರಪ್ಪ ಸ್ಪರ್ಧೆ

ಬೆಂಗಳೂರು: ಬಿಜೆಪಿಯಲ್ಲಿ ಟಿಕೆಟ್ ಬೇಗುದಿ ತಾರಕಕ್ಕೇರಿದ್ದು, ಬಿಜೆಪಿಯ ಹಿರಿಯ ನಾಯಕ, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಶಿವಮೊಗ್ಗ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವುದಾಗಿ ಘೋಷಿಸಿದ್ದಾರೆ. 7C

ಚಿನಕುರಳಿ

ಪ್ರಕಾಶ್ ಶೆಟ್ಟಿ



ಲೋಕಸಭೆ ಚುನಾವಣೆ

ಮಧ್ಯಾಹ್ನ 3 ಗಂಟೆಗೆ ಆಯೋಗದ ಮಾಧ್ಯಮಗೋಷ್ಠಿ

ದಿನಾಂಕ ಪ್ರಕಟಣೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ವೇಳಾಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಶನಿವಾರ ಪ್ರಕಟಿಸಲಿದೆ. ‘ಹ್ಯಾಟ್ರಿಕ್’ ಜಯದ ಅಮಿತ ವಿಶ್ವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯು ‘ಮಿಷನ್ 400’ರ ಕನವರಿಕೆಯಲ್ಲಿದ್ದರೆ, ಪ್ರತಿಪಕ್ಷಗಳ ‘ಇಂಡಿಯಾ’ ಮೈತ್ರಿಕೂಟವು ಕಮಲ ಪಾಳಯವನ್ನು ಅಧಿಕಾರದಿಂದ ಇಳಿಸಬಹುದು ಎಂಬ ನಂಬಿಕೆಯಲ್ಲಿ ಕಣಕ್ಕೆ ಇಳಿಯಲು ಮುಂದಾಗಿದೆ.

ಚುನಾವಣಾ ಆಯೋಗದ ನೂತನ ಸದಸ್ಯರಾದ ಜ್ಞಾನೇಶ್ ಕುಮಾರ್ ಹಾಗೂ ಸುಖಬೀರ್ ಸಿಂಗ್ ಸಂಧು ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು. ಅದರ ಬೆನ್ನಲ್ಲೇ, ಲೋಕಸಭೆ ಹಾಗೂ ಕೆಲವು ರಾಜ್ಯಗಳ ಚುನಾವಣಾ ವೇಳಾಪಟ್ಟಿ ಪ್ರಕಟಿಸಲು ಮಧ್ಯಾಹ್ನ 3 ಗಂಟೆಗೆ ಮಾಧ್ಯಮಗೋಷ್ಠಿ ನಡೆಯಲಿದೆ ಎಂದು ಆಯೋಗದ ವಕ್ತಾರರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದರು.

ಲೋಕಸಭೆಯಲ್ಲಿ ಮೂರನೆಯ ಎರಡರಷ್ಟು ಬಹುಮತ ಹೊಂದುವುದು ಬಿಜೆಪಿಯ ಮಹದಾಸೆ. ಅದಕ್ಕಾಗಿ ನರೇಂದ್ರ ಮೋದಿ ಅವರು ಅಭಿವೃದ್ಧಿ ಕಾಮಗಾರಿಗಳ ಚಾಲನೆಯ ಹೆಸರಿನಲ್ಲಿ ನಾಲ್ಕು ದಿಕ್ಕುಗಳ ರಾಜ್ಯಗಳಿಗೆ ಪ್ರವಾಸ ಮಾಡಿ ಒಂದು ಸುತ್ತಿನ ಚುನಾವಣಾ ಪ್ರಚಾರ ಮುಗಿಸಿ ಬಿಟ್ಟಿದ್ದಾರೆ.

10 ನೇ ಪುಟ ನೋಡಿ

ಅವಧಿ ಮುಕ್ತಾಯ ಯಾವಾಗ?	
ವಿಧಾನಸಭೆ	
ಅರುಣಾಚಲ ಪ್ರದೇಶ	ಜೂನ್ 2
ಸಿಕ್ಕಿಂ	ಜೂನ್ 2
ಆಂಧ್ರಪ್ರದೇಶ	ಜೂನ್ 11
ಒಡಿಶಾ	ಜೂನ್ 24

- ಪ್ರಸ್ತುತ ಲೋಕಸಭೆಯ ಅವಧಿ ಜೂನ್ 16ಕ್ಕೆ ಕೊನೆ
- ಅದಕ್ಕೆ ಮುನ್ನ ಹೊಸ ಸರ್ಕಾರ ರಚನೆಯಾಗಬೇಕಿದೆ
- 12 ಲಕ್ಷಕ್ಕೂ ಹೆಚ್ಚು ಮತಗಟ್ಟೆಗಳು ಇರಲಿವೆ
- ಸುಮಾರು 97 ಕೋಟಿ ಜನರು ಮತ ಚಲಾಯಿಸಲು ಅರ್ಹರು

ನಾಲ್ಕು ರಾಜ್ಯಗಳ ವಿಧಾನಸಭೆಗೂ ಚುನಾವಣೆ

ಲೋಕಸಭೆಯ ಜತೆಗೆ ಒಡಿಶಾ, ಸಿಕ್ಕಿಂ, ಆಂಧ್ರ ಪ್ರದೇಶ ಹಾಗೂ ಅರುಣಾಚಲ ಪ್ರದೇಶದ ವಿಧಾನಸಭೆ ಚುನಾವಣೆಗೆ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸುವ ಸಾಧ್ಯತೆ ಇದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 2018ರ ನವೆಂಬರ್‌ನಿಂದ ವಿಧಾನಸಭೆ ಅಸ್ತಿತ್ವದಲ್ಲಿಲ್ಲ. ಆಯೋಗವು ವಿಧಾನಸಭೆ ಚುನಾವಣೆಯ ವೇಳಾಪಟ್ಟಿ ಪ್ರಕಟಿಸುತ್ತದೆಯೇ ಇಲ್ಲವೇ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಲೋಕಸಭೆ ಚುನಾವಣೆಯ ಸಿದ್ಧತೆಗಳನ್ನು ಆಯೋಗ ಪರಿಶೀಲಿಸಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಬಳಿಕ ಮೊದಲ ಬಾರಿಗೆ ಚುನಾವಣೆ ನಡೆಯಬೇಕಿದೆ. ಜನಾಂಗೀಯ ಹಿಂಸಾಚಾರದಲ್ಲಿ ನಲುಗಿದ ಮಣಿಪುರದಲ್ಲಿ ಆಯೋಗವು ಚುನಾವಣಾ ಪ್ರಕ್ರಿಯೆಯನ್ನು ಹೇಗೆ ನಡೆಸುತ್ತದೆ ಎಂಬುದರ ಬಗ್ಗೆಯೂ ಜನರ ದೃಷ್ಟಿ ನೆಟ್ಟಿದೆ.

2019ರ ಲೋಕಸಭೆ ಚುನಾವಣೆಗೆ ಆಯೋಗವು ಮಾರ್ಚ್ 10ರಂದು ವೇಳಾಪಟ್ಟಿ ಪ್ರಕಟಿಸಿತ್ತು. ಏಪ್ರಿಲ್ 11 ಹಾಗೂ ಮೇ 19ರ ನಡುವೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು. ಮೇ 23ರಂದು ಮತ ಎಣಿಕೆ ನಡೆಸಲಾಗಿತ್ತು. ಬಿಜೆಪಿ 303 ಸ್ಥಾನಗಳಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಿದ್ದರೆ, ಕಾಂಗ್ರೆಸ್ 52 ಸ್ಥಾನಗಳಿಗೆ ತೃಪ್ತಿ ಪಟ್ಟಿತ್ತು.

ಎಸ್‌ಬಿಐಗೆ ‘ಸುಪ್ರೀಂ’ ತರಾಟೆ

ಚುನಾವಣಾ ಬಾಂಡ್: ಗುರುತು ಸಂಖ್ಯೆ ನೀಡದ್ದಕ್ಕೆ ನೋಟಿಸ್

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿ ಅಪೂರ್ಣ ಮಾಹಿತಿ ನೀಡಿದ್ದಕ್ಕಾಗಿ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಬಾಂಡ್‌ಗಳಿಗೆ ಇರುವ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಎಸ್‌ಬಿಐ ಬಹಿರಂಗಪಡಿಸಿಲ್ಲ. ಈ ಸಂಖ್ಯೆಯನ್ನು ಬಹಿರಂಗಪಡಿಸಿದರೆ ಬಾಂಡ್‌ಗಳ ಖರೀದಿದಾರರು ಯಾರು ಮತ್ತು ಅವುಗಳನ್ನು ಯಾವ ಪಕ್ಷಕ್ಕೆ ನೀಡಲಾಗಿದೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಗುರುತಿನ ಸಂಖ್ಯೆಯನ್ನು ಬಹಿರಂಗಪಡಿಸುವುದು ಎಸ್‌ಬಿಐಯ ಕರ್ತವ್ಯವಾಗಿದೆ. ಹಾಗಿದ್ದರೂ ಬ್ಯಾಂಕ್ ಈ ಮಾಹಿತಿಯನ್ನು ನೀಡಿಲ್ಲ. ನೀಡದೇ ಇರಲು ಕಾರಣಗಳೇನು ಎಂಬುದನ್ನು ವಿವರಿಸಬೇಕು ಎಂದು ಕೋರ್ಟ್, ಎಸ್‌ಬಿಐಗೆ ನೋಟಿಸ್ ನೀಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠವು ಮುಂದಿನ ವಿಚಾರಣೆಯನ್ನು 18ಕ್ಕೆ ನಿಗದಿ ಮಾಡಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಬಿ.ಆರ್. ಗವಾಯಿ, ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರು ಈ ಪೀಠದ ಇತರ ಸದಸ್ಯರಾಗಿದ್ದಾರೆ.

ಎಸ್‌ಬಿಐ ಒದಗಿಸಿದ್ದ ವಿವರಗಳನ್ನು ಚುನಾವಣಾ ಆಯೋಗವು ಗುರುವಾರ ಬಹಿರಂಗಪಡಿಸಿದೆ. ಅದರ ಬೆನ್ನಿಗೇ ಈ ಪ್ರಕರಣದ ವಿಚಾರಣೆ ನಡೆಸುತ್ತಿರುವ ಪೀಠವು ಈ ಕುರಿತ ಸ್ಪಷ್ಟ ನಿರ್ದೇಶನ ನೀಡಿತು.

‘ಎಸ್‌ಬಿಐ ಅನ್ನು ಯಾರು ಪ್ರತಿನಿಧಿಸುತಿದ್ದೀರಿ? ಆದೇಶದಲ್ಲಿ ನಾವು ನಿರ್ದಿಷ್ಟವಾಗಿ ಬಾಂಡ್‌ಗಳ ಖರೀದಿದಾರರು, ಮೊತ್ತ, ಖರೀದಿಸಿದ ದಿನಾಂಕದ ವಿವರ ಬಹಿರಂಗಪಡಿಸಲು ನಿರ್ದೇಶಿಸಿದ್ದೆವು. ಆದರೆ, ಬಾಂಡ್‌ಗಳ ಗುರುತು ಸಂಖ್ಯೆ ಒದಗಿಸಿಲ್ಲ. ಇದನ್ನೂ ಒದಗಿಸಿ’ ಎಂದು ಮುಖ್ಯ ನ್ಯಾಯಮೂರ್ತಿ ಸ್ಪಷ್ಟವಾಗಿ ಆದೇಶಿಸಿದರು.

12ನೇ ಪುಟ ನೋಡಿ



ತನಿಖೆಗೆ ಒತ್ತಾಯ

ಸುಪ್ರೀಂ ಕೋರ್ಟ್‌ನಿಂದ ಬಿಜೆಪಿ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಯಬೇಕು. ಚುನಾವಣಾ ಬಾಂಡ್ ಯೋಜನೆಯಲ್ಲಿ ಬಾರಿ ಅವ್ಯವಹಾರ ನಡೆದಿದೆ. ಹಾಗಾಗಿ, ಬಿಜೆಪಿಯ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಬಾಂಡ್ ಮೂಲಕ ಕಂಪನಿಗಳಿಂದ ದೇಣಿಗೆ ಪಡೆಯಲು ಇ.ಡಿಯನ್ನು ಬಳಸಿಕೊಳ್ಳಲಾಗಿದೆ ಮತ್ತು ಹಣ ಕೊಟ್ಟವರಿಗೆ ಅನುಕೂಲಗಳನ್ನು ಮಾಡಿಕೊಡಲಾಗಿದೆ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತದೆ

ಸಿಪಿಎಂ

ಚುನಾವಣಾ ಬಾಂಡ್ ಎಂಬುದು ಸುಲಿಗೆ ಜಾಲ. ಇದಕ್ಕಿಂತ ದೊಡ್ಡ ದೇಶವಿರೋಧಿ ಚಟುವಟಿಕೆ ಇನ್ನೊಂದಿಲ್ಲ

ರಾಹುಲ್ ಗಾಂಧಿ
ಕಾಂಗ್ರೆಸ್ ಸಂಸದ

ಕಸ ವಿಲೇವಾರಿ: ಗ್ರಾಮಸ್ಥರಿಗೆ ತೊಂದರೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಾತನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೈಯಪ್ಪನಹಳ್ಳಿಯ ಸರ್ಕಾರಿ ಗೋಮಾಳದ ಕಲ್ಲುಕ್ವಾರಿ ಜಾಗದಲ್ಲಿ ಬಿಬಿಎಂಪಿಯವರು ನಗರದ ಕಸ ತಂದು ವಿಲೇವಾರಿ ಮಾಡುತ್ತಿದ್ದಾರೆ. ಇದರಿಂದ ಸುತ್ತಮುತ್ತಲ ಜನರಿಗೆ ತೀವ್ರ ತೊಂದರೆಯಾಗಿದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

'ಬೈಯಪ್ಪನಹಳ್ಳಿಯ ಸರ್ವೆ ನಂ.80ಕ್ಕೆ ಸೇರಿದ ಜಾಗದಲ್ಲಿ ನಗರದ ಬಿಬಿಎಂಪಿ ವ್ಯಾಪ್ತಿಯ ಕಸವನ್ನು ವಿಲೇವಾರಿ ಮಾಡುತ್ತಿರುವುದರ ಜೊತೆಗೆ ಈ ಜಾಗದಲ್ಲಿ ಕಸ ವಿಲೇವಾರಿ ಘಟಕ ಸ್ಥಾಪನೆ ಮಾಡಲು ಬಿಬಿಎಂಪಿ ಮುಂದಾಗಿದೆ. ಇದರಿಂದ ಬೈಯಪ್ಪನಹಳ್ಳಿ, ಶ್ರೀನಿವಾಸಪುರ, ಮಿಟ್ಟಿಗಾನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ನಿವಾಸಿಗಳು, ದುರ್ವಾಸನೆ ಮತ್ತು ಅಪಾಯಕಾರಿ ಹೊಗೆಯ ಸಮಸ್ಯೆ ಎದುರಿಸಬೇಕಾಗಿದೆ' ಎಂದು ಮುತ್ತುರಾಜ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕಲ್ಲುಕ್ವಾರಿ ಜಾಗದಲ್ಲಿ ಪ್ರತಿನಿತ್ಯ ನೂರಾರು ಲಾರಿಗಳಲ್ಲಿ ಕಸವನ್ನು ತಂದು ಸುರಿಯಲಾಗುತ್ತಿದೆ. ಕಳೆದ ವರ್ಷ ವ್ಯಾಪಕ ಪ್ರತಿಭಟನೆ ನಡೆಸಿದ್ದರಿಂದ ಈ ಭಾಗದಲ್ಲಿ ಕಸವನ್ನು ತಾತ್ಕಾಲಿಕವಾಗಿ ವಿಲೇವಾರಿ ಮಾಡದಂತೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. ಈಗ ಆದೇಶದಲ್ಲಿ ದಿನಾಂಕ ಬದಲಿಸಿಕೊಂಡು ಅಕ್ರಮವಾಗಿ ಕಸ ತಂದು ಸುರಿಯುವುದನ್ನು ಮುಂದುವರಿಸಿದ್ದಾರೆ. ತಹಶೀಲ್ದಾರ್ ಅವರ ಅನುಮತಿ ಇಲ್ಲದೆ ಕಸ ಸುರಿಯುತ್ತಿರುವುದು ನಿಯಮಬಾಹಿರವಾಗಿದೆ. ಕಸ ಸುರಿಯುವುದನ್ನು ತಕ್ಷಣ ಸ್ಥಗಿತಗೊಳಿಸಬೇಕು' ಎಂದು ಆಗ್ರಹಿಸಿದರು.

'ಪರಿಸರ ಜಲಸ್ನೇಹಿ' ಮೂಲಕ ಸಂಸ್ಕರಿಸಿದ ನೀರು ಲಭ್ಯ: ಜಲಮಂಡಳಿ

ಸಂಸ್ಕರಿಸಿದ ನೀರು ಬಳಸದಿದ್ದರೆ ಕಟ್ಟಡ ಪರವಾನಗಿ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕಟ್ಟಡ ನಿರ್ಮಾಣಕ್ಕೆ ಸಂಸ್ಕರಿಸಿದ ನೀರಿನ ಬಳಕೆ ಕಡ್ಡಾಯಗೊಳಿಸಲಾಗಿದ್ದು, ಇದನ್ನು ಉಲ್ಲಂಘಿಸಿದರೆ ನಿರಾಕ್ಷೇಪಣಾ ಪತ್ರ ಹಾಗೂ ಪರವಾನಗಿಯನ್ನು ರದ್ದು ಮಾಡಲಾಗುವುದು ಎಂದು ಜಲಮಂಡಳಿ ಎಚ್ಚರಿಸಿದೆ.

ಜಲಮಂಡಳಿ ಕಾಯ್ದೆಯಂತೆ ನಗರದಲ್ಲಿ ಕಟ್ಟಡ ನಿರ್ಮಾಣಕ್ಕೆ ಕಡ್ಡಾಯವಾಗಿ ಗುಣಮಟ್ಟ ದೃಢೀಕರಣವಾಗಿರುವ ಪರಿಸರ ಸ್ನೇಹಿ ಸಂಸ್ಕರಿಸಿದ ನೀರನ್ನು ಮಾತ್ರ ಬಳಸಬೇಕೆಂದು ಆದೇಶಿಸಲಾಗಿದೆ. ಅದಕ್ಕೆ ಪೂರಕವಾಗಿ, ಜಲಮಂಡಳಿ ವತಿಯಿಂದ 'ಪರಿಸರ ಜಲಸ್ನೇಹಿ' ವೆಬ್ ಆ್ಯಪ್ ಬಿಡುಗಡೆ ಮಾಡಲಾಗಿದ್ದು, ಈ ಮೂಲಕ ಸಂಸ್ಕರಿಸಿದ ನೀರನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಬೇಕು ಎಂದು ಜಲಮಂಡಳಿ ಅಧ್ಯಕ್ಷರು ಸಾರ್ವಜನಿಕರಿಗೆ ತಿಳಿಸಿದ್ದಾರೆ.

ಸ್ವಂತ ಕೊಳವೆಬಾವಿ ಸೇರಿದಂತೆ ಇತರೆ ಮೂಲದಿಂದ ನೀರನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳುವಂತಿಲ್ಲ. ಇದಕ್ಕೆ ನಿಷೇಧ ಹೇರಲಾಗಿದ್ದು, ಇದನ್ನು ಉಲ್ಲಂಘಿಸಿದರೆ, ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ನೀಡಿರುವ ನಿರಾಕ್ಷೇಪಣಾ ಪತ್ರವನ್ನು ರದ್ದುಗೊಳಿಸಲಾಗುತ್ತದೆ. ಕಟ್ಟಡ ನಿರ್ಮಾಣಕ್ಕೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲು ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

'ಪ್ರಥಮ ಹಂತದಲ್ಲಿ 20 ಸಾವಿರ ಚದರ ಅಡಿಗಿಂತ ಹೆಚ್ಚು ವಿಸ್ತೀರ್ಣದಲ್ಲಿ ಕಟ್ಟಡಗಳಿಗೆ ಈ ನಿಷೇಧವನ್ನು ಅನ್ವಯಿಸಲಾಗುತ್ತದೆ. ಈಗಿನಿಂದಲೇ ಇಂತಹ ಕಟ್ಟಡಗಳು ಅವರ ಕೊಳವೆಬಾವಿ ಸೇರಿದಂತೆ ಇತರೆ ನೀರನ್ನು ಬಳಸುವಂತಿಲ್ಲ. ಸಂಸ್ಕರಿಸಿದ ನೀರನ್ನು ಮಾತ್ರ ಬಳಸಬೇಕು. ಮುಂದಿನ ಹಂತಗಳಲ್ಲಿ ಎಲ್ಲ ವಿಸ್ತೀರ್ಣದ ಕಟ್ಟಡಗಳಿಗೂ ಈ ನಿಷೇಧ ಅನ್ವಯವಾಗಲಿದೆ' ಎಂದು ಜಲಮಂಡಳಿಯ ಅಧ್ಯಕ್ಷ ರಾಮ್ ಪ್ರಶಾಂತ್ ಮನೋಹರ್ ತಿಳಿಸಿದರು.

ಕಟ್ಟಡ ನಿರ್ಮಾಣಕ್ಕೆ ಯಾರಾದರೂ ಟ್ಯಾಂಕರ್, ಕೊಳವೆಬಾವಿ ನೀರು ಬಳಸುತ್ತಿದ್ದರೆ ನಾಗರಿಕರು 1916ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದಿದ್ದಾರೆ.

ನೀರು ಹರಿವು ನಿಯಂತ್ರಕಕ್ಕೆ ಸೂಚನೆ: ನೀರಿನ ಬಳಕೆಯನ್ನು ಕಡಿಮೆ ಮಾಡುವುದು ಅತಿ ಅವಶ್ಯಕವಾಗಿರುವುದರಿಂದ ನಲ್ಲಿಗಳಿಗೆ 'ನೀರು ಹರಿವು ನಿಯಂತ್ರಕ'ಗಳನ್ನು (ಫ್ಲೋ ರಿಸ್ಟ್ರಿಕ್ಟರ್) ಅಳವಡಿಸಿಕೊಳ್ಳಬೇಕು ಎಂದು ಜಲಮಂಡಳಿ ಅಧ್ಯಕ್ಷರು ಮನವಿ ಮಾಡಿದ್ದಾರೆ.

ಮಾಲ್, ವಾಣಿಜ್ಯ ಸಂಕೀರ್ಣ, ದೇವಸ್ಥಾನ, ಐಷಾರಾಮಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಸಾರ್ವಜನಿಕ ಪ್ರದೇಶಗಳ ಸ್ವಚ್ಛತೆಗಾಗಿ ನೀರು ಬಳಸುವ ನಲ್ಲಿಗಳಿಗೆ ಕಡ್ಡಾಯವಾಗಿ 'ನೀರು ಹರಿವು ನಿಯಂತ್ರಕ'ಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಶೇ 50ರಷ್ಟು ನೀರಿನ ಬಳಕೆ ಕಡಿಮೆಯಾಗಲಿದೆ ಎಂದಿದ್ದಾರೆ.

'ಅಲೆಮಾರಿ ಸಮುದಾಯದ ಅಭಿವೃದ್ಧಿಗೆ ಬದ್ಧ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಲೆಮಾರಿ ಸಮುದಾಯಗಳ ರಾಜ್ಯಮಟ್ಟದ ಬೃಹತ್ ಜಾಗೃತಿ ಸಮಾವೇಶ
- ಯೋಜನೆ ಸದ್ಬಳಕೆಗೆ ಸತೀಶ್ ಜಾರಕಿಹೊಳಿ ಸಲಹೆ

ಬೆಂಗಳೂರು: 'ಅಲೆಮಾರಿ ಸಮುದಾಯದ ಶ್ರೇಯೋಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ' ಎಂದು ಸಚಿವ ಸತೀಶ್ ಜಾರಕಿಹೊಳಿ ಭರವಸೆ ನೀಡಿದರು.

ನಗರದಲ್ಲಿ ಶುಕ್ರವಾರ ಕರ್ನಾಟಕ ಎಸ್‌ಸಿ, ಎಸ್‌ಟಿ ಅಲೆಮಾರಿ, ವಿಮುಕ್ತ ಬುಡಕಟ್ಟು ಸಂಘಟನೆಗಳ ಒಕ್ಕೂಟದಿಂದ ಆಯೋಜಿಸಿದ್ದ ಅಲೆಮಾರಿ ಸಮುದಾಯಗಳ ರಾಜ್ಯಮಟ್ಟದ ಬೃಹತ್ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಸರ್ಕಾರ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಸದಾ ಶ್ರಮಿಸುತ್ತದೆ. ಸರ್ಕಾರದ ಗ್ಯಾರಂಟಿ ಮತ್ತು ಜನಪರ ಯೋಜನೆಗಳನ್ನು ಶೋಷಿತ ಸಮುದಾಯ ಸದ್ಬಳಕೆ ಮಾಡಿಕೊಳ್ಳಬೇಕು' ಎಂದರು.



ನಗರದಲ್ಲಿ ಶುಕ್ರವಾರ ನಡೆದ ಅಲೆಮಾರಿ ಸಮುದಾಯಗಳ ರಾಜ್ಯಮಟ್ಟದ ಬೃಹತ್ ಜಾಗೃತಿ ಸಮಾವೇಶದಲ್ಲಿ (ಎಡದಿಂದ) ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನ್‌ದಾಸ್, ಸಚಿವರಾದ ಎಚ್‌.ಕೆ.ಪಾಟೀಲ ಹಾಗೂ ಸತೀಶ್ ಜಾರಕಿಹೊಳಿ ಪಾಲ್ಗೊಂಡಿದ್ದರು.

ಸಮಾವೇಶದಲ್ಲಿ ಅಲೆಮಾರಿಗಳಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಮುಂದುವರಿಯಲು ಜಾತಿ ಪ್ರಮಾಣ ಪತ್ರ ಸಮಸ್ಯೆ ನಿವಾರಿಸಬೇಕು. ಬಜೆಟ್‌ನಲ್ಲಿ ಘೋಷಿಸಿರುವ 'ಅಲೆಮಾರಿ ಆಯೋಗ'ವನ್ನು ಕೂಡಲೇ ಅನುಷ್ಠಾನಕ್ಕೆ ತರಬೇಕು. ಎಸ್‌ಸಿ, ಎಸ್‌ಟಿ, ಒಬಿಸಿ ಅಲೆಮಾರಿ ಸಮುದಾಯಗಳು ಒಳಗೊಂಡಂತೆ 'ಶಾಶ್ವತ ಆಯೋಗ' ರಚನೆ ಮಾಡಬೇಕು' ಎಂಬ ನಿರ್ಣಯ ಕೈಗೊಳ್ಳಲಾಯಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್, ಸಂಘದ ಅಧ್ಯಕ್ಷ ಆದರ್ಶ ಯಲ್ಲಪ್ಪ, ಎಸ್‌ಸಿ–ಎಸ್‌ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಜಿ.ಪಲ್ಲವಿ ಪಾಲ್ಗೊಂಡಿದ್ದರು.

ಪಿಎಚ್‌.ಡಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗ ಮತ್ತು ಸಂಯೋಜಿತ ಸಂಶೋಧನಾ ಕೇಂದ್ರಗಳಲ್ಲಿ ಪಿಎಚ್‌.ಡಿ(ಸಂಶೋಧನೆ) ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.


ವಿದ್ಯಾರ್ಥಿಗಳು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಪ್ರವೇಶಕ್ಕಾಗಿ ಅಗತ್ಯವಾದ ವಿದ್ಯಾರ್ಹತೆ, ಪ್ರವೇಶ ಪರೀಕ್ಷೆಯ ವಿವರಗಳು, ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಹೊಂದುವ ವಿವರಗಳು, ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಮತ್ತಿತರ ವಿವರಗಳನ್ನು ವಿಶ್ವವಿದ್ಯಾಲಯದ ಜಾಲತಾಣ www.bcu.ac.in ದಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು ಮಾ.20 ಕೊನೆದಿನ.

ಪ್ರವೇಶ ಪರೀಕ್ಷೆಯ ದಿನಾಂಕವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಮುರಳೀಧರಗೆ 'ಕಸಾಪ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಮಾಹಿತಿ ಹಕ್ಕು ತಜ್ಞ ಜೆ.ಎಂ.ರಾಜಶೇಖರ ದತ್ತಿ' ಪ್ರಶಸ್ತಿಗೆ ಲೇಖಕ ವೈ.ಜಿ.ಮುರಳೀಧರ ಆಯ್ಕೆಯಾಗಿದ್ದಾರೆ.



ವೈ.ಜಿ. ಮುರಳೀಧರ

ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಮಾಹಿತಿ ಹಕ್ಕು ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಪಿ.ಮಹೇಶ್ ಅವರು ಈ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ಮಾಹಿತಿ ಹಕ್ಕು ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.

ಸಾಹಿತಿ, ಹವ್ಯಾಸಿ ಪತ್ರಕರ್ತ ಜೆ.ಎಂ.ರಾಜಶೇಖರ ಅವರು 1,500ಕ್ಕೂ ಹೆಚ್ಚು ಮಾಹಿತಿ ಹಕ್ಕು ಅರ್ಜಿಗಳನ್ನು ಹಾಕಿ, ಆಡಳಿತದ ಸಮರ್ಪಕ ನಿರ್ವಹಣೆಗೆ ಕಾರಣರಾಗಿದ್ದರು. ಅಲ್ಲದೆ, ಮಾಹಿತಿ ಹಕ್ಕಿನ ಕುರಿತು ಅನೇಕ ಕಡೆ ಉಪನ್ಯಾಸಗಳನ್ನು ನೀಡಿ ಜನಜಾಗೃತಿ ಉಂಟು ಮಾಡಿದ್ದರು ಎಂದು ಪರಿಷತ್ತಿನ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

‘ಕಾಲೇಜು ಹಂತದಲ್ಲೇ ಸಂಶೋಧನೆಗೆ ಪ್ರೋತ್ಸಾಹಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೋಧಕರು ಕಾಲೇಜು ಹಂತದಲ್ಲೇ ವಿದ್ಯಾರ್ಥಿಗಳನ್ನು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು’ ಎಂದು ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ರಾಜ್ ಸಿಂಗ್ ಹೇಳಿದರು.

ನಗರದ ಬನಶಂಕರಿಯಲ್ಲಿರುವ ಬಿಎನ್ಎಂಐಟಿನಲ್ಲಿ ‘ಬೌದ್ಧಿಕ ಆಸ್ತಿ ಹಕ್ಕು’ ವಿಷಯ ಕುರಿತ ಆಯೋಜಿಸಿದ್ದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು ನೀಡುತ್ತಿಲ್ಲ. ಅಮೆರಿಕದಲ್ಲಿ 10 ಲಕ್ಷ ಜನರಲ್ಲಿ 4,452 ಹಾಗೂ ಚೀನಾದಲ್ಲಿ 6,500 ಸಂಶೋಧಕರಿದ್ದಾರೆ. ಆದರೆ, ಭಾರತದಲ್ಲಿರುವುದು 250 ಮಾತ್ರ. ನಮ್ಮ ದೇಶದಲ್ಲಿ ಸಂಶೋಧನಾ ಕ್ಷೇತ್ರಕ್ಕೆ ನೀಡುವ ಪ್ರಾಮುಖ್ಯವನ್ನು ಇದು ಎತ್ತಿ ತೋರಿಸುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

‘ಸಂಶೋಧನೆಯ ಜೊತೆಗೆ, ವಿದ್ಯಾರ್ಥಿಗಳಿಗೆ ಕಾಲೇಜು ಮ್ಯಾಗಜೀನ್, ಗೋಡೆ ಬರೆಹಗಳಲ್ಲಿ ಲೇಖನ ಬರೆಯಲು ಪ್ರೋತ್ಸಾಹ ನೀಡಬೇಕು. ಅವರು ನವೋದ್ಯಮದ ಕಡೆ ಹೆಚ್ಚು ಗಮನಹರಿಸುವಂತೆ ಉತ್ತೇಜಿಸಬೇಕು’ ಎಂದು ಕಿವಿಮಾತು ಹೇಳಿದರು.

ಬಿಎನ್ಎಂಐಟಿ ಚಾರಿಟಿ ಅಧ್ಯಕ್ಷ ನಾರಾಯಣರಾವ್ ಆರ್. ಮಾನೆ ಮಾತನಾಡಿ, ‘ಸಂಶೋಧನೆಗಳು ಮತ್ತು ಆವಿಷ್ಕಾರಗಳು ಸಾಧನೆಯ ಕೀಲಿ ಕೈ ಇದ್ದಂತೆ. ನಮ್ಮ ದೇಶದಲ್ಲಿ ಸಂಶೋಧನೆಗಳು ಶೇ 50 ರಿಂದ 70 ರಷ್ಟು ಹೆಚ್ಚು ಮಾಡಬೇಕು’ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿಗ್ರೊ ಪ್ರೈ.ಲಿ.ನ ಸಂಸ್ಥಾಪಕ ಡಾ. ರಮೇಶ್ ಚಂದ್ರ ಪಾಂಡ, ಬಿಎನ್ಎಂ ಚಾರಿಟಿ ಟ್ರಸ್ಟಿಗಳಾದ ಈಶ್ವರ್ ಎನ್.ಮಾನೆ, ಕಾಲೇಜಿನ ನಿರ್ದೇಶಕ ಟಿ.ಜೆ ರಾಮಮೂರ್ತಿ, ಕಾಲೇಜಿನ ಹೆಚ್ಚುವರಿ ನಿರ್ದೇಶಕ ಎಸ್.ವೈ. ಕುಲಕರ್ಣಿ, ಕಾಲೇಜಿನ ಪ್ರಾಚಾರ್ಯ ಜಿ.ಎನ್.ಕೃಷ್ಣಮೂರ್ತಿ ಮತ್ತಿತರರು ಇದ್ದರು.

ಸಂವಿಧಾನ ಜಾರಿ ಜನಾಂದೋಲನ ಇದೇ 18ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಬಿ (ಆರ್‌ಪಿಐ) ಪಕ್ಷ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಹಯೋಗ ದಲ್ಲಿ ಇದೇ 18ರಿಂದ ರಾಜ್ಯ ದಾದ್ಯಂತ ‘ಸಂವಿಧಾನ ಜಾರಿ ಜನಾಂದೋಲನ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು’ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎನ್. ಮೂರ್ತಿ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಹಾಗೂ ಬಿಜೆಪಿ ದೇಶದ ಸಂವಿಧಾನದ ಆಶಯ ಗಳನ್ನು ಜಾರಿ ಮಾಡುವಲ್ಲಿ ಸಂಪೂರ್ಣ ವಿಫಲವಾಗಿವೆ. ಈ ಎರಡು ಪಕ್ಷಗಳ ಆಡಳಿತದ ಅವಧಿಯಲ್ಲಿ ದೇಶದಲ್ಲಿ ಕೋಮು ವಾದ, ಜಾತಿವಾದ, ಸ್ವಜನ ಪಕ್ಷಪಾತ, ವಂಶಾಡಳಿತ ಹಾಗೂ ಭ್ರಷ್ಟಾಚಾರದಂತಹ ಸಮಸ್ಯೆಗಳು ತಾಂಡವವಾಡುತ್ತಿವೆ. ಆದ್ದರಿಂದ, ಸಂವಿಧಾನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು’ ಎಂದು ತಿಳಿಸಿದರು.

‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿ ಆರ್‌ಪಿಐ–ಬಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಲಿ ದ್ದಾರೆ. ಅಭ್ಯರ್ಥಿಗಳ ಪಟ್ಟಿಯನ್ನು ಕೆಲವೇ ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು’ ಎಂದು ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮುಳ್ಳುಗಳ ಸಂಖ್ಯೆ ಬಹಳಷ್ಟಿದೆ ಎಂದು ಒಂಟಿ ಹೂವು ಅಸೂಯೆಪಡಬೇಕಾದ ಅಗತ್ಯವಿಲ್ಲ.

-ರವೀಂದ್ರನಾಥ ಟ್ಯಾಗೋರ್

ಎಂಎಸ್‌ಪಿ: ಧಾನ್ಯ ಖರೀದಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಅಗತ್ಯ

ಕೃಷಿ ಉತ್ಪನ್ನಗಳ ದರ ಕುಸಿತದಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ತಪ್ಪಿಸಲು ಸರ್ಕಾರವೇ ನೇರವಾಗಿ ಮಾರುಕಟ್ಟೆ ಮಧ್ಯಪ್ರವೇಶ ಮಾಡುವುದಕ್ಕಾಗಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆ ಜಾರಿಯಲ್ಲಿದೆ. ಕೇಂದ್ರ ಸರ್ಕಾರ ಈ ಯೋಜನೆಯಡಿ ಕೃಷಿ ಉತ್ಪನ್ನಗಳ ಖರೀದಿಯ ಪೂರ್ಣ ವೆಚ್ಚವನ್ನು ಭರಿಸುತ್ತಿದ್ದು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧೀನ ಸಂಸ್ಥೆಗಳು ಎಂಎಸ್‌ಪಿ ಯೋಜನೆಯಡಿ ಖರೀದಿ ಪ್ರಕ್ರಿಯೆಯನ್ನು ನಿರ್ವಹಿಸುತ್ತಿವೆ. ರಾಜ್ಯದಲ್ಲಿ ಪ್ರತಿವರ್ಷ ಭತ್ತ, ರಾಗಿ ಮತ್ತು ಬಿಳಿ ಜೋಳವನ್ನು ಎಂಎಸ್‌ಪಿ ಯೋಜನೆಯಡಿ ಖರೀದಿಸಲಾಗುತ್ತಿದೆ. ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ 2.5 ಲಕ್ಷ ಟನ್ ಭತ್ತ, 5.99 ಲಕ್ಷ ಟನ್ ರಾಗಿ ಮತ್ತು 3 ಲಕ್ಷ ಟನ್ ಬಿಳಿ ಜೋಳವನ್ನು ಎಂಎಸ್‌ಪಿ ಯೋಜನೆಯಡಿ ಖರೀದಿಸುವ ನಿರ್ಧಾರವನ್ನು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯ ಮಾಡಿದೆ. ಇದಕ್ಕಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳವನ್ನು ಖರೀದಿ ಏಜೆನ್ಸಿಗಳನ್ನಾಗಿ ನೇಮಿಸಲಾಗಿದೆ. ಧಾನ್ಯ ಖರೀದಿಗೆ ಈ ಮೂರೂ ಸಂಸ್ಥೆಗಳಿಗೆ ನವೆಂಬರ್ ತಿಂಗಳಿನಲ್ಲೇ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ, ಎಂಎಸ್‌ಪಿ ಯೋಜನೆ ಅನುಷ್ಠಾನಕ್ಕೆ ಸಕಾಲದಲ್ಲಿ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರದ ಅಧಿಕಾರಿಗಳು ನಿರಾಸಕ್ತಿ ತೋರಿರುವುದರಿಂದ ಈಗ ಸಮಸ್ಯೆ ಸೃಷ್ಟಿಯಾಗಿದೆ. 20 ದಿನಗಳಲ್ಲಿ ತರಾತುರಿಯಲ್ಲಿ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಾದ ಒತ್ತಡದ ಸ್ಥಿತಿ ಎದುರಾಗಿದೆ.



> ರಾಜ್ಯ ಸರ್ಕಾರವು ಈಗ ಆಗಿರುವ ಲೋಪಗಳನ್ನು ಸರಿಪಡಿಸಿಕೊಳ್ಳುವುದರ ಜತೆಯಲ್ಲೇ ಖರೀದಿ ಪ್ರಕ್ರಿಯೆಯ ಅವಧಿ ವಿಸ್ತರಣೆಗೆ ತಡ ಮಾಡದೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು

ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ 2023ರ ಡಿಸೆಂಬರ್ ತಿಂಗಳಲ್ಲೇ ರೈತರ ನೋಂದಣಿ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲಾಗಿತ್ತು. ಈ ವರ್ಷದ ಜನವರಿ 1ರಿಂದ ಆಹಾರಧಾನ್ಯಗಳ ಖರೀದಿ ಆರಂಭ ಆಗಬೇಕಿತ್ತು. ಎರಡು ತಿಂಗಳು ಹತ್ತು ದಿನಗಳ ಕಾಲ ಖರೀದಿಯನ್ನೇ ಆರಂಭಿಸದೆ ಕಾಲಹರಣ ಮಾಡಿದ್ದಾರೆ. ಮಾರ್ಚ್ 31ಕ್ಕೆ ಖರೀದಿಯ ಗಡುವು ಮುಗಿಯಲಿದ್ದು, ನೋಂದಾಯಿಸಿಕೊಂಡಿರುವ 1.73 ಲಕ್ಷ ರೈತರಿಂದ ಈ ಗಡುವಿನೊಳಗೆ ಆಹಾರಧಾನ್ಯಗಳನ್ನು ಖರೀದಿಸಬೇಕಿದೆ. ಖರೀದಿ ಕೇಂದ್ರಗಳು ಮತ್ತು ಸಿಬ್ಬಂದಿ ಲಭ್ಯವಿದ್ದಾಗ್ಯೂ ಆಹಾರಧಾನ್ಯಗಳ ಸಾಗಾಣಿಕೆ ವಾಹನಗಳ ಮೇಲೆ ನಿಗಾ ಇರಿಸಲು ಹೊಸ ತಂತ್ರಾಂಶ ಬಳಕೆಯ ಕಾರಣವನ್ನು ಮುಂದಿಟ್ಟುಕೊಂಡು ಈ ರೀತಿ ವಿಳಂಬ ಮಾಡಿರುವುದು ಸರಿಯಾದ ಕ್ರಮವಲ್ಲ. ಎಂಎಸ್‌ಪಿ ಯೋಜನೆಯಡಿ ಆಹಾರಧಾನ್ಯ ಖರೀದಿಯಂತಹ ರೈತರ ಪರವಾದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತಾಂತ್ರಿಕ ನೆಪಗಳನ್ನು ಮುಂದಿಟ್ಟುಕೊಂಡು ವಿಳಂಬ ಮಾಡುವುದು ಬೆಳೆಗಾರರಿಗೆ ನ್ಯಾಯ ನಿರಾಕರಿಸುವಂತಹ ಧೋರಣೆಗೆ ಸಮನಾದುದು. ರಾಜ್ಯದಲ್ಲಿ ಎಂಎಸ್‌ಪಿ ಯೋಜನೆಯಡಿ ಕೃಷಿ ಉತ್ಪನ್ನಗಳ ಖರೀದಿ ಸುಸೂತ್ರವಾಗಿ ನಡೆದ ನಿದರ್ಶನಗಳೇ ವಿರಳ. ಕೆಲವು ವರ್ಷಗಳಿಂದ ಈಚೆಗೆ ದಲ್ಲಾಳಿಗಳು, ವರ್ತಕರು ರೈತರ ಹೆಸರಿನಲ್ಲಿ ಎಂಎಸ್‌ಪಿ ಯೋಜನೆಯನ್ನು ದುರುಪಯೋಗ ಮಾಡಿಕೊಂಡ ಉದಾಹರಣೆಗಳಿವೆ. ಖರೀದಿ ಕೇಂದ್ರಗಳಲ್ಲಿ ಸರಿಯಾದ ಸೌಕರ್ಯ ಒದಗಿಸದಿರುವುದು, ತೂಕದಲ್ಲಿ ಮೋಸ, ಆಹಾರಧಾನ್ಯಗಳ ಸಾಗಣೆಯನ್ನು ರೈತರಿಂದಲೇ ಮಾಡಿಸುವುದು, ಖರೀದಿ ವೇಳೆ ರೈತರಿಂದ ಲಂಚ ವಸೂಲಿ ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ದಲ್ಲಾಳಿಗಳ ಕೂಟ ರೈತರನ್ನು ಶೋಷಿಸುತ್ತಿರುವ ಆರೋಪಗಳು ಪ್ರತಿವರ್ಷ ಕೇಳಿಬರುತ್ತವೆ. ಕೊಬ್ಬರಿ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ತೆಂಗು ಬೆಳೆಗಾರರ ನೆರವಿಗಾಗಿ ಎಂಎಸ್‌ಪಿ ಯೋಜನೆಯಡಿ ಕೊಬ್ಬರಿ ಖರೀದಿಗೆ ಕಳೆದ ತಿಂಗಳು ಆರಂಭಿಸಿದ ಪ್ರಕ್ರಿಯೆಯಲ್ಲಿ ನಡೆದಿರುವ ಅವ್ಯವಹಾರಗಳು ಇದಕ್ಕೆ ಇತ್ತೀಚಿನ ನಿದರ್ಶನ.

ಗಡುವು ಮುಗಿಯುವ ಸಮಯ ಸಮೀಪಿಸಿರುವ ಈ ಹಂತದಲ್ಲಿ ಖರೀದಿ ಪ್ರಕ್ರಿಯೆಗೆ ತರಾತುರಿಯಲ್ಲಿ ಚಾಲನೆ ನೀಡಲಾಗಿದೆ. ಎಂಎಸ್‌ಪಿ ಯೋಜನೆ ಅನುಷ್ಠಾನದಲ್ಲಿ ಪ್ರತಿವರ್ಷ ಸಮಸ್ಯೆಗಳು ಸೃಷ್ಟಿಯಾಗುತ್ತಿರುವುದು ನಮ್ಮ ಆಡಳಿತ ವ್ಯವಸ್ಥೆಯು ರೈತಸ್ನೇಹಿಯಾಗಿ ವರ್ತಿಸುತ್ತಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಬಾರಿ ಆಹಾರಧಾನ್ಯಗಳ ಖರೀದಿಯಲ್ಲಿ ಇಷ್ಟೊಂದು ದೀರ್ಘಕಾಲದ ವಿಳಂಬ ಮಾಡಿರುವುದಕ್ಕೆ ಖರೀದಿ ಏಜೆನ್ಸಿಗಳು, ಆಹಾರ ಇಲಾಖೆಯ ಅಧಿಕಾರಿಗಳು ಹೊಣೆಗಾರರು. ವಿಳಂಬದ ಪರಿಣಾಮವಾಗಿ ಈಗ ಖರೀದಿ ಕೇಂದ್ರಗಳಲ್ಲಿ ನೂಕುನುಗ್ಗಲು ಸೃಷ್ಟಿಯಾಗುವ ಸಾಧ್ಯತೆಯೂ ಇದೆ. ನಿಗದಿಯಂತೆ ಕೇಂದ್ರ ಸರ್ಕಾರವು ಮಾರ್ಚ್ 31ಕ್ಕೆ ಖರೀದಿ ಪ್ರಕ್ರಿಯೆಯನ್ನು ಅಂತ್ಯಗೊಳಿಸಿದರೆ ನೋಂದಾಯಿತ ರೈತರಲ್ಲಿ ಹೆಚ್ಚಿನವರು ತಮ್ಮ ಆಹಾರಧಾನ್ಯಗಳನ್ನು ಎಂಎಸ್‌ಪಿ ಯೋಜನೆಯಡಿ ಮಾರಾಟ ಮಾಡುವ ಅವಕಾಶದಿಂದ ವಂಚಿತರಾಗಬಹುದು. ಈಗ ಆಗಿರುವ ಲೋಪಗಳನ್ನು ಸರಿಪಡಿಸಿಕೊಳ್ಳುವುದರ ಜತೆಯಲ್ಲೇ ಖರೀದಿ ಪ್ರಕ್ರಿಯೆಯ ಅವಧಿ ವಿಸ್ತರಣೆಗೆ ರಾಜ್ಯ ಸರ್ಕಾರವು ತಡ ಮಾಡದೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು. ಕೇಂದ್ರ ಸರ್ಕಾರದ ಮನವೊಲಿಸಿ, ಅನುಮತಿಯನ್ನೂ ಪಡೆಯಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ, ಎಂಎಸ್‌ಪಿ ಯೋಜನೆಯಡಿ ಕೃಷಿ ಉತ್ಪನ್ನಗಳ ಖರೀದಿ ಪ್ರಕ್ರಿಯೆಯಲ್ಲಿ ಪದೇ ಪದೇ ಸಮಸ್ಯೆಗಳು ಸೃಷ್ಟಿಯಾಗುವುದನ್ನು ತಪ್ಪಿಸಲು ಶಾಶ್ವತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಖರೀದಿ ವಿಳಂಬ, ಅವ್ಯವಹಾರ, ರೈತರ ಶೋಷಣೆಯಂತಹ ಪ್ರಕರಣಗಳಲ್ಲಿ ಅಧಿಕಾರಿಗಳು, ಸಿಬ್ಬಂದಿಯನ್ನು ಹೊಣೆಗಾರರನ್ನಾಗಿ ಮಾಡಿದರೆ ಮಾತ್ರ ಸುಧಾರಣೆ ನಿರೀಕ್ಷಿಸಬಹುದು.

ನೆಲೆ ವಿಸ್ತರಣೆಗೆ ಬಿಜೆಪಿ ಅಡ್ಡಮಾರ್ಗ, ಭ್ರಷ್ಟರ ಪರಿಶುದ್ಧಿಗೆ ಇದೆ 'ವಾಷಿಂಗ್ ಮಷೀನ್'

ದಳಕ್ಕೆ ಮುಳುವಾಗಲಿದೆಯೇ ಕಮಲದ ಸಖ್ಯ?



ಗತಿಬಿಂಬ

ವೈ.ಗ.ಜಗದೀಶ್

ಸರಿಯಾಗಿ ಹತ್ತು ವರ್ಷದ ಹಿಂದಿನ ಮಾತು. ದೇಶದಾದ್ಯಂತ ಚುನಾವಣೆಯ ಕಾವು ಈಗಿನದಕ್ಕಿಂತ ಜೋರಾಗಿಯೇ ಇತ್ತು. ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು ಪ್ರಧಾನಿ ಪಟ್ಟಕ್ಕೇರುವ ಸೂಚನೆಯೂ ಇತ್ತು. ಆ ಹೊತ್ತಿನಲ್ಲಿ ಮಾಧ್ಯಮದವರ ಜತೆ ಮಾತನಾಡಿದ್ದ ಎಚ್.ಡಿ. ದೇವೇಗೌಡ, 'ಬಿಜೆಪಿ 272ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವುದು ಸಾಧ್ಯವೇ ಇಲ್ಲ. ಹಾಗೊಂದು ವೇಳೆ ಗೆದ್ದು ಮೋದಿ ಪ್ರಧಾನಿಯಾದರೆ ದೇಶವನ್ನೇ ತೊರೆಯುತ್ತೇನೆ' ಎಂದು ವೀರಾವೇಶದಿಂದ ಅಬ್ಬರಿಸಿದ್ದರು. 'ಮೋದಿಯವರು ದೈವಾಂಶ ಸಂಭೂತ' ಎಂದು 2024ರಲ್ಲಿ ದೇವೇಗೌಡರು ಹೇಳುತ್ತಿದ್ದಾರೆ.

ಅದಕ್ಕಿಂತ 10 ವರ್ಷ ಹಿಂದೆ ಹೋಗೋಣ; 2004ರಲ್ಲಿ ಧರ್ಮಸಿಂಗ್ ನೇತೃತ್ವದಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಿತ್ತು. 20 ತಿಂಗಳು ಕಳೆಯುವಷ್ಟರಲ್ಲೇ ಮೈತ್ರಿ ಬಿರುಕುಬಿಟ್ಟಿತು. ಜೆಡಿಎಸ್‌ನಲ್ಲಿದ್ದ ಸಿದ್ದರಾಮಯ್ಯ ಆಗ ಉಪಮುಖ್ಯಮಂತ್ರಿ ಆಗಿದ್ದರು. ಅವರನ್ನು ಪಕ್ಷದಿಂದ ಹೊರಗಟ್ಟುವ ಯತ್ನ ಜೆಡಿಎಸ್‌ನಲ್ಲಿ ಶುರುವಾಗಿತ್ತು. ಆಗಿನ್ನೂ ಪ್ರವರ್ಧಮಾನಕ್ಕೆ ಬರುತ್ತಿದ್ದ ಎಚ್.ಡಿ.ಕುಮಾರಸ್ವಾಮಿ, ತಮ್ಮದೇ ರಾಜಕೀಯ ಪರ್ವಕ್ಕೆ ಅಣಿಯಾಗುತ್ತಿದ್ದರು. ಈ ಸಂಕ್ರಮಣ ಕಾಲದಲ್ಲಿ, ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದ ಬಿ.ಎಸ್.ಯಡಿಯೂರಪ್ಪ 'ಹೇಗಾದರೂ ಸಚಿವರನ್ನಾಗಿ ಮಾಡಿ, ಪಕ್ಷ ಬಿಟ್ಟುಬರುವೆ' ಎಂದು ಹೇಳಿ ಕೊಂಡಿದ್ದರಂತೆ. ಈ ಗುಟ್ಟನ್ನು ಕುಮಾರಸ್ವಾಮಿ ಅನೇಕ ಬಾರಿ ಹೇಳಿದ್ದುಂಟು. ಅದಾದ ಬಳಿಕ ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂತು. ಯಡಿಯೂರಪ್ಪ ಉಪಮುಖ್ಯಮಂತ್ರಿಯೂ ಆದರು. ಆನಂತರ ವಿಶ್ವಾಸದ್ರೋಹದ ಮಾತುಗಳೆಲ್ಲ ಆಗಿಹೋದವು. ಅಂದು ಕುಮಾರಸ್ವಾಮಿ ಎದುರು ಯಡಿಯೂರಪ್ಪ ಅಲವತ್ತುಕೊಂಡಿದ್ದರು. ಈಗ ಲೋಕಸಭೆ ಚುನಾವಣೆಯ ಒಂದು ಹೆಚ್ಚುವರಿ ಕ್ಷೇತ್ರಕ್ಕಾಗಿ ಯಡಿಯೂರಪ್ಪನವರ ಬಳಿಯೇ ಅಂಗಲಾಚುವ ಸ್ಥಿತಿ ಕುಮಾರಸ್ವಾಮಿ ಅವರಿಗೆ ಬಂದೊದಗಿದೆ.

ಅಸ್ತಿತ್ವದ ಆತಂಕ ಹುಟ್ಟಿಸಿಯೋ ಆದಾಯ ತೆರಿಗೆ, ಸಿಬಿಐ, ಇ.ಡಿ. ಎಂಬ ಈಟಿ, ಭರ್ಜಿ, ಚೂರಿಗಳಿಂದ ಹೆದರಿಸಿಯೋ ಪ್ರಾದೇಶಿಕ ಪಕ್ಷಗಳನ್ನು ಹೀಗೆ ನಡು ಬಗ್ಗಿಸುವಂತೆ ಮಾಡುವುದು ಬಿಜೆಪಿಗೆ ಕರಗತವಾಗಿದೆ. ಬೆದರಿಕೆಗೆ ಮಣಿಯದ ಕಡೆ ಒಡೆದಾಳುವ ವಿಧಾನ ಅಥವಾ 'ಆಪರೇಷನ್ ಕಮಲ'ದ ಮೂಲಕ ಎದುರಾಳಿ ಬಲವನ್ನು ಕುಗ್ಗಿಸಿ ತಮ್ಮ ಪಕ್ಷದ ಬಾವುಟವನ್ನು ದೇಶದಗಲ ವಿಸ್ತರಿಸುವ ತಂತ್ರವನ್ನು ಬಳಸಿದೆ, ಬಳಸುತ್ತಲೇ ಇದೆ. ತಮಿಳುನಾಡಿನಲ್ಲಿ ಎಐಎಡಿಎಂಕೆ, ಡಿಎಂಕೆ ಹೀಗೆ ಎರಡೂ ಪಕ್ಷಗಳ ಸಖ್ಯವನ್ನು ಆಗೀಗ ಬದಲಾಯಿಸುತ್ತಾ ಅಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸಿತು. ಹಾಗಿದ್ದರೂ ತಮಿಳುನಾಡು, ಕೇರಳ, ತೆಲಂಗಾಣ, ಒಡಿಶಾ, ಆಂಧ್ರಪ್ರದೇಶದಂತಹ ರಾಜ್ಯಗಳಲ್ಲಿ ಕೆಲವೆಡೆ ಇನ್ನೂ ಕಾಲೂರಲು ಆಗಿಲ್ಲ, ಮತ್ತೆ ಕೆಲವೆಡೆ ನೆಲೆ ಗಟ್ಟಿಗೊಳಿಸಿಕೊಳ್ಳಲು ಆಗಿಲ್ಲ.

ಮಹಾರಾಷ್ಟ್ರದಲ್ಲಿ ಶಿವಸೇನಾ- ಕಾಂಗ್ರೆಸ್-ಎನ್‌ಸಿಪಿಯ ಮೈತ್ರಿ ಸರ್ಕಾರವಿತ್ತು. ಏಕನಾಥ ಶಿಂದೆ ಅವರನ್ನು ಬಳಸಿಕೊಂಡು ಶಿವಸೇನಾವನ್ನು ಛಿದ್ರಗೊಳಿಸಿದ ಬಿಜೆಪಿ, ಅಲ್ಲೀಗ ಮೈತ್ರಿ ಸರ್ಕಾರದ ಭಾಗವಾಗಿದೆ. ಕಡು ಭ್ರಷ್ಟರೆಂದೇ ಬಿಜೆಪಿ ಆಪಾದಿಸುತ್ತಿದ್ದ ಅಜಿತ್ ಪವಾರ್ ಅವರನ್ನು ಬಳಸಿಕೊಂಡು ಎನ್‌ಸಿಪಿಯನ್ನು ಒಡೆದಿದೆ. ಬಿಜೆಪಿ ಜತೆಗೆ ಕೈಜೋಡಿಸುತ್ತಿದ್ದಂತೆ, ಶಿಂದೆ, ಅಜಿತ್ ಪವಾರ್ ಅವರಿಗೆ ಮೆತ್ತಿದ್ದ ಎಲ್ಲ ಕಳಂಕವೂ ಕಳಚಿತು.

ಆಂಧ್ರಪ್ರದೇಶದಲ್ಲಿ ತನ್ನ ಅಸ್ತಿತ್ವಕ್ಕಾಗಿ ಟಿಡಿಪಿಯ ಚಂದ್ರಬಾಬು ನಾಯ್ಡು ಅವರ ಹೆಗಲನ್ನು ಆಶ್ರಯಿಸಿದೆ. ನಾಯ್ಡು ಅವರಿಗೂ ಇದು ಅನಿವಾರ್ಯವಾದಂತಿದೆ. ಹರಿಯಾಣದಲ್ಲಿ ಜನನಾಯಕ್ ಜನತಾ ಪಾರ್ಟಿ ಸಖ್ಯ ಈಗ ಬೇಡವಾದಂತಿದೆ. ಪಂಜಾಬ್‌ನಲ್ಲಿ ಶಿರೋಮಣಿ ಅಕಾಲಿ ದಳದ ನೆರವಿನಲ್ಲಿ ತನ್ನ ನೆಲೆ ವಿಸ್ತರಿಸಿಕೊಳ್ಳುವ ಪ್ರಯತ್ನ ಮಾಡಿತ್ತು. ಅದಕ್ಕಾಗಿ ಆಗಾಗ್ಗೆ ತಂತ್ರಗಳನ್ನೂ ಬದಲಿಸುತ್ತಿದೆ. ಅನುಕೂಲಸಿಂಧು ರಾಜಕಾರಣದ ದೋಣಿಯಲ್ಲಿರುವ ಬಿಹಾರದ ನಿತೀಶ್ ಕುಮಾರ್ ಒಂದೊಮ್ಮೆ ಬಿಜೆಪಿಗೆ ಆಸರೆಯಾಗಿದ್ದರು. ಈಗ ಅವರಿಗೇ ಬಿಜೆಪಿಯ ಆಸರೆ ಬೇಕಾಗಿದೆ. ಭ್ರಷ್ಟರು, ಕುಟುಂಬ ರಾಜಕಾರಣದ ಪಿತಾಮಹರು ಎಂದು ಬಿಜೆಪಿಯು ಯಾರನ್ನೇ ಟೀಕಿಸಿದರೂ ಅದು, ಅವರು ಕೇಸರಿ ಬಾವುಟ ಹಿಡಿಯುವವರೆಗೆ ಮಾತ್ರ. ಬಿಜೆಪಿಯ 'ವಾಷಿಂಗ್ ಮಷೀನ್' ಒಳಗೆ ಬಿದ್ದು ಹೊರಬಂದರೆ ಎಂತಹ ಕಡುಭ್ರಷ್ಟರೂ 'ಸ್ವಚ್ಛ ಭಾರತ'ದಲ್ಲಿ ಪರಿಶುದ್ಧರಾಗಿ ಹೊರಹೊಮ್ಮಿಬಿಡುತ್ತಾರೆ.

ಕರ್ನಾಟಕ ರಾಜಕಾರಣದ ವಿಚಾರಕ್ಕೆ ಬಂದರೆ, ಎಸ್. ಬಂಗಾರಪ್ಪ ಬಿಜೆಪಿ ಸೇರದೇ ಇದ್ದರೆ, ಕುಮಾರಸ್ವಾಮಿ ಬಿಜೆಪಿ ಜತೆ ಸೇರಿ ಸರ್ಕಾರ ರಚಿಸದೇ ಇದ್ದರೆ ಇಲ್ಲಿಯೂ ಆ ಪಕ್ಷಕ್ಕೆ ಇಷ್ಟರಮಟ್ಟಿಗಿನ ಬಲ ಬರುತ್ತಿರಲಿಲ್ಲ. ಚುನಾವಣೆ ಪೂರ್ವ ಅಥವಾ ಚುನಾವಣೆ ಬಳಿಕ ಮೈತ್ರಿ ಮಾಡಿಕೊಂಡು ಪ್ರಾದೇಶಿಕ ಪಕ್ಷದ ಕಾಲಾಳುಗಳನ್ನು ತನ್ನ ಬಾವುಟ ಹಿಡಿಯುವಂತೆ ಮಾಡುವುದು, ಅವರ ಮೂಲಕವೇ ಪಕ್ಷದ ತಳಹದಿಯನ್ನು ವಿಸ್ತರಿಸುವುದು ಬಿಜೆಪಿ ಬಳಸುತ್ತಿರುವ ಅಡ್ಡಮಾರ್ಗ. ಅಟಲ್ ಬಿಹಾರಿ ವಾಜಪೇಯಿ 'ದ ಪಾರ್ಟಿ ವಿಥ್ ಡಿಫರೆನ್ಸ್' ಎಂಬ ಘೋಷವಾಕ್ಯವನ್ನು ಪಕ್ಷಕ್ಕೆ ಕೊಟ್ಟಿದ್ದರು. ಕುಟುಂಬ ರಾಜಕಾರಣ, ಭ್ರಷ್ಟಾಚಾರ, ದುರಾಡಳಿತಕ್ಕಿಂತ ಭಿನ್ನವಾಗಿ ಹೊಸದೇನನ್ನೋ ಆ ಪಕ್ಷ ಕೊಡಲಿದೆ ಎಂಬ ಹುಸಿ ಭರವಸೆಯನ್ನು ಹುಟ್ಟಿಸಲಾಗಿತ್ತು. ಆಂತರ್ಯದಲ್ಲಿ ಹಿಂದುತ್ವದ ಅಮಲು, ಹಿಂದೂರಾಷ್ಟ್ರ ನಿರ್ಮಾಣವೇ ಅದರ ಗುರಿಯಾದರೂ ಕೇಳುಗರಿಗೆ ಇದು ಹಿತವೆನಿಸುವಂತಿತ್ತು. 'ಪಾರ್ಟಿ ವಿಥ್ ಡಿಫರೆನ್ಸ್' ಎಂಬುದು ಈಗ ಹಳಸಲಾಗಿ, ಹುಳು ತುಂಬಿಕೊಂಡ ಹಿಟ್ಟಿನಂತಾಗಿದೆ.



ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಗೆ ಮುನ್ನ ಜೆಡಿಎಸ್ ಜತೆಗೆ ಬಿಜೆಪಿ ಮೈತ್ರಿಗೆ ಮುಂದಾಯಿತು. 'ಎನ್‌ಡಿಎ ಜತೆ ಬನ್ನಿ, ಮುಂದಿನದನ್ನು ವಿಶ್ವಾಸದಲ್ಲೇ ತೀರ್ಮಾನಿಸೋಣ' ಎಂಬ ಅಮಿತ್ ಶಾ ಮಾತು ನಂಬಿದ ಕುಮಾರಸ್ವಾಮಿ, ಕೈಜೋಡಿಸಿಯೇ ಬಿಟ್ಟರು. ಮೊದ ಮೊದಲು ಐದು ಕ್ಷೇತ್ರಗಳು ಸಿಗಲಿವೆ, ಜೆಡಿಎಸ್‌ಗೆ ಬಲ ಬರಲಿದೆ ಎಂಬ ಭಾವನೆ ಅವರಿಗೆ ಇತ್ತು. ಚುನಾವಣೆ ಹತ್ತಿರವಾಗುತ್ತಿದ್ದಂತೆ ಅದು ಮೂರು ಮತ್ತೊಂದಕ್ಕೆ ಇಳಿಯಿತು. ಈಗ ಎರಡಕ್ಕೆ ಸೀಮಿತವಾದಂತಿದೆ. ಕೋಲಾರವನ್ನು ಬಿಟ್ಟುಕೊಡುವಂತೆ ಬೇಡಿಕೊಳ್ಳಬೇಕಾದ ದಯನೀಯ ಸ್ಥಿತಿಯೂ ಬಂದಿದೆ. 2019ರಲ್ಲಿ ಕಾಂಗ್ರೆಸ್ ಜತೆಗೆ ಹೋದಾಗ ಏಳು ಕ್ಷೇತ್ರಗಳು ದಕ್ಕಿದ್ದವು. ಈಗ ಎರಡಕ್ಕೆ ತೃಪ್ತಿಪಡಬೇಕಾಗಿದೆ.

ಏಕೆಂದರೆ 25 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಜೆಪಿ ತನ್ನ ನೆಲೆಯಿರುವ ಕ್ಷೇತ್ರಗಳನ್ನು ಬಿಟ್ಟುಕೊಡಲು ತಯಾರಿಲ್ಲ. ತುಮಕೂರಿನಲ್ಲಿ ಬಿಜೆಪಿ ಅಭ್ಯರ್ಥಿಯಾಗಿ, ಜೆಡಿಎಸ್ ಚಿಹ್ನೆಯಡಿ ವಿ.ಸೋಮಣ್ಣ ಸ್ಪರ್ಧಿಸುತ್ತಾರೆ ಎಂದು ಹೇಳಲಾಗಿತ್ತಾದರೂ ಈಗವರು ಬಿಜೆಪಿ ಹುರಿಯಾಳು. ಹಾಸನ, ಮಂಡ್ಯದಲ್ಲಿ ಬಿಜೆಪಿಗೆ ಹೇಳಿಕೊಳ್ಳುವಂತಹ ನೆಲೆಯಿಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ ನೆಲೆ ಇಲ್ಲದೇ ಇದ್ದರೂ ಅಲ್ಲಿ, ಗೌಡರ ಅಳಿಯ ಡಾ. ಸಿ.ಎನ್.ಮಂಜುನಾಥ್ ಅವರನ್ನು ಬಿಜೆಪಿಯಿಂದ ಕಣಕ್ಕೆ ಇಳಿಸಲಾಗಿದೆ. ಗೌಡರ ನೆರವಿನಿಂದ ಕೇಸರಿ ಪತಾಕೆ ಹಾರಿಸುವುದು ಮೋದಿ–ಶಾ ಇಚ್ಛೆ. ಮಂಜುನಾಥ್ ಗೆದ್ದರೂ ಅದು ಬಿಜೆಪಿ ಲೆಕ್ಕವೇ ವಿನಾ ಜೆಡಿಎಸ್‌ನದ್ದಲ್ಲ. ಮೈಸೂರಿನ ಕಡೆ ಕುಮಾರಸ್ವಾಮಿ ಒಲವಿತ್ತಾದರೂ ಅದನ್ನೂ ಬಿಟ್ಟುಕೊಡಲಿಲ್ಲ.

ಬಿಜೆಪಿ ಸಖ್ಯದ ದಾಕ್ಷಿಣ್ಯಕ್ಕೆ ಕುಮಾರಸ್ವಾಮಿ ಸಿಲುಕಿದ್ದಾರೆ. ಬೇಕೋ ಬೇಡವೋ ಮಂಡ್ಯ–ಹಾಸನ ಬಿಟ್ಟು ಎಲ್ಲ ಕ್ಷೇತ್ರಗಳಲ್ಲಿನ ತಮ್ಮ ನಾಯಕರು, ಕಾರ್ಯಕರ್ತರನ್ನು ಬಿಜೆಪಿ ಪರ ಪ್ರಚಾರಕ್ಕೆ ದೂಡಲೇಬೇಕು. ಜೆಡಿಎಸ್ ಬಾವುಟವನ್ನು ಬಿಟ್ಟ ಈ ಕಾರ್ಯಕರ್ತರು ಕೇಸರಿ ಬಾವುಟ ಹಿಡಿದು, ಶಾಲು ಹೆಗಲಿಗೇರಿಸಿಕೊಂಡು ಅನ್ಯಪಕ್ಷಕ್ಕೆ ದುಡಿಯಬೇಕು. ತೆನೆ ಹೊತ್ತ ಮಹಿಳೆಗೆ ಕೈಕೊಟ್ಟು ಕಮಲವನ್ನು ಮುಡಿಯಲೇಬೇಕು. ಬಿಜೆಪಿಗೆ ಬೇಕಾಗಿರುವುದು ಕೂಡ ಇಷ್ಟೇ. ಈ ಕಾರ್ಯಕರ್ತರ ಪೈಕಿ ಶೇ 50ರಷ್ಟು ಮಂದಿ, ಮನಃಪರಿವರ್ತನೆಗೊಂಡು ಮುಂದಿನ ದಿನಗಳಲ್ಲಿ ಭಾವನಾತ್ಮಕವಾಗಿ ಬಿಜೆಪಿ ಜತೆ ಗುರುತಿಸಿಕೊಳ್ಳುತ್ತಾರೆ. ಅಲ್ಲೆಲ್ಲ, ಜೆಡಿಎಸ್ ಬಲ ಕುಗ್ಗಿ, ಆ ಬಲವು ಬಿಜೆಪಿಯ ಮಡಿಲೊಳಗೆ ಭದ್ರವಾಗುತ್ತದೆ. ಮುಂದಿನ ಚುನಾವಣೆಗಳಲ್ಲಿ, ಎರಡು ಜಿಲ್ಲೆಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ಜೆಡಿಎಸ್ ತನ್ನ ನೆಲೆಯನ್ನೇ ಕಳೆದುಕೊಂಡಿರುತ್ತದೆ. ಬಿಜೆಪಿಗೆ ಕಾಂಗ್ರೆಸ್ ಪಕ್ಷವೇ ನೇರ ಎದುರಾಳಿಯಾಗಿರುತ್ತದೆ.

ಬಿಜೆಪಿಗೆ ಬೇಕಾಗಿರುವುದು ಪ್ರಾದೇಶಿಕ ಅಸ್ಮಿತೆಯನ್ನು ಹೊಂದಿದ್ದ ಜೆಡಿಎಸ್ ಪಕ್ಷವನ್ನು ನುಂಗಿ, ಅದರ ಶಕ್ತಿಯನ್ನು ಆವಾಹಿಸಿಕೊಂಡು ತಾನು ಬಲಿಷ್ಠವಾಗುವುದಷ್ಟೆ. ಲೋಕಸಭೆ ಚುನಾವಣೆಗೆ ಬಿಜೆಪಿಯ ಕಂಕುಳಲ್ಲಿ ಸಿಕ್ಕಿಕೊಂಡಿರುವ ಕುಮಾರಸ್ವಾಮಿ ಅವರಿಗೆ ಆ ಕಂಕುಳು ಪೊರೆಯುವುದಕ್ಕಲ್ಲ, ಹೊಸಕಿ ಹಾಕುವುದನ್ನು ಗುರಿಯಾಗಿಟ್ಟುಕೊಂಡಿದೆ ಎಂಬುದು ಗೊತ್ತಿಲ್ಲದ ಸಂಗತಿಯಲ್ಲ. ಹಾಗಿದ್ದರೆ, ಯಾವ ಅನಿವಾರ್ಯ ಅವರನ್ನು ಈ ಸ್ಥಿತಿಗೆ ದೂಡಿದೆ? ಅದು, ದೇವೇಗೌಡರಿಂದ 'ದೈವಾಂಶ ಸಂಭೂತ'ರೆಂದು ಹೊಗಳಿಸಿಕೊಂಡ ಮೋದಿಯವರಿಗಷ್ಟೇ ಗೊತ್ತಿರಬಹುದಾದ ರಹಸ್ಯ.

ಚುರುಮುರಿ



ಆ ಪ್ರಶ್ನೆನೇ ಕೇಳಲಿಲ್ಲ!

• ಸಿದ್ದಯ್ಯ ಹಿರೇಮಠ

'ನೀವು ಹೇಳಿದಂಗ ಒಂದೂ ಪ್ರಶ್ನೆ ಕೇಳಿಲ್ಲರ್ರೀ ಸರ ಪರೀಕ್ಷೆದಾಗ?' ರಸ್ತೆ ಮಧ್ಯೆ ಮಾಸ್ತರರನ್ನು ನಿಲ್ಲಿಸಿ ಕೇಳಿದ ಕೊಟ್ರೇಶಿ.

'ಅಷ್ಟ್ಯಾಕ ಗಾಬರಿಯಾಗೀಯೋ ಕೊಟ್ರ? ಏನ್ ಪ್ರಾಬ್ಲಮ್ ಆತು? ಯಾವ ಪ್ರಶ್ನೆ ಕೇಳಬೇಕಿತ್ತು?' ಮಾಸ್ತರು ಸಮಾಧಾನದಿಂದಲೇ ಪ್ರಶ್ನಿಸಿದರು.

'ಪ್ರಚಲಿತದ ಬಗ್ಗೆ ಪರೀಕ್ಷೆ ಒಳಗ ಪ್ರಶ್ನೆ ಕೇಳೇ ಕೇಳತಾರ, ದಿನಾಲೂ ಪೇಪರ್ ಓದಬೇಕು, ಟಿ.ವಿ. ನೋಡತಿರಬೇಕು, ಬರೇ ಪುಸ್ತಕದಾಗಿನ ಹುಳಾ ಆಗಿರಬ್ಯಾಡ್ರಲೇ ಅಂತ ನೀವು ಹೇಳಿದ್ರಿ. ಮತ್ತ ಪರೀಕ್ಷೆದಾಗ ನಾವು ಅನಕಂಡಿದ್ ಪ್ರಶ್ನೇನ ಕೇಳಿಲ್ಲರೀ ಸರ' ಹೇಳಿದ ಕೊಟ್ರೇಶಿ.

'ಯಾವ ಪ್ರಶ್ನೆ ಕೇಳಬೇಕಿತ್ತು ಅಂತ ಹೇಳು ನೀ ಮೊದಲು?' ಮಾಸ್ತರ ಸಿಟ್ಟಿನಿಂದಲೇ ಗದರಿದರು.

'ನೋಡ್ರೀ, ಎರಡು ತಿಂಗಳಿಂದ ಕರಿಮಣಿ ಮಾಲಿಕ ಯಾರು ಅಂತ ರೀಲ್ಸು, ಫೇಸ್‌ಬುಕ್ಕು, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪು ಸೇರಿ ಎಲ್ಲೆಡೆ ಚರ್ಚೆ ನಡದೈತಿ. ಆದ್ರ ಆ ಬಗ್ಗೆ ಒಂದ್ ಸಣ್ಣ ಕ್ವಶ್ಚನ್ನೂ ಇರಲಿಲ್ಲರೀ ಸರ' ಜಾಗತಿಕ ಸಮಸ್ಯೆಯೇ ಉದ್ಭವಿಸಿದೆ ಎಂಬಂತೆ ಕೊಟ್ರ ವಿವರಿಸಿದ.

'ಲೇ ಕೊಟ್ರ, ಕರಿಮಣಿ ಮಾಲಿಕ ಯಾರು ಅಂತ ಪ್ರಶ್ನೆ ಕೇಳಿದ್ರ ಅದಕ್ಕ ಉತ್ತರ ಏನ್ ಬರೀತಿದ್ಯಪಾ ಹೇಳು. ನೀನಲ್ಲ ಅಥವಾ ನಾನಲ್ಲ ಅಂತನೋ, ಪ್ರಶ್ನೆಗೆ ಉತ್ತರ ಹುಡುಕಿದರೆ ಏನೇನಿಲ್ಲ ಅಂತನೋ, ಯಾರಂತ ಗೊತ್ತಿಲ್ಲ ಅಂತನೋ ಬರೀತಿದ್ಯಾ ಇಲ್ಲ?' ಮಾಸ್ತರ ಮರುಪ್ರಶ್ನೆ ಎಸೆದರು.

'ಹೌದ್ರಿ, ನಾನಂತೂ ಅಲ್ಲ ಅಂತ ಉತ್ತರ ಬರೀಬೇಕಂತ ನಾವು ಫ್ರೆಂಡ್ಸ್ ಎಲ್ಲಾ ಬಾಯಿಪಾಠ ಮಾಡಿದ್ವಿರೀ' ವಿವರಿಸಿದ ಕೊಟ್ರ.

'ಇಂಥಾ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಗಂಗಿಲ್ಲ ಅಂತ ಬೋರ್ಡ್‌ನವರು ಅವುನ್ನ ಕೇಳಿರಂಗಿಲ್ಲ' ಮಾಸ್ತರು ಸಮಜಾಯಿಷಿ ನೀಡಿದ್ದು ಕೊಟ್ರನಿಗೆ ಸಮಾಧಾನ ತಂದಂಗೆ ತೋರಲಿಲ್ಲ.

'ಸರ... ಈ ಬೋರ್ಡ್‌ನವರಿಗೆ ತಮ್ಮದೇ ಗೊತ್ತಿಲ್ಲ, ಇನ್ನ ಬ್ಯಾರೇದೇನ್ ಗೊತ್ತಿರತೈತಿ ಬಿಡ್ರಿ. ಒಮ್ಮೆ 5, 8, 9, 11ನೇತ್ತಾಕ್ಕ ಬೋರ್ಡ್ ಎಕ್ಸಾಮ್ ಐತಿ ಅಂತಾರ, ಮರುದಿನ ಇಲ್ಲ ಅಂತಾರ, ಮತ್ತ ಐತಿ ಅಂತಾರ, ಆಮ್ಯಾಲೆ ಇಲ್ಲ ಅಂತಾರ. ಪಾಪ ಅವರಿಗೇ ಅವರದು ಗೊತ್ತಿಲ್ಲ, ಇನ್ನ ಬ್ಯಾರೇದವರದು ಏನ್ ಕನ್‌ಫರ್ಮ್ ಇರತೈತಿ ಬಿಡ್ರಿ' ಎನ್ನುತ್ತಲೇ... 'ಕರಿಮಣಿ ಮಾಲಿಕ ನೀನಲ್ಲ...' ಹಾಡನ್ನು ಗುನುಗುನಿಸುತ್ತಲೇ ಮನೆಯತ್ತ ಸಾಗಿದ.

ದಿನದ ಟ್ವೀಟ್

ಭಾಗಶಃ ಒಪ್ಪುವಂಥದ್ದು...



ಪ್ರಸಕ್ತ ರಾಜಕೀಯ ವಿದ್ಯಮಾನಗಳನ್ನು ಆಧಾರವಾಗಿಸಿಕೊಂಡು, ಡಾ. ಸಿ.ಎನ್.ಮಂಜುನಾಥ್ ಅವರು ರಾಜಕೀಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ ಅಲ್ಲ ಎನ್ನುವ ಅಭಿಪ್ರಾಯ ಭಾಗಶಃ ಒಪ್ಪುವಂಥದ್ದು. ಆದರೆ, ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಪಡೆದವರು ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡದೇ ಇದ್ದರೆ ರಾಜಕೀಯ ಕ್ಷೇತ್ರ ಮತ್ತಷ್ಟು ಹದಗೆಡುತ್ತದೆ.

ಬೈರೇಗೌಡ ಜಿ.

ಕಿಡಿನುಡಿ



ಭಾರತಕ್ಕೆ ರಾಜಕೀಯ ಭ್ರಷ್ಟಾಚಾರವು ನಿಸ್ಸಂಶಯವಾಗಿಯೂ ಹೊಸದೇನಲ್ಲ. ಆದರೆ ಚುನಾವಣಾ ಬಾಂಡ್‌ಗಳ ವಿಷಯಕ್ಕೆ ಬಂದಾಗ, ಮೇರೆಮೀರಿರುವ ಅದರ ಪ್ರಮಾಣವು ದಿಗ್ಭ್ರಮೆಗೊಳಿಸುವಂತಿದೆ. ಈ ಅಸ್ತ್ರವು ಭ್ರಷ್ಟಾಚಾರವನ್ನು ಅನೌಪಚಾರಿಕ ಗುಡಿ ಕೈಗಾರಿಕೆ ಮಟ್ಟದಿಂದ ರಾಶಿ ರಾಶಿ ಉತ್ಪಾದನೆಯ ಅಗಾಧ ಮಟ್ಟಕ್ಕೆ ಕೊಂಡೊಯ್ದಿದೆ.

ಶೋಯಬ್ ಡೇನಿಯಲ್, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 16-3-1999

• **ರೈಲ್ವೆ ವಲಯ: ಕೇಂದ್ರಕ್ಕೆ ನಿಯೋಗ ಒಯ್ಯಲು ಸಿದ್ಧ– ಪಟೇಲ್**

ಬೆಂಗಳೂರು, ಮಾರ್ಚ್ 15– ನೈರುತ್ಯ ರೈಲ್ವೆ ವಲಯವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವುದಕ್ಕೆ ವಿರೋಧಿಸುವುದು ಸರಿಯಲ್ಲ, ಈ ವಲಯದ ಕೇಂದ್ರ ಕಚೇರಿಗಳನ್ನು ಹುಬ್ಬಳ್ಳಿ ಮತ್ತು ಬೆಂಗಳೂರು ನಗರಗಳೆರಡರಲ್ಲಿಯೂ ಸ್ಥಾಪಿಸಬೇಕು ಎಂದು ಒತ್ತಾಯಿಸಲು ತಾವು ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಿಯವರಲ್ಲಿಗೆ ಕರೆದೊಯ್ಯಲು ಸಿದ್ಧ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ವಿಧಾನ ಸಭೆಯಲ್ಲಿ ಇಂದು ಹೇಳಿದರು.

ಶೂನ್ಯವೇಳೆಯಲ್ಲಿ ಕನ್ನಡ ಚಳವಳಿಯ ವಾಟಾಳ್ ನಾಗರಾಜ್ ಅವರು ಪ್ರಸ್ತಾಪಿಸಿದ ನೈರುತ್ಯ ರೈಲ್ವೆ ವಲಯದ ಸ್ಥಳಾಂತರದ ಬಗ್ಗೆ ಸರ್ಕಾರದ ನಿಲುವನ್ನು ಅವರು ಸ್ಪಷ್ಟಪಡಿಸಿದರು.

• **ಬಿಜೆಪಿ ನೇತೃತ್ವದ ಕೇಂದ್ರದ ಸರ್ಕಾರ ಸುಭದ್ರ: ವಾಜಪೇಯಿ**

ನವದೆಹಲಿ, ಮಾರ್ಚ್ 15– ಸಮ್ಮಿಶ್ರ ಸರ್ಕಾರ ನಡೆಸುವಂತಹ ಸುಲಭವಲ್ಲದ ಕೆಲಸವನ್ನು ತಾವು ಯಶಸ್ವಿಯಾಗಿ ನಿರ್ವಹಿಸುತ್ತಿರುವುದಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಸಮರ್ಥಿಸಿಕೊಂಡರು.

ಈ ಸರ್ಕಾರ ವರ್ಷ ತುಂಬುವುದರೊಳಗೆ ಬಿದ್ದುಹೋಗುವುದೆಂದು ಬಹಳ ಮಂದಿ ಕನಸು ಕಂಡರು. ಅವರಿಗೆಲ್ಲ ಈಗ ನಿರಾಶೆಯಾಗಿದೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 16-3-1974

• **ಗುಜರಾತ್ ವಿಧಾನಸಭೆ ವಿಸರ್ಜನೆ ಕೇಂದ್ರ ಸಂಪುಟ ನಿರ್ಧಾರ**

ನವದೆಹಲಿ, ಮಾರ್ಚ್ 15– ಗುಜರಾತ್ ವಿಧಾನಸಭೆಯನ್ನು ವಿಸರ್ಜಿಸಲಾಗಿದೆ.

ರಾಜ್ಯಪಾಲ ಕೆ.ಕೆ. ವಿಶ್ವನಾಥನ್ ಅವರು ಇಂದು ರಾತ್ರಿ ಅಹ್ಮದಾಬಾದಿನಲ್ಲಿ ವಿಧಾನಸಭೆ ವಿಸರ್ಜನೆಯ ವಿಷಯವನ್ನು ಪ್ರಕಟಿಸಿದರು.

ಇಂದು ರಾತ್ರಿ ಇಲ್ಲಿ ಸೇರಿದ್ದ ಕೇಂದ್ರ ಸಂಪುಟದ ತುರ್ತು ಸಭೆಯಲ್ಲಿ ಗುಜರಾತ್ ವಿಧಾನಸಭೆಯನ್ನು ವಿಸರ್ಜಿಸುವ ನಿರ್ಧಾರ ಕೈಗೊಳ್ಳಲಾಯಿತೆಂದು ತಿಳಿದುಬಂದಿದೆ.

• **ರಾಜ್ಯದ ಶಾಸಕರು, ಮಂತ್ರಿಗಳಿಗೆ ಹೆಚ್ಚು ಸಂಭಾವನೆ: ಪಕ್ಷಕ್ಕೆ ಸಮಿತಿ ಶಿಫಾರಸು**

ಬೆಂಗಳೂರು, ಮಾರ್ಚ್ 15– ಕರ್ನಾಟಕದ ಶಾಸಕರ ಈಗಿನ ಒಟ್ಟು ಸಂಭಾವನೆಯನ್ನು 400 ರೂಪಾಯಿಗಳಿಂದ 600 ರೂಪಾಯಿಗಳಿಗೂ ಮಂತ್ರಿಗಳ ವೇತನವನ್ನು 1,000ದಿಂದ 1,250 ರೂಪಾಯಿಗಳಿಗೂ ಏರಿಸಬೇಕೆಂದು ಕಾಂಗ್ರೆಸ್ ಶಾಸಕಾಂಗ ಪಕ್ಷವು ನೇಮಿಸಿದ ಸಮಿತಿಯೊಂದು ಪಕ್ಷಕ್ಕೆ ಶಿಫಾರಸು ಮಾಡಲಿದೆ.

ಸಂಗತ

ಪಂಚಾಯಿತಿ ವ್ಯವಸ್ಥೆ: ವಸ್ತುಸ್ಥಿತಿ ಅರಿಯೋಣ

ಗ್ರಾಮ ಪಂಚಾಯಿತಿ ವ್ಯವಸ್ಥೆಯ ಆರೆಕೊರೆಗಳನ್ನು ಗುರುತಿಸಿ ಅದನ್ನು ಮತ್ತಷ್ಟು ಸದೃಢಗೊಳಿಸುವ ಕುರಿತು ಚಿಂತಿಸಬೇಕಾಗಿದೆ

• ಪ.ರಾಮಕೃಷ್ಣ ಶಾಸ್ತ್ರಿ

ಮನೆ ತೆರಿಗೆ ವಸೂಲಿ ಮತ್ತು ಸ್ಥಳೀಯ ವಿವಾದಗಳ ಪರಿಹಾರಕ್ಕೆ ಸೀಮಿತವಾಗಿದ್ದ ಗ್ರಾಮ ಪಂಚಾಯಿತಿಗಳಿಗೆ ಹೊಸ ರೂಪ ಕೊಟ್ಟವರು ರಾಮಕೃಷ್ಣ ಹೆಗಡೆ ಮತ್ತು ಅಬ್ದುಲ್ ನಜೀರ್ ಸಾಬ್. ಅಧಿಕಾರ ವಿಕೇಂದ್ರೀಕರಣದ ಅಭೂತಪೂರ್ವ ಕಲ್ಪನೆಯ ಮಂಡಲ ಪಂಚಾಯಿತಿ ವ್ಯವಸ್ಥೆಯಿಂದ ಅಕ್ಷರ ಅರಿಯದವರೂ ಗೆದ್ದು ಬಂದು ಅಕ್ಕರೆಯಿಂದ ಗ್ರಾಮದ ಅಭಿವೃದ್ಧಿ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು.

ಸಂಗ್ರಹಿಸಿದ ತೆರಿಗೆ ಜೊತೆಗೆ ಸರ್ಕಾರ ಕೊಡುವ ಅನುದಾನವನ್ನು ಬಳಸಿ ಗ್ರಾಮಗಳನ್ನು ಸೌಲಭ್ಯದ ಆಗರಗಳನ್ನಾಗಿ ಪರಿವರ್ತಿಸುವ ಕೌಶಲವು ಆಡಳಿತ ವ್ಯವಸ್ಥೆಯ ಅಧ್ಯಯನಕ್ಕಾಗಿ ವಿದೇಶಗಳಿಂದ ಕರ್ನಾಟಕಕ್ಕೆ ಜನ ಬರುವಂತೆ ಮಾಡಿತು. ಆದರೆ ಸರ್ಕಾರ ನಡೆಸುವ ಪಕ್ಷಗಳು ಬದಲಾದವು. ಮೂರು–ನಾಲ್ಕು ಗ್ರಾಮಗಳಿಗೆ ಒಂದರಂತೆ ಇದ್ದ ವ್ಯವಸ್ಥೆ ಬದಲಾಗಿ ಮತ್ತೆ ಗ್ರಾಮಗ್ರಾಮಗಳಲ್ಲೂ ಪಂಚಾಯಿತಿಗಳು ಹುಟ್ಟಿಕೊಂಡವು. ಗ್ರಾಮ ಪಂಚಾಯಿತಿಗಳು ಈಗ ಜನಜೀವನಕ್ಕೆ ಎಷ್ಟು ಆಪ್ತವಾಗಿವೆ ಎಂಬುದರ ವಿಮರ್ಶೆ ಮಾಡಲು ಇದು ಸಕಾಲ ಎನಿಸುತ್ತದೆ.

ಮನೆಗಳಿಗೆ ಕುಡಿಯುವ ನೀರು ಪೂರೈಕೆ ಬಿಟ್ಟರೆ ಪಂಚಾಯಿತಿಗಳು ಏನು ಅಭಿವೃದ್ಧಿ ಮಾಡುತ್ತಿವೆ? ಮೌಲ್ಯಮಾಪನ ಮಾಡಿದರೆ ಹೆಚ್ಚಿನ ಕಡೆ ಒಂದು ದೊಡ್ಡ ಸೊನ್ನೆ ಮಾತ್ರ ಕಾಣಿಸುತ್ತದೆ. ಆದರೆ ಇದಿಷ್ಟೇ ಕೆಲಸಕ್ಕೂ ಪಂಚಾಯಿತಿಯ ಗಳಿಕೆಯನ್ನು ಪೂರ್ತಿ ನುಂಗುವಷ್ಟು ಸಂಖ್ಯೆಯಲ್ಲಿ ಉದ್ಯೋಗಗಳು ಸೃಷ್ಟಿಯಾಗಿವೆ, ನೌಕರರಿಗೆ ಅದೊಂದು ಹುಲ್ಲುಗಾವಲಾಗಿ ಬದಲಾಗಿದೆ.

ಅಚ್ಚರಿಯೆಂದರೆ, ಸರ್ಕಾರ ಕೊಡುವ ತಲಾವಾರು ಅಭಿವೃದ್ಧಿ ನಿಧಿ ಶೇ 40ರಷ್ಟು ನೌಕರರ ಸಂಬಳಕ್ಕೂ ಉಳಿದದ್ದು ನಲ್ಲಿ ನೀರು, ಬೀದಿದೀಪಗಳಿಗೆ ಬಳಸುವ ವಿದ್ಯುತ್ತಿನ ಶುಲ್ಕಕ್ಕೂ ಬಳಕೆಯಾಗಿ ಅಭಿವೃದ್ಧಿಗೆ ಬಿಡಿಗಾಸೂ ಉಳಿಯುವುದಿಲ್ಲ. ಹತ್ತನೆಯ ತರಗತಿ ಓದಿದರೂ ಸಾಕು, ಅಂಥವರಿಗೆ ಪಂಚಾಯಿತಿ ಕಾರ್ಯದರ್ಶಿಯ ಹುದ್ದೆ ನೀಡಿದರು. ಕೆಲವು ಸಾವಿರ ರೂಪಾಯಿ ಮೊತ್ತದ ತೆರಿಗೆ ಸಂಗ್ರಹವಾಗುವ ಪಂಚಾಯಿತಿಗೆ ಅವರೊಬ್ಬರೇ ಸಾಕಾಗುತ್ತಿತ್ತು. ಸಾಲದ್ದಕ್ಕೆ ಪದವೀಧರರೊಬ್ಬರನ್ನು ಅಭಿವೃದ್ಧಿ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಇವರು ಬಂದ ಮೇಲೆ, ರಾಜ್ಯದಲ್ಲಿರುವ ಐದೂವರೆ ಸಾವಿರಕ್ಕಿಂತ ಹೆಚ್ಚು ಪಂಚಾಯಿತಿಗಳಲ್ಲಿ ಏನು ಬದಲಾವಣೆಯಾಗಿದೆ, ಅಭಿವೃದ್ಧಿ ಎಷ್ಟು ಆಗಿದೆ, ಸಂಪನ್ಮೂಲ ಕ್ರೋಡೀಕರಣಕ್ಕೆ ಏನು ಜಾದೂ ಮಾಡಿದ್ದಾರೆ, ಸಂಗ್ರಹಿಸಿದ ಮನೆ ತೆರಿಗೆ ಹೇಗೆ ಬಳಕೆಯಾಗುತ್ತದೆ ಎಂದು ಪರಿಶೀಲಿಸುವ ಅಗತ್ಯ ಎದ್ದು ಕಾಣುತ್ತದೆ. ಗುತ್ತಿಗೆದಾರರನ್ನು ಕೇಳಿದರೆ, 'ಹಿಂದೆ ಕಾರ್ಯದರ್ಶಿ ಒಬ್ಬರಿಗೆ ಕಮಿಷನ್ ಕೊಟ್ಟರೆ ಸಾಕಾಗುತ್ತಿತ್ತು, ಈಗ ಇಬ್ಬರಿಗೂ ಕೊಡಬೇಕಾಗಿದೆ' ಎನ್ನುತ್ತಾರೆ.

ಗ್ರಾಮ ಪಂಚಾಯಿತಿ ತನ್ನ ಸಂಪನ್ಮೂಲವನ್ನು ತಾನೇ ಸಂಗ್ರಹಿಸಿಕೊಳ್ಳಬೇಕು ಎನ್ನುವ ಸರ್ಕಾರ ಅದಕ್ಕೆ ಮಾರ್ಗದರ್ಶಿಸೂತ್ರಗಳನ್ನು ರೂಪಿಸಿದೆ. ಮನೆ ತೆರಿಗೆ ದರ ಏರಿಸುವುದನ್ನು ಬಿಟ್ಟರೆ ವರಮಾನ ಸಂಗ್ರಹಕ್ಕೆ ಬೇರೆ ಯಾವ ಹೊಸ ದಾರಿಯನ್ನೂ ಅಧಿಕಾರಿಗಳು ಶೋಧಿಸಲಿಲ್ಲ. ಗ್ರಾಮೀಣ ಗ್ರಂಥಾಲಯಕ್ಕೆ ಒಬ್ಬ ಗ್ರಂಥಪಾಲಕರಿರುತ್ತಾರೆ. ತಿಂಗಳಿಗೆ ಹದಿನೈದು ಸಾವಿರ ರೂಪಾಯಿ ವೇತನ. ಈ ಗ್ರಂಥಾಲಯಕ್ಕೆ ಬರುವ ಸಂದರ್ಶಕರೆಷ್ಟು, ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದುವವರೆಷ್ಟು ಮಂದಿ ಎಂದು ಲೆಕ್ಕ ಇಡುವ ವ್ಯವಸ್ಥೆ ಕೂಡ ಅಲ್ಲಿರುವುದಿಲ್ಲ. ಒಬ್ಬರಿಗೆ ಉದ್ಯೋಗ ಸೃಷ್ಟಿಯಾಗಿದೆ ಅಷ್ಟೇ. ಇತ್ತೀಚಿನ ದಿನಗಳಲ್ಲಿ ಎಷ್ಟು ಶೌಚಾಲಯ, ಹೊಸ ಮನೆ, ಕಸದ ತೊಟ್ಟಿ ಜನರ ತೆರಿಗೆ ಹಣದಿಂದ ನಿರ್ಮಾಣವಾಗಿವೆ ಎಂದು ಕೇಳಿದರೆ ಉತ್ತರ ಸಿಗದು.

ಗ್ರಾಮ ಪಂಚಾಯಿತಿಗಳೆಂದರೆ ರಾಜಕೀಯ ಮೇಲಾಟಗಳಿಂದ ಹೊರತಾದ ವ್ಯವಸ್ಥೆ ಎಂಬುದು ಬರೀ ನಂಬಿಕೆ. ಚುನಾವಣೆಯಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ಮತದಾನದ ಹಾಗೆಯೇ ರಾಜಕೀಯ ಪಕ್ಷಗಳ ಪ್ರಭೃತಿಗಳು ಪ್ರಾಬಲ್ಯ ತೋರಿಸುತ್ತಾರೆ. ಗೆದ್ದು ಬಂದ ಬಳಿಕ ಮತದಾರರ ಮುಖವನ್ನೂ ನೋಡದ ಕೆಲವು ಪ್ರತಿನಿಧಿಗಳು ಸಭಾಭತ್ಯೆ ಸಿಗುವ ಕಾರಣ ಮಾಸಿಕ ಸಭೆಗಳಿಗೆ ಹಾಜರಾಗುತ್ತಾರೆ. ಅಲ್ಲಿ ನಡೆಯುವ ಚರ್ಚೆಗಳಲ್ಲಿ ಏನು ವಿಷಯ ಪ್ರಸ್ತಾಪವಾಯಿತು, ನಿರ್ಣಯವಾಯಿತು ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವವರ ಸಂಖ್ಯೆ ಕಡಿಮೆ. ಒಂದಿಬ್ಬರು ಬುದ್ಧಿವಂತರು ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬಹುದು. ಹೀಗಾಗಿ, ಅಗತ್ಯವಿದ್ದರೂ ಕೆಲವರಿಗೆ ಮನೆ ಸಿಕ್ಕಿಲ್ಲ. ರಸ್ತೆ, ಬೀದಿದೀಪ, ಶೌಚಾಲಯ ಸೌಕರ್ಯ ಕಲ್ಪಿಸುವ ಕೆಲಸ ಸಮರ್ಪಕವಾಗಿ ಆಗಿಲ್ಲ. ಮತ ಪಡೆದು ಗ್ರಾಮ ಪಂಚಾಯಿತಿ ಸದಸ್ಯರೆಂದು ಗುರುತಿಸಲ್ಪಡುವವರಿಗೆ ತಮ್ಮ ಹೊಣೆಗಾರಿಕೆಯ ಮೂಲ ಕಲ್ಪನೆಯೇ ಇರುವುದಿಲ್ಲ.



ನಜೀರ್ ಸಾಬ್ ನೆಟ್ಟ ಈ ವ್ಯವಸ್ಥೆಯ ಗಿಡಕ್ಕೆ ಇಷ್ಟು ವರ್ಷಗಳ ಮೇಲಾದರೂ ಒಂದು ಕಾಯಕಲ್ಪ ಬೇಕೆಂದು ಪ್ರಾಜ್ಞರಾದ ನಾಗರಿಕರು ಬಯಸುವುದು ಉಚಿತವಲ್ಲವೇ? ಅಧಿಕಾರ ವಿಕೇಂದ್ರೀಕರಣದಿಂದ ಏನೋ ಮಹತ್ತರವಾದುದು ಆಗುತ್ತಿದೆ ಎಂಬ ಭ್ರಮೆ ಬಿಟ್ಟು ವಸ್ತುಸ್ಥಿತಿ ಅರಿಯುವುದು ಯಾವಾಗ? ಇಲ್ಲಿ ಸೃಷ್ಟಿಯಾಗಿರುವ ಹುದ್ದೆಗಳಲ್ಲಿರುವ ನೌಕರರಿಗೆ ತಕ್ಕಷ್ಟು ಕೆಲಸವಿದೆಯೇ? ಜನಪ್ರತಿನಿಧಿಯಾಗಿ ಆಯ್ಕೆಯಾದವರು ಆಯಾ ವರ್ಷ ಮಾಡಿದ ಸಾಧನೆಗಳೇನು... ಈ ಎಲ್ಲವನ್ನೂ ಮೌಲ್ಯಮಾಪನ ಮಾಡಿದರೆ ವಸ್ತುಸ್ಥಿತಿ ಹೊರಗೆ ಬರುತ್ತದೆ. ನ್ಯೂನತೆ ಸರಿಪಡಿಸಲು, ಹೊಸತನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ವ್ಯವಸ್ಥೆಗೆ ಕಾಯಕಲ್ಪ ನೀಡುವುದು ಈಗಿನ ಅಗತ್ಯ.

ವಾಚಕರ ವಾಣಿ

ಶ್ರೀಗಳು ಪಕ್ಷಾತೀತವಾಗಿದ್ದರೆ ಒಳಿತು

'ಬಿಜೆಪಿಯು ರಾಮಮಂದಿರದ ವಿಷಯವನ್ನು ಪ್ರಸ್ತಾಪಿಸಿ ಚುನಾವಣೆಯಲ್ಲಿ ಪ್ರಚಾರಕ್ಕೆ ಬಳಸಿಕೊಂಡರೆ ತಪ್ಪೇನಿಲ್ಲ' ಎಂದು ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಹೇಳಿರುವುದು ಸಮರ್ಥನೀಯವಲ್ಲ. ಪೂಜ್ಯರು ಅಧ್ಯಾತ್ಮ ಚಿಂತಕರು, ಸರ್ವಸಂಗ ಪರಿತ್ಯಾಗಿಗಳು, 'ಜಗವೆಲ್ಲ ನನ್ನ ಕುಟುಂಬ' ಎನ್ನುವ ವಿಚಾರಧಾರೆಯನ್ನು ಸಮಾಜಕ್ಕೆ ಬೋಧಿಸಬೇಕಾದವರು. ಅಂತಹವರು ಯಾವುದೋ ಒಂದು ಪಕ್ಷದ ಪರ ನಿಲ್ಲುವುದು, ಅದಕ್ಕೆ ಬೆಂಬಲ ವ್ಯಕ್ತಪಡಿಸುವುದು ಸಾಮಾನ್ಯ ನಾಗರಿಕರನ್ನು ಗೊಂದಲಕ್ಕೆ ತಳ್ಳುತ್ತದೆ. ಸಮಾಜದಲ್ಲಿನ ಸರ್ವರ ಒಳಿತನ್ನು ಬಯಸುವುದಾದರೆ ಶ್ರೀಗಳು ಪಕ್ಷಾತೀತವಾಗಿರಬೇಕು.

ಶಾಂತಕುಮಾರ್, ಸರ್ಜಾಪುರ

ಋಣ ತೀರಿಸುವ ಪ್ರಶ್ನೆಯೇ ಇಲ್ಲ

'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಐದು ಯೋಜನೆಗಳ ಫಲಾನುಭವಿಗಳು ಗ್ಯಾರಂಟಿಯ ಋಣ ತೀರಿಸಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಮಾರ್ಚ್ 15). ಗ್ಯಾರಂಟಿ ಯೋಜನೆಗಳಿಗೆ ಹಣವನ್ನು ಯಾರೂ ತಮ್ಮ ಜೇಬಿನಿಂದ ಕೊಡುತ್ತಿಲ್ಲ. ಅದು ಜನರ ತೆರಿಗೆ ಹಣದಿಂದಲೇ ಪಾವತಿಯಾಗುತ್ತಿದೆ. ಹಾಗಾಗಿ, ಇದರಲ್ಲಿ ಯಾರು ಯಾರ ಋಣವನ್ನೂ ತೀರಿಸುವ ಪ್ರಶ್ನೆಯೇ ಬರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳಿಗೆ ಮತ ಕೊಟ್ಟ ಜನರ ಋಣಕ್ಕಿಂತ ಹೆಚ್ಚಿನ ಋಣ ಯಾವುದೂ ಇರುವುದಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ತೈಲೋತ್ಪನ್ನ ದರ ಇಳಿಕೆ: ಮೂಗಿಗೆ ತುಪ್ಪ

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕೇಂದ್ರ ಸರ್ಕಾರ ಎರಡು ರೂಪಾಯಿಯಷ್ಟು ಇಳಿಸಿದೆ. ಕೆಲ ದಿನಗಳ ಹಿಂದೆ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ನೂರು ರೂಪಾಯಿಯಷ್ಟು ಇಳಿಸಲಾಗಿತ್ತು. ಇವೆಲ್ಲ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೈಗೊಂಡ ಕ್ರಮಗಳು. ವಾಸ್ತವವಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲೋತ್ಪನ್ನಗಳ ಬೆಲೆ ಇಳಿಕೆಗೆ ಹೋಲಿಸಿದರೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಬಹಳ ಹಿಂದೆಯೇ ಕನಿಷ್ಠ ಹತ್ತು ರೂಪಾಯಿಗಿಂತಲೂ ಹೆಚ್ಚು ಇಳಿಸಬೇಕಾಗಿತ್ತು. ತೈಲ ಕಂಪನಿಗಳು ಲಾಭ ಮಾಡಿಕೊಂಡ ಮೇಲೆ ಮತ್ತು ಕೇಂದ್ರ, ರಾಜ್ಯ ಸರ್ಕಾರಗಳು ಸೆಸ್ ರೂಪದಲ್ಲಿ ಬಹಳಷ್ಟು ಹಣ ಬಾಚಿಕೊಂಡ ಮೇಲೆ ಮೂಗಿಗೆ ಈಗೊಂದಿಷ್ಟು ತುಪ್ಪ ಹಚ್ಚುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಸಾಮಾನ್ಯ ಜನ ಬೆಲೆ ಏರಿಕೆಯಿಂದ ತತ್ತರಿಸಿಹೋದರೂ ಕಿವಿಗೊಡದ ಸರ್ಕಾರ ಈಗ ಚುನಾವಣೆ ಸಮಯದಲ್ಲಿ, ಸುಮಾರು ಎರಡು ವರ್ಷಗಳ ನಂತರ ಒಂದಿಷ್ಟು ಕರುಣೆ ತೋರಿದೆ.

ಪೆಟ್ರೋಲ್, ಡೀಸೆಲ್ ಬೆಲೆಯನ್ನು ಸಂಬಂಧಿಸಿದ ತೈಲ ಕಂಪನಿಗಳೇ ನಿರ್ಧರಿಸುತ್ತವೆ ಎಂದು ಹೇಳುತ್ತಲೇ ಪ್ರತಿಯೊಂದನ್ನೂ ಕೇಂದ್ರ ಸರ್ಕಾರವೇ ನಿರ್ಧರಿಸುತ್ತಾ ಬಂದಿದೆ. ಪೆಟ್ರೋಲ್, ಡೀಸೆಲ್ ಬೆಲೆ ನಿರ್ಧಾರ ಹಾಗೂ ಹೆದ್ದಾರಿಗಳ ಮೇಲೆ ಟೋಲ್ ಸಂಗ್ರಹದಲ್ಲಿ ಕೇಂದ್ರ ಸರ್ಕಾರ ಪಾರದರ್ಶಕವಾಗಿ ವರ್ತಿಸದೇ ಇರುವುದರಿಂದ ವಾಹನಗಳ ಮಾಲೀಕರು ಒಂದು ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಹಣದುಬ್ಬರ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಇವುಗಳ ಕುರಿತು ಸರ್ಕಾರ ಸಮಂಜಸವೆನಿಸುವ ಕ್ರಮವನ್ನು ಅನುಸರಿಸಬೇಕು. ತೈಲೋತ್ಪನ್ನಗಳ ದರಗಳು ಅಂತರರಾಷ್ಟ್ರೀಯ ವಾಸ್ತವ ಮಾರುಕಟ್ಟೆಯ ದರಗಳನ್ನು ಆಧರಿಸಿದರೆ ಹೆಚ್ಚು ಸಮಂಜಸ ಎನಿಸುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಚಾಳಿ– ಗಾಳಿ

ಈ ಬೆಲೆಗಳೂ
ಬಲು ಹುಷಾರು,
ಒಮ್ಮೊಮ್ಮೆ
ಕೆಳಗೆ ಇಳಿಯುವ ಚಾಳಿ,
ಅದರಲ್ಲೂ ಬೀಸಿದಾಗ
ಚುನಾವಣಾ ಗಾಳಿ!

ಮಹಾಂತೇಶ ಮಾಗನೂರ
ಬೆಂಗಳೂರು

ಜಂಕ್‌ಫುಡ್: ಯುವಜನ ಜಾಗೃತರಾಗಲಿ

ರಾಸಾಯನಿಕಭರಿತ ಗೋಬಿ ಮಂಚೂರಿ ಮತ್ತು ಕಾಟನ್ ಕ್ಯಾಂಡಿಗಳ ಮಾರಾಟವನ್ನು ರಾಜ್ಯ ಸರ್ಕಾರವು ಜನರ ಆರೋಗ್ಯದ ದೃಷ್ಟಿಯಿಂದ ನಿಷೇಧಿಸಿರುವುದು ಸ್ವಾಗತಾರ್ಹ. ರಾಸಾಯನಿಕ ಬಳಸದ ಗೋಬಿ ಮತ್ತು ಕಾಟನ್ ಕ್ಯಾಂಡಿಗಳಿಗೆ ನಿಷೇಧವಿಲ್ಲ ಎಂದಿದೆ. ಆದರೆ, ಇದರ ಪರಿಣಾಮಕಾರಿ ಜಾರಿ ಸಾಧ್ಯವೇ? ಹೋಟೆಲ್ ಅಥವಾ ಬೀದಿ ಬದಿಯ ವ್ಯಾಪಾರಸ್ಥರು 'ನಮ್ಮ ಆಹಾರದಲ್ಲಿ ರಾಸಾಯನಿಕ ಬಳಸಿಲ್ಲ' ಎಂದು ಬೋರ್ಡ್ ಹಾಕುತ್ತಾರೆಯೇ? ಹಾಕಿದರೂ ಅದು ನಂಬಲರ್ಹವೇ? ಗ್ರಾಹಕರು ಪ್ರತಿ ತಟ್ಟೆಯನ್ನೂ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಿಸಿ ತಿನ್ನಲಾಗುವುದೇ? ಎಲ್ಲಾ ಅಂಗಡಿಗಳ ಮುಂದೆ ಅಧಿಕಾರಿಗಳನ್ನು, ಪರೀಕ್ಷಾ ಕೇಂದ್ರಗಳನ್ನು ನಿಯೋಜಿಸಲು ಸಾಧ್ಯವೇ? ಇವೆಲ್ಲಾ ಆಗದಮಾತು.

ಹಾಗಾಗಿ, ನಾಲಿಗೆಯ ರುಚಿಗೆ ಮಾರುಹೋಗಿರುವ ಜನ ಮತ್ತು ಅದರಲ್ಲೂ ಯುವಜನ ಕೂಡಲೇ ಎಚ್ಚೆತ್ತುಕೊಳ್ಳಬೇಕಿದೆ. ರಾಸಾಯನಿಕಗಳಿಂದ ಕ್ಯಾನ್ಸರ್‌ನಂತಹ ರೋಗಗಳಿಗೆ ತುತ್ತಾಗಬಹುದು ಎಂಬ ಅರಿವು ಹೊಂದಬೇಕಿದೆ. ಹಸಿವಿಗಾಗಿ ಆಹಾರ ಸೇವಿಸುವುದರ ಬದಲು ನಾಲಿಗೆಯ ರುಚಿಗಾಗಿ ಜನ ಜಂಕ್‌ಫುಡ್ ಸೇವಿಸುತ್ತಾರೆ. ನಮ್ಮ ಹಿರಿಯರು ನಮ್ಮ ಸಹಜ ಸಾಂಪ್ರದಾಯಿಕ ಆಹಾರಗಳನ್ನೇ ನಿಯಮಿತವಾಗಿ ಸೇವಿಸುತ್ತಾ ಆರೋಗ್ಯವಂತರಾಗಿ ಲವಲವಿಕೆಯಿಂದ ಇರುತ್ತಿದ್ದರು. ಅಲ್ಲದೆ ದೀರ್ಘಾಯುಷಿಗಳಾಗಿ ಬಾಳಿದರು ಎಂಬುದನ್ನು ಗಮನಿಸಬೇಕಿದೆ. ಅಪರೂಪಕ್ಕೆ ಮನದ ಬಯಕೆ ಈಡೇರಿಸಿಕೊಳ್ಳಲು ಜಂಕ್‌ಫುಡ್ ಸೇವಿಸಿದರೆ ಬಹುಶಃ ತೊಂದರೆ ಇರಲಾರದು. ಆದರೆ ಅದು 'ಚಟ' ಆಗದಿರಲಿ. ಜನ ಸ್ವಯಂ ಕಡಿವಾಣ ಹಾಕಿಕೊಂಡು ಆರೋಗ್ಯ ಕಾಪಾಡಿಕೊಳ್ಳಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ರಾಜ...ಕಾರಣ!

ರಾಜಕಾರಣದಲ್ಲಿ
ಯಾರು ಏನು ಬೇಕಾದರೂ
ಆಗಬಹುದು?!
ನಾಳೆ ಚುನಾವಣೆಯಲ್ಲಿ
ರಾಜರು ಗೆದ್ದು,
ಆಗಲೂಬಹುದು ಮಂತ್ರಿ!

ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣಾ ಬಾಂಡ್



ಹೆಚ್ಚು ದೇಣಿಗೆ ನೀಡಿದ ಕಂಪನಿಗೆ ಲಕ್ಷ ಕೋಟಿಗೂ ಹೆಚ್ಚು ಗುತ್ತಿಗೆ



● ಜಯಸಿಂಹ ಆರ್.

ಚುನಾವಣಾ ಬಾಂಡ್ ಯೋಜನೆ ಅಡಿ ರಾಜಕೀಯ ಪಕ್ಷಗಳಿಗೆ ಎರಡನೇ ಅತಿಹೆಚ್ಚು ದೇಣಿಗೆ ನೀಡಿದ ಮೇಘಾ ಎಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (ಎಂಇಐಎಲ್), ನಿರ್ಮಾಣ ಕ್ಷೇತ್ರದಲ್ಲಿ ದೇಶದ ಎರಡನೇ ಅತ್ಯಂತ ದೊಡ್ಡ ಕಂಪನಿಯೂ ಹೌದು. ಹೈದರಾಬಾದ್‌ನ ಈ ಕಂಪನಿ ಆರಂಭವಾಗಿದ್ದು 1989ರಲ್ಲಿ. ಈಗ ನಿರ್ಮಾಣ, ಬಂದರು, ವಿದ್ಯುತ್ ಪ್ರಸರಣ, ನವೀಕರಿಸಬಹುದಾದ ವಿದ್ಯುತ್, ವಿದ್ಯುತ್ ಚಾಲಿತ ವಾಹನ, ಮಾಧ್ಯಮ ಕ್ಷೇತ್ರಗಳ ಒಟ್ಟು 86 ಕಂಪನಿಗಳನ್ನು ಎಂಇಐಎಲ್ ಹೊಂದಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದ ನಂತರ ಈ ಕಂಪನಿಯ ಪ್ರಗತಿ ಹಲವು ಪಟ್ಟು ಏರಿಕೆಯಾಗಿದೆ. ಚುನಾವಣಾ ಬಾಂಡ್ ಮೂಲಕ ಈ ಕಂಪನಿ ಮತ್ತು ಅದರ ಅಧೀನ ಕಂಪನಿಗಳು ಒಟ್ಟು ₹1,200 ಕೋಟಿಯಷ್ಟು ದೇಣಿಗೆಯನ್ನು ರಾಜಕೀಯ ಪಕ್ಷಗಳಿಗೆ ನೀಡಿವೆ. ಈ ದೇಣಿಗೆ ಯಾವೆಲ್ಲಾ ಪಕ್ಷಗಳಿಗೆ ಹೋಗಿದೆ ಎಂಬುದು ಇನ್ನಷ್ಟೇ ಪತ್ತೆಯಾಗಬೇಕಿದೆ.

2014–2023ರ ನಡುವೆ ಈ ಕಂಪನಿಯು ದೇಶದ ಎಲ್ಲಾ ಪ್ರಮುಖ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಲ್ಲಿ ಭಾಗಿಯಾಗಿದೆ. ಭಾರತಮಾಲಾ ಯೋಜನೆ, ಛಾರ್ ಧಾಮ್ ರೈಲು ಯೋಜನೆ, ಬುಲೆಟ್ ರೈಲು ಯೋಜನೆ, ಸಮೃದ್ಧಿ ಎಕ್ಸ್‌ಪ್ರೆಸ್ ವೇ ಯೋಜನೆ, ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್‌ವೇ ಯೋಜನೆ, ಸೂರತ್–ಚೆನ್ನೈ ಆರ್ಥಿಕ ಕಾರಿಡಾರ್ ಯೋಜನೆ, ಬೆಂಗಳೂರು–ವಿಜಯವಾಡ ಎಕ್ಸ್‌ಪ್ರೆಸ್‌ವೇ ಯೋಜನೆ ಸೇರಿದಂತೆ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದ ಬಹುತೇಕ ಎಲ್ಲಾ ಯೋಜನೆಗಳಲ್ಲೂ ಈ ಕಂಪನಿ ಗುತ್ತಿಗೆ ಪಡೆದುಕೊಂಡಿದೆ.

ಹೆದ್ದಾರಿಗಳು ಮಾತ್ರವಲ್ಲ ನೀರಾವರಿ ಯೋಜನೆ, ಏತ ನೀರಾವರಿ ಯೋಜನೆ, ಬುಲೆಟ್ ರೈಲು ನಿಲ್ದಾಣ ಯೋಜನೆ, ಕೈಗಾರಿಕಾ ತ್ಯಾಜ್ಯ ಸಾಗಣೆ ಕೊಳವೆಮಾರ್ಗ ಯೋಜನೆ, ಸುರಂಗ ಮಾರ್ಗಗಳಂತಹ ಯೋಜನೆಗಳನ್ನೂ ಈ ಕಂಪನಿ ನಿರ್ವಹಿಸುತ್ತಿದೆ. ಬಹುತೇಕ ಈ ಎಲ್ಲಾ ಯೋಜನೆಗಳ ಗುತ್ತಿಗೆ ಈ ಕಂಪನಿಗೆ ದೊರೆತಿರುವುದು 2015–16ರ ನಂತರ. 2018–19ರ ನಂತರ ಕಂಪನಿಗೆ ದೊರೆತ ಯೋಜನೆಗಳ ಸಂಖ್ಯೆ ಏರಿಕೆಯಾಗಿದೆ. ಕ್ರಿಸಿಲ್ ವರದಿಯ ಪ್ರಕಾರ 2023ರ ಸೆಪ್ಟೆಂಬರ್ ವೇಳೆಗೆ ಎಂಇಐಎಲ್ ಬಳಿ ಒಟ್ಟು ₹1.87 ಲಕ್ಷ ಕೋಟಿ ಮೊತ್ತದಷ್ಟು ಯೋಜನೆಗಳು ಇದ್ದವು. 2022ರಲ್ಲಿ ಕಂಪನಿಗೆ ದೊರೆತ ಒಟ್ಟು ಯೋಜನೆಗಳಲ್ಲಿ ಶೇ 70ರಷ್ಟು ಯೋಜನೆಗಳು ಕೇಂದ್ರ ಸರ್ಕಾರದ್ದೇ ಆಗಿದ್ದವು. 2023 ಮತ್ತು 2024ರಲ್ಲಿ ಕಂಪನಿಗೆ ದೊರೆತ ಯೋಜನೆಗಳ ಸಂಖ್ಯೆ ಮತ್ತು ಯೋಜನೆಗಳ ಮೊತ್ತ ಇನ್ನಷ್ಟು ಏರಿಕೆಯಾಗಿದೆ.

₹1.53 ಲಕ್ಷ ಕೋಟಿ

2014ರಿಂದ 2023ರ ಅಂತ್ಯದವರೆಗೆ ಎಂಇಐಎಲ್ ಮತ್ತು ಅದರ ಅಧೀನ ಕಂಪನಿಗಳಿಗೆ ಗುತ್ತಿಗೆ ದೊರೆತ ಮೂಲಸೌಕರ್ಯ ನಿರ್ಮಾಣ ಯೋಜನೆಗಳ ಒಟ್ಟು ಮೊತ್ತ (ಇದರಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದ ಯೋಜನೆಗಳು, ವಿದೇಶದಲ್ಲಿ ಭಾರತ ಸರ್ಕಾರದ ಯೋಜನೆಗಳ ಮೊತ್ತವೂ ಸೇರಿದೆ. ಕೆಪಿಎಸ್1 ವಿದ್ಯುತ್ ಪ್ರಸರಣ ಯೋಜನೆಯ ನಿರ್ಮಾಣ ಗುತ್ತಿಗೆಯ ವರ್ಗಾವಣೆ ಮತ್ತು ಛಾರ್ ಧಾಮ್ ರೈಲು ಸುರಂಗ ಯೋಜನೆಯ ವಿವರ ಇದರಲ್ಲಿ ಸೇರಿಲ್ಲ)

₹1,232 ಕೋಟಿ

ಎಂಇಐಎಲ್ ಮತ್ತು ಅದರ ಅಧೀನ ಸಂಸ್ಥೆಗಳು ಚುನಾವಣಾ ಬಾಂಡ್ ಮೂಲಕ ನೀಡಿದ ಒಟ್ಟು ದೇಣಿಗೆ ಮೊತ್ತ

₹1.87 ಲಕ್ಷ ಕೋಟಿ


ಎಂಇಐಎಲ್ ಮತ್ತು ಅದರ ಅಧೀನ ಸಂಸ್ಥೆಗಳ ಬಳಿ ಸೆಪ್ಟೆಂಬರ್ 2023ರ ಅಂತ್ಯಕ್ಕೆ ಇದ್ದ ಒಟ್ಟು ಯೋಜನೆಗಳ ಮೊತ್ತ

₹966 ಕೋಟಿ — ಎಂಇಐಎಲ್ ಒಂದೇ ನೀಡಿದ ದೇಣಿಗೆಯ ಮೊತ್ತ

₹220 ಕೋಟಿ — ಎಂಇಐಎಲ್ ಒಡೆತನದ ಪಶ್ಚಿಮ ಉತ್ತರಪ್ರದೇಶ ವಿದ್ಯುತ್ ಪ್ರಸರಣ ಕಂಪನಿ ಲಿಮಿಟೆಡ್ ನೀಡಿದ ದೇಣಿಗೆಯ ಮೊತ್ತ

₹40 ಕೋಟಿ — ಎಂಇಐಎಲ್ ಒಡೆತನದ ಎಸ್‌ಸಿಪಿಪಿ ನೀಡಿದ ದೇಣಿಗೆಯ ಮೊತ್ತ

₹6 ಕೋಟಿ — ಎಂಇಐಎಲ್ ಒಡೆತನದ ಇಟಿಪಿಎಲ್ ನೀಡಿದ ದೇಣಿಗೆಯ ಮೊತ್ತ



ಜಮ್ಮು-ಕಾಶ್ಮೀರ
- ಜೊಜಿಲಾ ಸರ್ವಋತು ಸುರಂಗಮಾರ್ಗ ₹4,509 ಕೋಟಿ

ಉತ್ತರಾಖಂಡ
- ಛಾರ್‌ಧಾಮ್ ರೈಲು ಸುರಂಗ ₹16,200 ಕೋಟಿ (ಇತರ ಆರು ಕಂಪನಿಗಳೊಂದಿಗೆ ಕಾರ್ಯನಿರ್ವಹಣೆ)

ಬಿಹಾರ
- ಸಿವಾನ್–ಮಶ್ರಕ್ ಹೆದ್ದಾರಿ ₹1,399.22 ಕೋಟಿ

ಗುಜರಾತ್
- ಜೇತ್ಪುರ ಕೈಗಾರಿಕಾ ಕೊಳವೆಮಾರ್ಗ ಯೋಜನೆ ₹2,300 ಕೋಟಿ

ಮಹಾರಾಷ್ಟ್ರ
- ರತ್ನಗಿರಿ–ಕೊಲ್ಲಾಪುರ ಹೆದ್ದಾರಿ ₹986 ಕೋಟಿ
- ಥಾಣೆ–ಬೊರಿವಲಿ ಸುರಂಗ ಯೋಜನೆ ₹14,396 ಕೋಟಿ
- ಬಾಂದ್ರಾ–ಕುರ್ಲಾ ಬುಲೆಟ್ ರೈಲು ನಿಲ್ದಾಣ ಸಂಕೀರ್ಣ ₹3,681 ಕೋಟಿ

ತೆಲಂಗಾಣ
- ಅಪ್ಪಾ ಜಂಕ್ಷನ್–ಮನ್ನೇಗುಡ ಹೆದ್ದಾರಿ ₹1,130.42 ಕೋಟಿ
- ಕಲ್ಲೇಶ್ವರ ಏತ ನೀರಾವರಿ ಯೋಜನೆ (ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ) ₹80,000 ಕೋಟಿ

ಕೇರಳ
- ಚೆಂಗಳ–ನೀಲೇಶ್ವರ ರಾಷ್ಟ್ರೀಯ ಹೆದ್ದಾರಿ. ₹2,349.22 ಕೋಟಿ
- ನೀಲೇಶ್ವರ–ತಳಿಪ್ಪರಂಬ ರಾಷ್ಟ್ರೀಯ ಹೆದ್ದಾರಿ ₹3,799.76 ಕೋಟಿ

ಉತ್ತರ ಪ್ರದೇಶ
- ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ₹2,852.31 ಕೋಟಿ
- ಕೆಪಿಎಸ್1 ವಿದ್ಯುತ್ ಪ್ರಸರಣ ಯೋಜನೆ ₹70,974 ಕೋಟಿ (ಸರ್ಕಾರಿ ಸ್ವಾಮ್ಯದ ಕಂಪನಿಯಿಂದ ಎಂಇಐಎಲ್‌ಗೆ ಇಡೀ ಯೋಜನೆ ವರ್ಗಾವಣೆ)
- ಪಶ್ಚಿಮ ಉತ್ತರಪ್ರದೇಶ ವಿದ್ಯುತ್ ಪ್ರಸರಣ ಯೋಜನೆ ₹4,150 ಕೋಟಿ

ಅಸ್ಸಾಂ
- ಅಸ್ಸಾಂ ತೈಲ ಸಂಸ್ಕರಣ ಯೋಜನೆ ₹2,400 ಕೋಟಿ

ಒಡಿಶಾ
- ಭುವನೇಶ್ವರ ಬಲ್ಕ್ ವಾಟರ್ ಪ್ರಾಜೆಕ್ಟ್ ₹589 ಕೋಟಿ

ಕರ್ನಾಟಕ–ಆಂಧ್ರ ಪ್ರದೇಶ
- ವಿಜಯವಾಡ ಬೈಪಾಸ್ ₹1,325.33 ಕೋಟಿ
- ರೇಣಿಗುಂಟ–ನಾಯ್ಡುಪೇಟ ರಾಷ್ಟ್ರೀಯ ಹೆದ್ದಾರಿ ₹2,237.99 ಕೋಟಿ
- ಅನಂತರಪುರ ಹೆದ್ದಾರಿ ಮೇಲ್ದರ್ಜೆ ₹972.96 ಕೋಟಿ
- ಚಿಲಕಾರು–ಪೋರ್ಟ್ ಸೌಥ್ ಗೇಟ್ ಹೆದ್ದಾರಿ ಮೇಲ್ದರ್ಜೆ ₹909.24 ಕೋಟಿ
- ಬೆಂಗಳೂರು–ವಿಜಯವಾಡ ₹7,320.18 ಕೋಟಿ
- ಅಕ್ಕಲಕೋಟ–ಕರ್ನೂಲು ಎಕ್ಸ್‌ಪ್ರೆಸ್ ಹೆದ್ದಾರಿ ₹2,359.76 ಕೋಟಿ
- ಪೋಲವರಂ ನೀರಾವರಿ ಯೋಜನೆ ₹4,351 ಕೋಟಿ



ಮಧ್ಯ ಪ್ರದೇಶ–ಮಹಾರಾಷ್ಟ್ರ
- ಇಂದೋರ್–ಎದ್ಲಾಬಾದ್ ರಾಷ್ಟ್ರೀಯ ಹೆದ್ದಾರಿ ₹1,162.08 ಕೋಟಿ

ಪಂಜಾಬ್–ಹರಿಯಾಣ
- ಪಠಾಣ್‌ಕೋಟ್–ಗುರುದಾಸಪುರ ಪ್ರವೇಶ ನಿಯಂತ್ರಿತ ಹೆದ್ದಾರಿ ₹3,044.02 ಕೋಟಿ

ಮಧ್ಯ ಪ್ರದೇಶ–ತೆಲಂಗಾಣ–ಆಂಧ್ರ ಪ್ರದೇಶ
- ನಾಗ್ಪುರ–ವಿಜಯವಾಡ ಕಾರಿಡಾರ್ ₹3,185.41 ಕೋಟಿ

ಮಾರುಕಟ್ಟೆ ಮೌಲ್ಯ ಭಾರಿ ಏರಿಕೆ


₹67,500 ಕೋಟಿ — 2024ರ ಫೆಬ್ರುವರಿಯಲ್ಲಿ ಎಂಇಐಎಲ್ ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ

₹52,583 ಕೋಟಿ — 2023ರ ಫೆಬ್ರುವರಿಯಲ್ಲಿ ಎಂಇಐಎಲ್ ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ

₹14,917 ಕೋಟಿ — ಒಂದು ವರ್ಷದ ಅವಧಿಯಲ್ಲಿ ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ಆದ ಏರಿಕೆ

22.1% — ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ಆದ ಏರಿಕೆ ಪ್ರಮಾಣ

ಕಂಪನಿಯ ಮೌಲ್ಯವೂ ಏರಿಕೆ



* ಕಂಪನಿಯ ಮಾರುಕಟ್ಟೆ ಮೌಲ್ಯದಲ್ಲಿ ಸಾಲದ ಮೊತ್ತವನ್ನು ಹೊರತುಪಡಿಸಿದಾಗ ದೊರೆಯುವ ಮೊತ್ತ. ಕಂಪನಿಯ ಎಲ್ಲಾ ಸ್ವತ್ತುಗಳ ಮೌಲ್ಯ

ಮಂಗೋಲಿಯಾ: ₹5,400 ಕೋಟಿ ಯೋಜನೆ

ಮಂಗೋಲಿಯಾ ತೈಲ ಸಂಸ್ಕರಣ ಘಟಕ ಯೋಜನೆಯ ನಿರ್ಮಾಣ ಗುತ್ತಿಗೆಯನ್ನು ಎಂಇಐಎಲ್ ಪಡೆದುಕೊಂಡಿದೆ. ಇದು ಭಾರತ ಸರ್ಕಾರ ಮತ್ತು ಮಂಗೋಲಿಯಾ ಸರ್ಕಾರದ ನಡುವಣ ಯೋಜನೆಯಾಗಿದ್ದು, ಎಂಇಐಎಲ್‌ಗೆ ಈ ಯೋಜನೆಯ ಗುತ್ತಿಗೆ ದೊರೆತಿದೆ.

ಆಧಾರ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಲೋಕಸಭೆಯಲ್ಲಿ ನೀಡಿದ ಮಾಹಿತಿಗಳು, ಕ್ರಿಸಿಲ್ ವರದಿ, ರಾಯಿಟರ್ಸ್ ಮತ್ತು ಪಿಟಿಐ, ಎಂಇಐಎಲ್‌ನ ಅಧೀನ ಕಂಪನಿಗಳ ವಾರ್ಷಿಕ ವರದಿಗಳು, ಫೋರ್ಬ್ಸ್ ವರದಿಗಳು

ಚುನಾವಣಾ ಬಾಂಡ್ ಸರಣಿ ಮುಂದುವರಿಯಲಿದೆ...



ವೀರೇಶ್‌ಗೋನವಾರ

ಲಾಕ್‌ಡೌನ್ ಸಂಕಷ್ಟ ಕಟ್ಟಿಕೊಟ್ಟ ಚಿತ್ರ

ಸಾವಿರಾರು ವಲಸೆ ಕಾರ್ಮಿಕರು ಕೋವಿಡ್‌ನ ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಕೆಲಸ ಮಾಡುತ್ತಿದ್ದ ನಗರಗಳಿಂದ ತಮ್ಮೂರಿಗೆ ಮರಳುವಾಗ ಸಂಭವಿಸಿದ ದುರ್ಘಟನೆಗಳನ್ನು ದಿನಪತ್ರಿಕೆಗಳಲ್ಲಿ, ನ್ಯೂಸ್ ಚಾನೆಲ್‌ಗಳಲ್ಲಿ ನೋಡಿರುತ್ತೇವೆ. ಅಂತಹ ಒಂದು ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು 'ಫೋಟೋ' ಸೆರೆಹಿಡಿದಿದ್ದಾರೆ ನಿರ್ದೇಶಕ ಉತ್ಸವ್ ಗೋನವಾರ.

ನಾವು ನೋಡಿದ ಸಿನಿಮಾ

ಫೋಟೋ (ಕನ್ನಡ)
- ನಿರ್ದೇಶನ ಮತ್ತು ನಿರ್ಮಾಣ: ಉತ್ಸವ್ ಗೋನವಾರ
- ತಾರಾಗಣ: ವೀರೇಶ್ ಗೋನವಾರ, ಮಹಾದೇವ ಹಡಪದ, ಸಂಧ್ಯಾ ಅರಕೆರೆ, ಜಹಾಂಗೀರ್, ಗಾಯತ್ರಿ ಹೆಗ್ಗೋಡು ಮತ್ತಿತರರು

ಲಾಕ್‌ಡೌನ್ ದಿನಗಳಲ್ಲಿ ಜಗತ್ತಿನ ಒಂದು ವರ್ಗವು ಹೊಸ ಬಗೆಯ ಕಾಫಿ, ಸ್ನ್ಯಾಕ್ಸ್ ತಯಾರಿಯಲ್ಲಿ ಮುಳುಗಿದ್ದ ವೇಳೆಯಲ್ಲಿ ಮತ್ತೊಂದು ವರ್ಗ ಅನುಭವಿಸಿದ ಸಂಕಷ್ಟಗಳನ್ನು ಸೂಕ್ಷ್ಮವಾಗಿ ತೆರೆಯ ಮೇಲೆ ತಂದಿದ್ದಾರೆ ನಿರ್ದೇಶಕರು. ಕಥಾಹಂದರ ಸರಳವಾಗಿದೆ. ಉತ್ತರ ಕರ್ನಾಟಕದ ಹಳ್ಳಿಯೊಂದರಲ್ಲಿ ಪ್ರಾಥಮಿಕ ಶಾಲೆ ಓದುತ್ತಿರುವ ಹುಡುಗ 'ದುರ್ಗ್ಯ'(ವೀರೇಶ್ ಗೋನವಾರ). ತಾಯಿ ಗಂಗಮ್ಮನೊಂದಿಗೆ ವಾಸ. ತಂದೆ ಗ್ಯಾನಪ್ಪ ಬೆಂಗಳೂರಿನಲ್ಲಿ ದಿನಗೂಲಿ ಕಟ್ಟಡ ಕಾರ್ಮಿಕ. ಊರಿನಲ್ಲಿರುವ ಕೊಂಚ ಶ್ರೀಮಂತರ ಮನೆಗಳಲ್ಲಿರುವ 'ಫೋಟೋ'ಗಳ ಮೇಲೆ ದುರ್ಗ್ಯನ ಕಣ್ಣು. ಅದರಲ್ಲಿರುವಂತೆ ವಿಧಾನಸೌಧದ ಮುಂದೊಮ್ಮೆ ಫೋಟೋ ತೆಗೆಸಿಕೊಳ್ಳುವ ಆಸೆ. ಜೊತೆಗೆ ಡಿ–ಬಾಸ್ ನೋಡುವ ಇಚ್ಛೆ. ಅಮ್ಮನಿಗೆ ಗಂಟುಬಿದ್ದು ಅಪ್ಪನ ಮಡಿಲು ಸೇರುತ್ತಾನೆ. ಅದೇ ಸಂದರ್ಭದಲ್ಲಿ ಕೋವಿಡ್ ಲಾಕ್‌ಡೌನ್ ಹೇರಿಕೆಯಾಗುತ್ತದೆ. ಅಪ್ಪ–ಮಗನ ಮುಂದಿನ ಪಯಣವೇ ಸಿನಿಮಾದ ಕಥಾಹಂದರ.

ಇದು ಸಿದ್ಧಸೂತ್ರದ ಸಿನಿಮಾವಲ್ಲ. ಕಿರುಚಿತ್ರವೊಂದು ಸಿನಿಮಾವಾಗಿರುವುದರ ಎಲ್ಲ ಲಕ್ಷಣಗಳೂ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಮೌನ ಅಗತ್ಯಕ್ಕಿಂತ ಅಧಿಕವಾಗಿದೆ. ಕೆಲ ದೃಶ್ಯಗಳ ಬಳಿಕ ಬರುವ ಫೇಡ್‌ಔಟ್‌ಗಳು, ಪ್ರತಿ ದೃಶ್ಯ ಕೊನೆಯಾದ ಬಳಿಕ ಚಲಿಸದೇ ಉಳಿಯುವ ಕ್ಯಾಮೆರಾ..ಹೀಗೆ ಚಿತ್ರಕಥೆಯಲ್ಲಿ ಹಲವು ಪ್ರಯೋಗಗಳನ್ನು ನಿರ್ದೇಶಕರು ಮಾಡಿದ್ದಾರೆ. 'ಫೋಟೋ'ದಂತೆ ಇವುಗಳು ಭಾಸವಾಗುತ್ತದೆ. ರೂಪಕಗಳನ್ನು ಬಳಸಿಕೊಂಡು ಚಿತ್ರಕಥೆ ಹೆಣೆಯಲಾಗಿದೆ. ಕೆಲವೊಂದು ದೃಶ್ಯಗಳನ್ನು ಸೆರೆಹಿಡಿದಿರುವ ರೀತಿ ಅದ್ಭುತವಾಗಿದೆ. ತಂದೆ–ಮಗ ನಡೆದು ಹೋಗುತ್ತಿರುವ ದೃಶ್ಯ, ಕ್ಲೈಮ್ಯಾಕ್ಸ್‌ನಲ್ಲಿ ಮಗನನ್ನು ಹೆಗಲ ಮೇಲೆ ಹೊತ್ತು ಅಪ್ಪ ಓಡುವ ಡ್ರೋನ್ ದೃಶ್ಯ ಚಿತ್ರದ ಮೂಲಕಥೆಯನ್ನು ಗಾಢವಾಗಿ ಹೇಳುತ್ತವೆ. ಹಿನ್ನೆಲೆ ಸಂಗೀತವಿಲ್ಲದೆ ದೃಶ್ಯಗಳು ಸಾಗುವುದು ನೋಡುಗನನ್ನು ಚಿತ್ರದೊಳಗೆ ತಲ್ಲೀನವಾಗಿಸುತ್ತದೆ. ಲಾಕ್‌ಡೌನ್ ಸಂದರ್ಭದಲ್ಲಿ ಜನರ ಕೃತಕ, ಅಮಾನವೀಯ ನಡವಳಿಕೆಗಳನ್ನು ನಿರ್ದೇಶಕರು ಸಂಕ್ಷಿಪ್ತವಾಗಿ ತೋರಿಸಿದ್ದಾರೆ. ಉತ್ತರ ಕರ್ನಾಟಕದ ಜನರಿಗೆ ಮಾತೂ ಒಂದು ಸಂಪತ್ತು. ಹಿಂಗಿದ್ದೂ, ಚಿತ್ರದ ಪಯಣದುದ್ದಕ್ಕೂ ಪಾತ್ರಗಳು ಸಂಪೂರ್ಣ ಮೌನವಹಿಸಿರುವುದು ದೃಶ್ಯಗಳನ್ನು ಕೃತಕವಾಗಿಸಿವೆ. ಆದರೂ ಇರುವ ಕೆಲ ಸಂಭಾಷಣೆಗಳು ದಟ್ಟವಾದ ಪ್ರಭಾವ ಬೀರುವಂತಿದೆ.

ನಟನೆಯಲ್ಲಿ ಬಾಲನಟ ವೀರೇಶ್ ಗೋನವಾರ ಮನಸ್ಸಿನಲ್ಲಿ ಉಳಿಯುತ್ತಾನೆ. ವಿಧಾನಸೌಧದ ಎದುರಿಗೆ ಫೋಟೋ ತೆಗೆಸಿಕೊಳ್ಳುವ ಕನಸನ್ನು ಹೊತ್ತ ಮುಗ್ಧ ಬಾಲಕನಾಗಿ ತೆರೆಯನ್ನು ಆವರಿಸಿಕೊಳ್ಳುತ್ತಾನೆ. ತಂದೆ ಪಾತ್ರದಲ್ಲಿ ಮಹಾದೇವ ಹಡಪದ ಹಾಗೂ ತಾಯಿಯಾಗಿ ಸಂಧ್ಯಾ ಅರಕೆರೆ ಹಾಗೂ ಜಹಾಂಗೀರ್ ತಮ್ಮ ಪಾತ್ರಗಳಲ್ಲಿ ಜೀವಿಸಿದ್ದಾರೆ. ಚಿತ್ರವು ಕೊಂಚ ಸಮಯ ಮನಸ್ಸಿನಲ್ಲಿ ಗಾಢವಾಗಿ ಉಳಿಯುತ್ತದೆ. ❖

ಪದಬಂಧ 5622


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗಾಳಿಯಿಂದ ಕೂಡಿದ ಪ್ರದೇಶ (5)
3.ಇನ್ನೂ ಕರು ಹಾಕದಿರುವ ಹಸು (3)
5.ರಾಜ್ಯದ ಚುನಾಯಿತ ಶಾಸಕರ ಮಂಡಳಿ (5)
7.ಕೊನೆ ಅಥವಾ ಮುಕ್ತಾಯ (3)
8.ನವಜೀವನವಿದು (5)
11.ಮುಸುಕು ಹೊದ್ದು ಮಲಗಿದ್ದಾಗ ಬಿದ್ದಿರುವ ಸ್ವಪ್ನ (3)
12.ಕಾಡಿನ ರಕ್ಷಕನಿವನು (5)
14.ಮಸ್ತಿಷ್ಕ ಇಲ್ಲಿದೆ (3)
15.ಜನಕನಿಗೆ ಪೂರೈಕೆಯಾಗುತ್ತಿರುವ ಪ್ರಾಣವಾಯು (5)

ಮೇಲಿಂದ ಕೆಳಕ್ಕೆ

1.ಕಲ್ಪನೆಯಲ್ಲ ನಿಜವಾಗಿ ಇರುವಂಥದ್ದು (4)
2.ವನದೊಳಗೆ ಬೋಳಿಸುವಿಕೆ (3)
4.ನಿದ್ರಾವಸ್ಥೆಯನ್ನು ಹೀಗೆನ್ನಿ (3)
6.ಮಾಸದ ಕೊನೆಯಲ್ಲಿ ಒಂದಾಗಿ ಸೇರಿಸಿದುದು (3)
7.ಸರದ ಜೊತೆಯಲ್ಲಿರಿಸಿದ ಸಾಮಾನು (3)
8.ಹೊಲದ ಆಸುಪಾಸು ಕೊಳಕು ಕಾಣಿಸಿದೆಯಲ್ಲಾ? (3)
9.ಸ್ವೀಕರಿಸಲು ಹಿತವಲ್ಲದ ದಾನ (3)
10.ಕಳಂಕ ಇಲ್ಲದಿರುವುದು (4)
11.ಹೆಚ್ಚು ಪದದ ಉಲ್ಟಾ ಪದ (3)
13.ಪಾದರಸವನ್ನು ಹೀಗೂ ಹೇಳುವರು (3)



5621ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಹಲುಬೆ 4.ದಟ್ಟಣೆ
5.ಹರಕತ್ತು 6.ಬಲಿಪೀಠ
8.ಹರ 10.ದಿನ
13.ದಾರ್ಶನಿಕ 14.ಹರಿದಾರಿ
15.ರಮಣಿ 16.ಓರಣ

ಮೇಲಿಂದ ಕೆಳಕ್ಕೆ

1.ಉದರಂಭರಣ 2.ಹಣೆಬರಹ
3.ನಕಲಿ 5.ಹಠವಾದಿ
7.ಅನುಕ್ರಮಣಿಕೆ 9.ರಹದಾರಿ
11.ನವೀಕರಣ 12.ಸರಿಗೆ

ಸುಡೊಕು 6007

		6			8	5		1
			2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6006 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮಾರ್ಚ್ 16, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಸಪ್ತಮಿ ಗಂ. 21-39 ನಕ್ಷತ್ರ: ರೋಹಿಣಿ ಗಂ. 16-06 ಯೋಗ: ಪ್ರೀತಿ ಗಂ. 18-08 ಕರಣ: ಗರ ಗಂ. 09-49, ಮೀನ ಮಾಸದ 02 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 4.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-40 **ಸೂರ್ಯಾಸ್ತ :** 06-38
ಮುಸ್ಲಿಂ ದಿನಾಂಕ : 05 ರಂಜಾನ್
ಅದೃಷ್ಟ ಸಂಖ್ಯೆ : 11, 7

ಮೇಷ: ತರಬೇತಿ ಕಲಿಕೆಯಿಂದ ಆಫೀಸಿನ ಕೆಲಸಗಳನ್ನು ತಿಳಿದುಕೊಳ್ಳುವ ಅವಕಾಶ ಸಿಗುತ್ತದೆ. ಸರ್ಕಾರಿ ಸಂಸ್ಥೆಗಳಲ್ಲಿ ಉಪನ್ಯಾಸ ಕೈಗೊಳ್ಳುವ ಅವಕಾಶ ಇದೆ. ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ನಿವಾರಣೆಯಾಗಲಿವೆ.

ವೃಷಭ: ಸಾಮಾಜಿಕ ಕ್ಷೇತ್ರದಲ್ಲಿ ಹೆಸರು ಸಂಪಾದನೆ ಮಾಡುವ ಅಪೇಕ್ಷಿಗಳಿಗೆ ಹಲವು ಉತ್ತಮ ಅವಕಾಶಗಳು ಎದುರಾಗುವುದು. ರಿಯಲ್ ಎಸ್ಟೇಟ್‌ದಾರರಿಗೆ ಧನಲಾಭದಿಂದ ವ್ಯವಹಾರಗಳು ವೃದ್ಧಿಗೊಳ್ಳಲಿದೆ.

ಮಿಥುನ: ಗುರಿಯನ್ನು ತಲುಪುವಲ್ಲಿ ನಿಮ್ಮ ಪರಿಶ್ರಮದ ಕೊರತೆ ಮತ್ತು ಅದೃಷ್ಟಹೀನತೆ ಸಮಬಲ ಸಾಧಿಸುವುದು. ನೀವು ತೆಗೆದುಕೊಳ್ಳುವ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳು ಸಂತಸ ಹೊಂದುವರು.

ಕರ್ಕಾಟಕ: ಶತ್ರುಗಳೊಂದಿಗೆ ಇರುವ ಕಲಹ ಅಥವಾ ವಿವಾದದಿಂದ ಬಿಡುಗಡೆಯಾಗುವ ಮಾರ್ಗವನ್ನು ಹುಡುಕಿಕೊಳ್ಳಿರಿ. ಆರ್ಥಿಕ ವಿಚಾರದಲ್ಲಿ ಧನಾಗಮನದಿಂದ ಕಾರ್ಯಾನುಕೂಲಕ್ಕೆ ಹೆಚ್ಚಿನ ಬಲ ಸಿಗುವುದು.

ಸಿಂಹ: ಯಾವುದೇ ಅಡಚಣೆಗಳು ಇಲ್ಲದೆ, ಅಪಾರವಾದ ಜನಬಲ ದೊರೆತು ದೊಡ್ಡ ಕಾರ್ಯಗಳನ್ನು ಸಾಧಿಸುವಿರಿ. ಹೊಸ ವ್ಯವಹಾರದಲ್ಲಿ ಸ್ನೇಹಿತರ ಸಹಕಾರ ದೊರೆಯಲಿದೆ. ರಾಜಕೀಯ ವ್ಯಕ್ತಿಗಳಿಗೆ ಬಿಡುವಿಲ್ಲದ ಓಡಾಟ.

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/953/2023–24

7ನೇ ವೇತನ ಆಯೋಗದ ವರದಿ ಸಲ್ಲಿಕೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕುರಿತು ಅಧ್ಯಯನ ಮಾಡಿ, ವರದಿ ಸಲ್ಲಿಸಲು ರಚಿಸಲಾಗಿದ್ದ 7ನೇ ವೇತನ ಆಯೋಗದ ಅವಧಿ ಮಾರ್ಚ್ 15ಕ್ಕೆ ಮುಕ್ತಾಯವಾಗಿದ್ದು, ಶನಿವಾರ (ಮಾರ್ಚ್ 16) ಬೆಳಿಗ್ಗೆ 10ಕ್ಕೆ ವರದಿ ಸಲ್ಲಿಸಲಾಗುತ್ತಿದೆ.



ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ಅವರ ಅಧ್ಯಕ್ಷತೆಯಲ್ಲಿ 2022ರ ನವೆಂಬರ್ 19ರಂದು 7ನೇ ವೇತನ ಆಯೋಗ ರಚಿಸಿ 6 ತಿಂಗಳು ಗಡುವು ನೀಡಲಾಗಿತ್ತು. ಅವಧಿಯನ್ನು 2023 ಮೇ 15ರಿಂದ ನವೆಂಬರ್ 18ರವರೆಗೆ ವಿಸ್ತರಿಸಲಾಗಿತ್ತು. ನಂತರ 2ನೇ ಬಾರಿ ಇದೇ ಮಾರ್ಚ್ 15ರವರೆಗೆ ವಿಸ್ತರಿಸಲಾಗಿತ್ತು.

ಈ ಅವಧಿಯಲ್ಲಿ ಸರ್ಕಾರ ಶೇ 17ರಷ್ಟು ಮಧ್ಯಂತರ ಪರಿಹಾರ ಘೋಷಿಸಿತ್ತು. ಅದಕ್ಕಾಗಿ ವಾರ್ಷಿಕ ₹10 ಸಾವಿರ ಕೋಟಿ ಹೆಚ್ಚುವರಿ ನೀಡಲಾಗಿತ್ತು.

'ಆಯೋಗ ಅಧ್ಯಕ್ಷ ಮತ್ತು ಸದಸ್ಯರು ಮುಖ್ಯಮಂತ್ರಿಗೆ ವರದಿ ಸಲ್ಲಿಸುತ್ತಿದ್ದಾರೆ. ಚುನಾವಣಾ ನೀತಿ ಸಂಹಿತೆ ಜಾರಿಗೆ ಮುನ್ನ ಸರ್ಕಾರಿ ನೌಕರರಿಗೆ ಸರ್ಕಾರ ಸಿಹಿ ಸುದ್ದಿ ನೀಡುವ ನಿರೀಕ್ಷೆ ಇದೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಬಿಜೆಪಿಯಿಂದ ಚುನಾವಣಾ ಬಾಂಡ್ ವ್ಯವಸ್ಥೆ ದುರ್ಬಳಕೆ • ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

'ಸುಪ್ರೀಂ' ನೇತೃತ್ವದಲ್ಲಿ ತನಿಖೆಗೆ ಖರ್ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ದೇಣಿಗೆ ಸಂಗ್ರಹಿಸಿರುವ ಕುರಿತು ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ಉನ್ನತಮಟ್ಟದ ತನಿಖೆ ನಡೆಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚುನಾವಣಾ ಬಾಂಡ್ ಮೂಲಕ ಸಂಗ್ರಹಿಸಿರುವ ದೇಣಿಗೆಯ ವಿವರಗಳು ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ಬಹಿರಂಗವಾಗಿವೆ. ಚುನಾವಣಾ ಬಾಂಡ್ ವ್ಯವಸ್ಥೆಯನ್ನು ಬಿಜೆಪಿ ಹೇಗೆ ದುರ್ಬಳಕೆ ಮಾಡಿಕೊಂಡಿದೆ ಎಂಬುದು ಬಯಲಿಗೆ ಬಂದಿದೆ. ಈ ಕುರಿತು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ತನಿಖೆ ನಡೆಸಿ, ಕ್ರಮ ಜರುಗಿಸಬೇಕು' ಎಂದರು.

ಒಟ್ಟು ಖರೀದಿಯಾದ ಬಾಂಡ್‌ಗಲ್ಲಿ ಶೇ 50ರಷ್ಟು ಬಿಜೆಪಿಗೆ ಸಂದಾಯವಾಗಿವೆ. ಬಿಜೆಪಿಯು ಅಧಿಕಾರ ದುರ್ಬಳಕೆ ಮಾಡಿಕೊಂಡು ಹಣ ಸಂಗ್ರಹಿಸಿರುವುದರಿಂದ ತಕ್ಷಣವೇ ಆ ಪಕ್ಷದ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದರು.

'ಪ್ರಧಾನಿ ನರೇಂದ್ರ ಮೋದಿಯವರು ಮಾತೆತ್ತಿದರೆ ನಾನು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ ಎನ್ನುತ್ತಿದ್ದರು. ಪದೇ ಪದೇ ತನಿಖಾ ಸಂಸ್ಥೆಗಳಿಂದ ದಾಳಿಗೊಳಗಾದ ಕಂಪನಿಗಳು ಬಿಜೆಪಿಗೆ ನೂರಾರು ಕೋಟಿ ರೂಪಾಯಿ ಈ ಮೂಲಕ ದೇಣಿಗೆ ನೀಡಿವೆ' ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷಕ್ಕೆ ಶೇಕಡ 11ರಷ್ಟು ಬಾಂಡ್‌ಗಳು ಬಂದಿವೆ. ಆದರೆ, ಬಿಜೆಪಿಯಂತೆ ಒತ್ತಡ ಹೇರಿ ಹಣ ವಸೂಲಿ ಮಾಡಿಲ್ಲ. ಚುನಾವಣಾ ಬಾಂಡ್ ವಿಚಾರದಲ್ಲಿ ಬಿಜೆಪಿಯು ಏನೆಲ್ಲಾ ಮಾಡಿದೆ ಎಂಬುದು ಬಯಲಿಗೆ ಬರಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಮತ್ತಷ್ಟು ಬಾಂಡ್‌ಗಳ ಮಾಹಿತಿ ಎಲ್ಲಿ?'



ಮಲ್ಲಿಕಾರ್ಜುನ ಖರ್ಗೆ

'22,270 ಬಾಂಡ್‌ಗಳು ಖರೀದಿಯಾಗಿದ್ದವು. ಅವುಗಳಲ್ಲಿ 18,800 ಬಾಂಡ್‌ಗಳ ಮಾಹಿತಿಯನ್ನು ಮಾತ್ರ ಎಸ್‌ಬಿಐ ಬಹಿರಂಗ ಪಡಿಸಿದೆ. ಉಳಿದ ಬಾಂಡ್‌ಗಳ ಮಾಹಿತಿ ಎಲ್ಲಿದೆ? ಎಂಬ ವಿವರ ಬಹಿರಂಗವಾಗಬೇಕು' ಎಂದು ರಾಜ್ಯಸಭಾ ಸದಸ್ಯ ಅಜಯ್ ಮಾಕನ್ ಒತ್ತಾಯಿಸಿದರು.

ಬಿಜೆಪಿಯ ಭ್ರಷ್ಟ ಕುಟಿಲತಂತ್ರ ಬಯಲು: ಜೈರಾಂ ರಮೇಶ್

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆಯು ಅಸ್ತಿತ್ವದಲ್ಲಿಯೇ ಇಲ್ಲದ ಕಂಪನಿಗಳ ಹೆಸರಿನಲ್ಲಿ ಅಕ್ರಮ ಹಣ ವರ್ಗಾವಣೆ ಮತ್ತು ಕಂಪನಿಗಳಿಗೆ ರಕ್ಷಣೆ ಒದಗಿಸುವ ಅಭಯದೊಂದಿಗೆ ಲಂಚ ಪಡೆಯುವ ಕುಟಿಲನೀತಿ ಇದಾಗಿದೆ ಎಂದು ಕಾಂಗ್ರೆಸ್ ಪಕ್ಷ ಟೀಕಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್, 'ಇ.ಡಿ, ಸಿಬಿಐ ದಾಳಿಗೂ ಬಾಂಡ್ ದೇಣಿಗೆಗೂ ಸಂಬಂಧವಿದೆ ಎಂಬ ಹೇಳಿಕೆಗಳು ಊಹಾತ್ಮಕ' ಎಂಬ ಹೇಳಿದ್ದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧವೂ ಹರಿಹಾಯ್ದರು. 'ಯಾವ ಪಕ್ಷಕ್ಕೆ ಎಷ್ಟು ದೇಣಿಗೆ ಸಂದಾಯವಾಗಿದೆ ಎಂಬ ಪೂರ್ಣ ವಿವರಗಳನ್ನು ಅವರೇ ಬಹಿರಂಗಪಡಿಸಲಿ' ಎಂದು ಸವಾಲೆಸೆದರು.

'ಈಗ ಚುನಾವಣಾ ಬಾಂಡ್‌ಗಳ ವಿಶೇಷ ಗುರುತು ಸಂಖ್ಯೆಯನ್ನೂ ಬಹಿರಂಗಪಡಿಸಬೇಕು. ಇದು, ಬಾಂಡ್‌ಗಳ ಮೂಲಕ ನೆರವು ನೀಡಿದ ದೇಣಿಗೆದಾರರು ಹಾಗೂ ಅದನ್ನು ಸ್ವೀಕರಿಸಿದವರ ಪರಸ್ಪರ ಹೋಲಿಕೆಗೆ ನೆರವಾಗಲಿದೆ' ಎಂದು ಹೇಳಿದರು.

ಎಸ್‌ಬಿಐ ಬಿಡುಗಡೆ ಮಾಡಿರುವ ಚುನಾವಣಾ ಬಾಂಡ್‌ಗಳ ವಿವರಗಳನ್ನು 'ಎಕ್ಸ್' ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, '1,300ಕ್ಕೂ ಹೆಚ್ಚು ಕಂಪನಿಗಳು, ವ್ಯಕ್ತಿಗಳು ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ನೀಡಿದ್ದಾರೆ. ಈ ಮೂಲಕ 2019ರಿಂದ ಇಲ್ಲಿಯವರೆಗೂ ಬಿಜೆಪಿಗೇ 6,000ಕ್ಕೂ ಅಧಿಕ ಕೋಟಿ ಸಂದಾಯವಾಗಿದೆ' ಎಂದಿದ್ದಾರೆ.

ಇ.ಡಿ ಬಿಜೆಪಿಯ ಸುಲಿಗೆ ವಿಭಾಗ: ಗೆಹಲೋತ್

ಜೈಪುರ (ಪಿಟಿಐ): 'ಜಾರಿ ನಿರ್ದೇಶನಾಲಯವು (ಇ.ಡಿ) ಬಿಜೆಪಿಯ ಸುಲಿಗೆ ವಿಭಾಗವಾಗಿದೆ' ಎಂದು ಟೀಕಿಸಿರುವ ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್, 'ಬಾಂಡ್‌ಗಳ ವಿವರ ಬಹಿರಂಗದೊಂದಿಗೆ ಬಿಜೆಪಿಯ ಲೂಟಿಕೋರತನ ಬಹಿರಂಗವಾಗಿದೆ' ಎಂದಿದ್ದಾರೆ.

ಬೆಟ್ಟಿಂಗ್ ಮತ್ತು ಜೂಜು ದಂಧೆಯಲ್ಲಿ ತೊಡಗಿದ್ದ ಕಂಪನಿಗಳಿಂದ ಬಿಜೆಪಿಯ ದೇಣಿಗೆ ಪಡೆದುಕೊಂಡಿದೆ. ಇ.ಡಿ ದಾಳಿ ಮಾಡಿದ್ದ ಸಂಸ್ಥೆಗಳು, ದೇಣಿಗೆ ನೀಡಿದ ಬಳಿಕ

ದಾಳಿಯು ನಿಂತಿದೆ ಎಂಬುದು ಈ ಅಂಕಿ ಅಂಶಗಳಿಂದ ತಿಳಿಯಲಿದೆ ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಕಾನೂನುಬದ್ಧ ಲಂಚ'

'ಚುನಾವಣಾ ಬಾಂಡ್ ಎಂಬುದು ಕಾನೂನುಬದ್ಧಗೊಳಿಸಿದ ಲಂಚ. ಆಡಳಿತರೂಢ ಬಿಜೆಪಿ ಇದರ ಅತಿ ದೊಡ್ಡ ಫಲಾನುಭವಿ. ಚುನಾವಣಾ ಬಾಂಡ್ ಜಾರಿಗೊಳಿಸಿದ ದಿನವೇ ಇದು ಕಾನೂನು ಬದ್ಧಗೊಳಿಸಿದ ಲಂಚ ಎಂದು ಹೇಳಿದ್ದೆ. ಈಗಲೂ ಆ ಮಾತಿಗೆ ಬದ್ಧನಾಗಿದ್ದೇನೆ' ' ಎಂದು ಕಾಂಗ್ರೆಸ್ ಮುಖಂಡ, ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಟೀಕಿಸಿದ್ದಾರೆ.

'ಬಿಜೆಪಿ ಭ್ರಷ್ಟ ಪಕ್ಷ'

'ಬಿಜೆಪಿಯು ಇತಿಹಾಸದಲ್ಲಿಯೇ ಅತ್ಯಂತ ಭ್ರಷ್ಟ ರಾಜಕೀಯ ಪಕ್ಷ ಎಂಬುದು ಚುನಾವಣಾ ಬಾಂಡ್ ಅಂಕಿ ಅಂಶಗಳಿಂದ ದೃಢಪಟ್ಟಿದೆ' ಎಂದು ಆರ್‌ಜೆಡಿ ಪಕ್ಷದ ರಾಷ್ಟ್ರೀಯ ವಕ್ತಾರ ಮನೋಜ್ ಝಾ ಶುಕ್ರವಾರ ಆರೋಪಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರೋಗ್ಯಾಧಿಕಾರಿ (ಕ್ಲಿನಿಕಲ್–ಪೂರ್ವ) ರವರ ಕಛೇರಿ,
2ನೇ ಮಹಡಿ, ದಾಸಪ್ಪ ಆಸ್ಪತ್ರೆ, ಎಸ್.ಜೆ.ಪಿ. ರಸ್ತೆ, ಬೆಂಗಳೂರು – 560002.

ಸಂಖ್ಯೆ: ಬಿಬಿಎಂಪಿ/2023–24/ಎಸ್‌ಇ0664 ದಿನಾಂಕ: 15–03–2024

ಟೆಂಡರ್ ಅಧಿಸೂಚನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಗೆ ತಿಳಿಸಿರುವ ಕೆಲಸಕ್ಕಾಗಿ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: **ಪೂರ್ವ ವಲಯದ ಹೆರಿಗೆ ಆಸ್ಪತ್ರೆಗಳು, ರೆಫರಲ್ ಆಸ್ಪತ್ರೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಸಿಬ್ಬಂದಿಗಳನ್ನು ಒದಗಿಸುವ ಪ್ರಸ್ತಾವನೆಗಾಗಿ ಮನವಿ.**
ಟೆಂಡರ್ ಉಲ್ಲೇಖ ಸಂಖ್ಯೆ: **ಬಿಬಿಎಂಪಿ/2023–24/ಎಸ್‌ಇ0664**
1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಸ್ತಾವೇಜು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ: **16–03–2024 ರ ನಂತರ.** 2) ಬಿಡ್ ಪೂರ್ವ ಭಾವಿ ಸಭೆಯ ದಿನಾಂಕ ಮತ್ತು ಸಮಯ: **20–03–2024 ರಂದು ಬೆಳಿಗ್ಗೆ 11.00 ಗಂಟೆಗೆ ಆರೋಗ್ಯಾಧಿಕಾರಿ (ಕ್ಲಿನಿಕಲ್–ಪೂರ್ವ) ರವರ ಕಛೇರಿ, 2ನೇ ಮಹಡಿ, ದಾಸಪ್ಪ ಆಸ್ಪತ್ರೆ, ಎಸ್.ಜೆ.ಪಿ. ರಸ್ತೆ, ಬೆಂಗಳೂರು – 560002 ಇಲ್ಲಿ ನಡೆಯುವುದು.** 3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **20–03–2024 ರಂದು ಸಂಜೆ 5.00 ಗಂಟೆವರೆಗೆ.** 4) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **30–03–2024 ರಂದು ಸಂಜೆ 5.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **01–04–2024 ರಂದು ಬೆಳಿಗ್ಗೆ 11.00 ಗಂಟೆಗೆ.** 6) ಸಂಪರ್ಕಿಸುವ ವಿಳಾಸ: **ಆರೋಗ್ಯಾಧಿಕಾರಿ (ಕ್ಲಿನಿಕಲ್–ಪೂರ್ವ) ರವರ ಕಛೇರಿ, 2ನೇ ಮಹಡಿ, ದಾಸಪ್ಪ ಆಸ್ಪತ್ರೆ, ಎಸ್.ಜೆ.ಪಿ. ರಸ್ತೆ, ಬೆಂಗಳೂರು – 560002. ದೂರವಾಣಿ: 080–29600955.** ಇ–ಮೇಲ್: **hocleast@gmail.com.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಆರೋಗ್ಯಾಧಿಕಾರಿ (ಕ್ಲಿನಿಕಲ್–ಪೂರ್ವ), ಬಿಬಿಎಂಪಿ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 560027

ಸಂಖ್ಯೆ: ಬೆಮಸಾ/ಕೇಕ/ಕಾಇ/ಕಾನಿಅ/1912/2023–24 ದಿನಾಂಕ: 15.03.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 62–63/2023–24

ಕರ್ನಾಟಕ ಲೋಕೋಪಯೋಗಿ ಇಲಾಖೆ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್‌ನಲ್ಲಿ ನೊಂದಾಯಿತರಾಗಿರುವ ದರ್ಜೆ–1 ಸಿವಿಲ್ ಗುತ್ತಿಗೆದಾರರಿಂದ **ಬೆಂ.ಮ.ಸಾ.ಸಂಸ್ಥೆಯ ಘಟಕ–52, ಹುತ್ತನಹಳ್ಳಿ, ವಿಶ್ರಾಂತಿ ಕೊಠಡಿ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳು (ಕರೆ–2).** ಟೆಂಡರ್ ಮೊತ್ತ: **ರೂ. 49.22 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 98,500/-** ಹಾಗೂ **ಬೆಂ.ಮ.ಸಾ.ಸಂಸ್ಥೆಯ ಶಾಂತಿನಗರ ಸಾರಿಗೆ ಸಂಕೀರ್ಣದ "ಬಿ" ಮತ್ತು "ಸಿ" ಬ್ಲಾಕ್‌ನಲ್ಲಿ ಹೌಸ್‌ಕೀಪಿಂಗ್ ನಿರ್ವಹಿಸಲು (ಕರೆ–2)** ಟೆಂಡರ್‌ನ್ನು ಆಹ್ವಾನಿಸಲಾಗಿದೆ, ಟೆಂಡರ್ ಮೊತ್ತ: **ರೂ. 62.72 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 1,26,600/-.** ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಕಂಪನಿಯಿಂದ ಈ ಕಾಮಗಾರಿಗಾಗಿ e-proc ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಕಾಮಗಾರಿಗಾಗಿ e-proc ಬಿಡುಗಡೆಯಾಗುವ ದಿನಾಂಕದಂದು ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

(1) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ: **03.04.2024. (2)** ಟೆಂಡರ್ ತೆರೆಯುವ ದಿನಾಂಕ: **05.04.2024.**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ


'ಕೆರೆ ಮಿತ್ರ': ಮಾರ್ಚ್ 25ರವರೆಗೆ ನೋಂದಣಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಶದಲ್ಲಿರುವ ಕೆರೆಗಳ ನಿರ್ವಹಣೆಯಲ್ಲಿ ನಾಗರಿಕರು 'ಕೆರೆ ಮಿತ್ರ' ಸ್ವಯಂ ಸೇವಕರಾಗಿ ನೋಂದಾಯಿಸುವ ಅವಧಿಯನ್ನು ಮೂರನೇ ಬಾರಿಗೆ ವಿಸ್ತರಿಸಲಾಗಿದೆ. ಮಾರ್ಚ್ 25ರವರೆಗೆ ನಾಗರಿಕರು ನೋಂದಣಿ ಮಾಡಿಕೊಳ್ಳಬಹುದು.

124 ಕೆರೆಗಳಿಗೆ ಈಗಾಗಲೇ ಕೆರೆ ಮಿತ್ರ ಸ್ವಯಂಸೇವಕರನ್ನು ಆಯ್ಕೆ ಮಾಡಲಾಗಿದೆ. ಇನ್ನುಳಿದ ಕೆಲವು ಕೆರೆಗಳಿಗೆ ನಾಗರಿಕರು ನೋಂದಾಯಿಸದೆ ಇರುವುದರಿಂದ ಅವಧಿ ವಿಸ್ತರಿಸಲಾಗಿದೆ ಎಂದು ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆಯ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ತಿಳಿಸಿದ್ದಾರೆ.

https://keremithra.bbmpgov.in/registration ಲಿಂಕ್ ಮೂಲಕ ನೋಂದಾಯಿಸಿಕೊಳ್ಳಬಹುದು. ಮೊದಲ ಹಂತದಲ್ಲಿ 'ಕೆರೆ ಮಿತ್ರ'ರಾಗಲು 744 ಮಂದಿ ನೋಂದಾಯಿಸಿಕೊಂಡಿದ್ದರು. ಒಂದು ಕೆರೆಗೆ ಒಂದಕ್ಕಿಂತ ಹೆಚ್ಚು ನಾಗರಿಕರು ನೋಂದಾಯಿಸಿಕೊಂಡಿದ್ದು, ಒಬ್ಬರನ್ನು ಕಂಪ್ಯೂಟರ್ ಮೂಲಕ ರ‍್ಯಾಂಡಮೈಸ್ ಆಗಿ ಆಯ್ಕೆ ಮಾಡಲಾಗಿದೆ ಎಂದು ಹೇಳಿದ್ದಾರೆ.



ಕಚೇರಿ ಸ್ಥಳಾಂತರ: ಬಿಬಿಎಂಪಿ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ನಗರಯೋಜನೆ ಸಹಾಯಕ ನಿರ್ದೇಶಕ ಕಚೇರಿಯನ್ನು ಜಂಟಿ ಆಯುಕ್ತರ ಕಚೇರಿಯಿಂದ ಸ್ಥಳಾಂತರಿಸಲಾಗಿದೆ.

ಜೆ.ಪಿ ನಗರ, 8ನೇ ಹಂತ, ಗೊಟ್ಟಿಗೆರೆಯ ರಾಯಲ್ ಕೌಂಟಿ ಬಡಾವಣೆಯ ಉದ್ಯಾನದಲ್ಲಿರುವ ಪಾಲಿಕೆ ಕಟ್ಟಡದ ಮೊದಲನೇ ಮಹಡಿಗೆ ಕಚೇರಿ ಸ್ಥಳಾಂತರಿಸಲಾಗಿದೆ ಎಂದು ನಗರ ಯೋಜನೆ ಸಹಾಯಕ ನಿರ್ದೇಶಕ ಪ್ರಕಾಶ್ ತಿಳಿಸಿದ್ದಾರೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ವಿಶೇಷ ಭೂಸ್ವಾಧೀನಾಧಿಕಾರಿಗಳು–2, ನಂ.14/3, 1ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಕೆಆರ್‌ಐಡಿಇ/ಭೂಸ್ವಾ/78/2023–24 ದಿನಾಂಕ:11.03.2024

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು "ಬೆಂಗಳೂರು ಉಪ–ನಗರ ರೈಲ್ವೆ ಯೋಜನೆಗಾಗಿ" ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ: ಸಿಐ 41 ಎಸ್‌ಪಿಕ್ಯೂ 2024 ದಿನಾಂಕ 06–03–2024 ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:07–03–2024 ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟೀಸ್ ನೀಡಲಾಗಿದೆ. ಆದರೆ, ಕೆಲವರು ನೋಟೀಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ (ಕೆ.ಆರ್.ಐ.ಡಿ.ಇ.,) ನಂ.14/3, 1ನೇ ಮಹಡಿ, ಅರವಿಂದಭವನ, ನೃಪತುಂಗ ರಸ್ತೆ, ಬೆಂಗಳೂರು–1 ರವರ ಕಛೇರಿಯಲ್ಲಿ ದಿನಾಂಕ:12–04–2024 ರಂದು ಬೆಳಿಗ್ಗೆ 11.30 ಗಂಟೆಗೆ ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರುಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ಹಕ್ಕುಬಿಡುಗಡೆ ವೈಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗದಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ	ಗುರುತಿನ ಸಂಖ್ಯೆ	ಖಾತಾದಾರರ ಹೆಸರು	ರಿ.ಸ.ನಂ ಅಥವಾ ಎಲ್‌ಎ /ಸಿಟಿ ಸರ್ವೆ ನಂ	ಸ್ವತ್ತಿನ ಒಟ್ಟು ವಿಸ್ತೀರ್ಣ ಚ.ಮೀ.	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಚ.ಮೀ.ಗಳಲ್ಲಿ
ವಿಚಾರಣೆ ದಿನಾಂಕ: 12–04–2024			ವಿಚಾರಣೆ ಸಮಯ: ಬೆಳಿಗ್ಗೆ 11.30 ರಿಂದ		
ಗ್ರಾಮ: ದೊಡ್ಡಕನ್ನೆಲ್ಲಿ		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
1	C4/10/5-5.20/ doddakannali/01	ದಿ. ಕಾಂಗ್ರಿಗೇಷನ್ ಆಫ್ ದಿ ರೋಸಾರಿಯನ್ ಕಾರ್ಮೆಲ್? ರಾಂ	16/2ಸಿ	101.17	36.94
ಗ್ರಾಮ:ಪಣತೂರು		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
2	C4/12/7-8.25/ panathuru/01	1. ಶಾಂತಮ್ಮ ಕೋಂ ಲೇ. ಚೌಡಪ್ಪ 2. ಚನ್ನರಾಯಪ್ಪ ಬಿನ್ ಲೇ. ಚೌಡಪ್ಪ 3. ಮಂಜುನಾಥ ಬಿನ್ ಲೇ. ಚೌಡಪ್ಪ 4. ಮುನಿರಾಜು ಬಿನ್ ಲೇ. ಚೌಡಪ್ಪ 5. ಬಾಲರಾಜು ಬಿನ್ ಲೇ. ಚೌಡಪ್ಪ	59/4ಎ1	4755.05	282.80
3	C4/12/8.25-8.80/ panathuru/01	ಎಂ ಮಲ್ಲವೀರಯ್ಯ ಬಿನ್ ಮಲ್ಲಪ್ಪ	60/1ಎ	3136.31	15.93
4	C4/12/8.25-8.80/ panathuru/01	ಎನ್. ಚೇತನ್ ಬಿನ್ ಕೆ.ಎನ್.ನಾರಾಯಣ ಸ್ವಾಮಿ	60/2ಎ	3743.34	4.39
ಗ್ರಾಮ : ಅಮಾನಿ ಬೆಳ್ಳಂದೂರು ಖಾನೆ		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
5	C4/14/5-5.10/b. amanikere/01	ಕೆ. ಚಿನ್ನಣ್ಣಯ್ಯ ಬಿನ್ ಓಭಯ್ಯರಿಗೆ	215/3	3186.90	5.09
6	C4/14/4-5/b. amanikere/01	ನಾಗಪ್ಪರೆಡ್ಡಿ ಬಿನ್ ಪಾಪರೆಡ್ಡಿ	216/1ಸಿ	505.85	13.12
7	C4/14/4-5/b. amanikere/02	ಚಿನ್ನಸ್ವಾಮಿ ಬಿನ್ ಲೇಟ್ ಮುನಿಸ್ವಾಮಿ	216/2ಸಿ	1112.88	66.03
8	C4/14/4-5/b. amanikere/03	ಕೆ. ಜಯರಾಮನ್ ಬಿನ್ ಲೇಟ್ ಕುಪ್ಪಸ್ವಾಮಿ	216/3ಸಿ	1112.88	144.21
9	C4/14/3.40-3.70/b. amanikere/01	ಹ.ಹಿ.ಹಳ್ಳ	–	–	9.00
ಗ್ರಾಮ : ಭೋಗನಹಳ್ಳಿ		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
10	C4/11/8.5-9/ boganahalli/01	ಅಂಬ್ಲಿಯೋಗೇಶ್ ಬಿನ್ ಅಂಬ್ಲಿಕೊಟ್ರಪ್ಪ	40/1ಎ	5007.98	106.09
11	C4/12/4.0-5.20/ boganahalli/01	ಸಿ.ಆರ್. ಕೆಂಪರಾಜು	52/1ಎ	2225.77	16.77
12	C4/12/4.0-5.20/ boganahalli/02	ಸಿ.ಆರ್. ಕೆಂಪರಾಜು	52/2ಎ	50.58	16.81
13	C4/12/4.0-5.20/ boganahalli/03	ಸವಿತಾ ಕೋಂ ಎಂ.ಮಂಜುನಾಥ್	52/3ಎ	733.49	22.75
14	C4/12/4.0-5.20/ boganahalli/04	ಶ್ರೀ. ಜಿ.ಎ. ಮನೋಹರ್ ಬಿನ್ ಶ್ರೀ ಜಿ.ಎನ್. ಅಶ್ವಥ್ ರೆಡ್ಡಿ	52/4ಎ	4274.49	198.77
15	C4/12/4.0-5.20/ boganahalli/05	1. ಬಿ.ಕೆ. ಚಂದ್ರೇಗೌಡ ಬಿನ್ ಲೇ॥ ಕೆಂಪಣ್ಣ 2. ಬಿ.ಕೆ. ಮುನಿರಾಜೇ ಗೌಡ ಬಿನ್ ಲೇ॥ ಕೆಂಪಣ್ಣ, 3. ಬಿ.ಕೆ.ಮಂಜುನಾಥ ಬಿನ್ ಲೇ॥ ಕೆಂಪಣ್ಣ, 4. ಬಿ.ಕೆ.ಆನಂದ ಕುಮಾರ್ ಬಿನ್ ಲೇ॥ ಕೆಂಪಣ್ಣ, 6. ಬಿ.ಕೆ.ಅಶ್ವತ ನಾರಾಯಣ ಬಿನ್ ಲೇ॥ ಕೆಂಪಣ್ಣ	52/5ಎ	2630.45	200.26
16	C4/12/4.0-5.20/ boganahalli/06	ಅಂಬ್ಲಿಯೋಗೇಶ್ ಬಿನ್ ಅಂಬ್ಲಿಕೊಟ್ರಪ್ಪ	52/6ಎ	2731.63	224.06
17	C4/12/4.0-5.20/ boganahalli/07	ಸಿ.ಆರ್.ಲಕ್ಷ್ಮೀನಾರಾಯಣ್ ಬಿನ್ ಲೇ॥ ಸಿ.ರಾಮಸ್ವಾಮಿ	52/7	5260.91	256.21
18	C4/12/4.80-5.20/ boganahalli/01	Eamest Construction Pvt Ltd, Rep by its Director Mr. B.M.Karunesh rep by his SPA Holder Mr.Chikkaswamy ST	53/1	101.17	78.40
19	C4/12/5.20-7.0/ boganahalli/01	1. ಜಯರಾಮ್ ಬಿನ್ ಲೇ॥ ಸೊಣ್ಣಪ್ಪ, 2. ನಾರಾಯಣ ಸ್ವಾಮಿ ಬಿನ್ ಲೇ॥ ಸೊಣ್ಣಪ್ಪ	54/1ಎ	708.20	347.95
20	C4/12/5.20-7.0/ boganahalli/02	1. ಜಯರಾಮ್ ಬಿನ್ ಲೇ॥ ಸೊಣ್ಣಪ್ಪ, 2. ನಾರಾಯಣ ಸ್ವಾಮಿ ಬಿನ್ ಲೇ॥ ಸೊಣ್ಣಪ್ಪ	54/2ಎ	1821.08	395.04
21	C4/12/5.20-7.0/ boganahalli/03	ಸರ್ಕಾರಿ	54/3ಎ	4249.20	1041.74 (ಖ)767.74 274.00
22	C4/11-12/9-0.50/ boganahalli/01	ಸಿ.ಲಿಂಗಾರೆಡ್ಡಿ ದೊಡ್ಡ ಕನ್ನೇಲಿ ಕೃಷ್ಣಾರೆಡ್ಡಿ ಬಿನ್ ಮುನಿಶಾಮಿ ರೆಡ್ಡಿ	66/1	4502.12	1192.68
23	C4/11/8.8-9.20/ boganahalli/01	ಸಿ.ಲಿಂಗಾರೆಡ್ಡಿ ದೊ.ಕನ್ನೇಲಿ	67/1	505.86	219.40
24	C4/11/7.5-8/ boganahalli/01	ಅಂಬ್ಲಿಯೋಗೇಶ್ ಬಿನ್ ಅಂಬ್ಲಿಕೊಟ್ರಪ್ಪ	68/1ಸಿ	151.76	12.82
25	C4/11/8-8.5/ boganahalli/01	1. ಬಿ.ಎಂ. ಕರುಣೇಶ್ ಬಿನ್ ಲೇ॥ ಬಿ.ಎಂ.ಮಾದಯ್ಯ, 2. ಅಂಬ್ಲಿ ಯೋಗೇಶ್ ಬಿನ್ ಅಂಬ್ಲಿ ಕೊಟ್ರಪ್ಪ	69/1	13354.62	59.24
ಗ್ರಾಮ :ಕೊಡತಿ		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
26	C4/7/4.20-6.20/ Kodathi/01	ಡೈರೆಕ್ಟರ್, ನ್ಯಾಷನಲ್ ಸಿಲ್ಕ್ ವರ್ಮ್ ಸೀಡ್ಸ್ ಪ್ರಾಜೆಕ್ಟ್, ಸೆಂಟ್ರಲ್ ಸಿಲ್ಕ್ ಬೋರ್ಡ್	52/1	18413.19	781.35
27	C4/7/6.20-6.80/ Kodathi/01	ಡೈರೆಕ್ಟರ್, ನ್ಯಾಷನಲ್ ಸಿಲ್ಕ್ ವರ್ಮ್ ಸೀಡ್ಸ್ ಪ್ರಾಜೆಕ್ಟ್, ಸೆಂಟ್ರಲ್ ಸಿಲ್ಕ್ ಬೋರ್ಡ್	53/1	1011.71	256.95
28	C4/7/6.80-7.80/ Kodathi/01	ಡೈರೆಕ್ಟರ್, ನ್ಯಾಷನಲ್ ಸಿಲ್ಕ್ ವರ್ಮ್ ಸೀಡ್ಸ್ ಪ್ರಾಜೆಕ್ಟ್, ಸೆಂಟ್ರಲ್ ಸಿಲ್ಕ್ ಬೋರ್ಡ್	54/1	33993.58	253.25
29	C4/7-8/8.5-0.7/ Kodathi/01	ಕೆ.ಎಂ.ಮುನಿರಾಜು ಬಿನ್ ಮುನಿಸ್ವಾಮಪ್ಪ	55/1ಎ	1214.06	574.20
30	C4/7-8/8.5-0.7/ Kodathi/02	ಲೈಲಾಥೋಮಸ್ ಬಿನ್ ಟಿ.ಕೋಚಾಥೋಮಸ್. ಮೂಲ ಖಾತೆದಾರ	55/2ಎ	1719.91	568.56
31	C4/7-8/8.5-0.7/ Kodathi/03	ವೆಂಕಟಮ್ಮ ಕೋಂ ಲೇ॥ ಪಾಪಣ್ಣ	55/3ಎ1	2630.45	62.47
32	C4/8/0.7-1/ Kodathi/01	ಕೆ.ಎಂ.ಮುನಿರಾಜು ಬಿನ್ ಮುನಿಸ್ವಾಮಪ್ಪ	58/3	202.34	146.18
33	C4/8/3-4.25/ Kodathi/01	1. ರಮೇಶ್ ನಿರ್ಮಲ್ ಕುಮಾರ್ ಬಿನ್ ಲೇ॥ ಸಿ.ಎ.ಸ್ವಾಮಿ 2. ಎಂ.ಕೃಷ್ಣರೆಡ್ಡಿ ಬಿನ್ ಜಿ.ಮುನಿಸ್ವಾಮಿ ರೆಡ್ಡಿ	59/1ಎ	6677.31	59.64
34	C4/8/1-1.25/ Kodathi/01	ಕೆ.ರಾಮದಾಸ್‌ಬಿನ್ ಲೇ॥ ವಿ.ರಾಮನ್ ಮೆನನ್	60/1	28226.81	512.74
35	C4/8/4.25-6.5/ Kodathi/01	M/s Orchids Apartments Pvt Ltd Rep by its Director Mr. B.M.Jayashankar Rep by his spa holder Mr.Chikkaswamy S/o Late Thimmegowda	78/3ಎ	11634.71	328.94
36	C4/8/4.25-6.5/ Kodathi/02	1. ಕೆ. ಎನ್. ರಾಮಚಂದ್ರಯ್ಯ 2. ಮುನಿತಿಮ್ಮಯ್ಯ 3. ಕೆ.ಎಸ್. ಮಂಜುಳಾ ಕೋಂ ಡಿ.ಕೆ.ರಾಜು 4. ಸುಜಾತ ಕೋಂ ಚಂದ್ರಶೇಖರ್ 5. ಸುಧಾ ಕೋಂ ವೆಂಕಟರಮಣಪ್ಪ 6. ಸುಮಾ ಕೋಂ ಲೇ॥ ಮುನಿರಾಜು	78/2ಎ1	2023.43	414.29
37	C4/8/4.25-6.5/ Kodathi/03	ಬಿ.ಎಂ.ನಾಗರಾಜ್ ಬಿನ್ ಲೇ॥ ಮುದ್ದಾರೆಡ್ಡಿ	78/1ಎ	7436.10	598.37
38	C4/8/6.5-8.20/ Kodathi/01	ಜಿ. ನವೀನ್‌ಕುಮಾರ್ ಬಿನ್ ಗೋವಿಂದ ರಾಜು	79/1ಸಿ1	2832.80	839.92 (ಖ)106.75 733.14
39	C4/8/6.5-8.20/ Kodathi/02	ಎ.ವಿಶಾಲಾಕ್ಷಿ ಕೋಂ ಲೇ॥ ಅಂಬ್ಲಿಕೊಟ್ರಪ್ಪ ಎಂ.ಎನ್.ವೆಂಕಟೇಶ್ವರ ಬಿನ್ ಲೇ॥ ಡಿ.ಮುನಿರೆಡ್ಡಿ	79/1ಸಿ2	3844.51	612.52
40	C4/8/8.20-8.75/ Kodathi/01	ಡಾ: ರಾಮಚಂದ್ರಪ್ಪ ಬಿನ್ ಲೇ॥ ಗೋವಿಂದಪ್ಪ	174/1ಎ	7891.37	433.20
41	C4/8-9/9-06/ Kodathi/01	ಆಂಡಾಳಮ್ಮ ಕೋಂ ಆರ್.ಗೋಪಾಲ್	191/1	5766.77	491.65
42	C4/8/8.75-9.70/ Kodathi/01	ಜಿ. ಶಿವ ಹನುಮಂತಪ್ಪ ಬಿನ್ ಗಂಗಪ್ಪ	190/3	2023.43	681.88 (ಖ) 65.55 616.33
43	C4/9/08-1.20/ Kodathi/01	ಎಂ.ವೇಣುಗೋಪಾಲ ರೆಡ್ಡಿ ಬಿನ್ ಹೆಚ್ಚಮುನಿರೆಡ್ಡಿ	193/1	2630.45	21.92
44	C4/9/06-08/ Kodathi/01	ಆಂಡಾಳಮ್ಮ ಕೋಂ ಆರ್.ಗೋಪಾಲ್	192/4	4249.20	88.37
ಗ್ರಾಮ: ಚಿಕ್ಕಕನ್ನಲ್ಲಿ		ಹೋಬಳಿ: ವರ್ತೂರು	ತಾಲ್ಲೂಕು: ಬೆಂಗಳೂರು ಪೂರ್ವ		
45	C4/9/8.8-9.2/ Chikkakannalli/01	ಸರ್ಕಾರ	–	–	232.11

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2,
ಕೆ.ಐ.ಎ.ಡಿ.ಬಿ (ಕೆ.ಆರ್.ಐ.ಡಿ.ಇ.,) ನೃಪತುಂಗ ರಸ್ತೆ, ಬೆಂಗಳೂರು.



ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಹರಿಯುವ ಕಾವೇರಿ ನದಿಯಲ್ಲಿ ಶುಕ್ರವಾರ ಇದ್ದ ನೀರಿನ ಮಟ್ಟ

ಚರ್ಚೆಗೆ ಗ್ರಾಸವಾದ ಕಾವೇರಿ ನೀರು ಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಸಂಗಮದಲ್ಲಿ ನಾಲ್ಕು ದಿನಗಳ ಹಿಂದೆ ನೀರಿನ ಹರಿವು ಹೆಚ್ಚಾಗಿದ್ದು, ರಾಜ್ಯದಲ್ಲಿ ಬರ ಇರುವಾಗ ತಮಿಳುನಾಡಿಗೆ ನೀರು ಹರಿಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ. ಈ ಕುರಿತು ಸರ್ಕಾರದ ವಿರುದ್ಧ ರೈತರು ಹಾಗೂ ವಿರೋಧ ಪಕ್ಷದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದರ ಬೆನ್ನಲ್ಲೇ, ಬೆಂಗಳೂರಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಎರಡು ದಿನ ಕೆಆರ್‌ಎಸ್ ಮತ್ತು ಕಬಿನಿಯಿಂದ ನೀರು ಬಿಡಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸ್ಪಷ್ಟೀಕರಣ ನೀಡಿದ್ದಾರೆ. ಈ ವಿಷಯ ಇದೀಗ ಚರ್ಚೆಗೆ ಗ್ರಾಸವಾಗಿದೆ.

ತೀವ್ರ ಮಳೆ ಕೊರತೆಯಿಂದಾಗಿ ಮೊಣಕಾಲುದ್ದವಿದ್ದ ನೀರಿನ ಹರಿವಿನಲ್ಲಿ ಹೆಚ್ಚಳವಾಗಿದೆ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್, ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಮಾರ್ಚ್ 12ರಂದು ವಿಡಿಯೊ ಹಾಕಿದ್ದರು. ಜತೆಗೆ, 'ನೀರು ಹರಿಯುತ್ತಿರುವುದು ಬೆಂಗಳೂರಿನ ನಾಗರಿಕರ ಬಾಯಾರಿಕೆ ನೀಗಿಸುವುದಕ್ಕಲ್ಲ. ಬದಲಿಗೆ ಇಂಡಿಯಾ ಪಾಲುದಾರ ಪಕ್ಷವಾದ ತಮಿಳುನಾಡಿನ ಡಿಎಂಕೆ ಸರ್ಕಾರವನ್ನು ತೃಪ್ತಿಗೊಳಿಸಲು ಎಂಬುದು ಸ್ಥಳೀಯರು ನೀಡಿರುವ ಖಚಿತ ಮಾಹಿತಿ' ಎಂದು ಪೋಸ್ಟ್ ಮಾಡಿದ್ದರು.

ಪೋಸ್ಟ್‌ಗೂ ಮುಂಚೆ ಮಾರ್ಚ್ 11ರಂದು ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ ನೀಡಿದ್ದಾಗ, ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ ಎಂದು ಆರೋಪಿಸಿ ಮಂಡ್ಯದಲ್ಲಿ ಕೆಲ ರೈತರು ಪ್ರತಿಭಟನೆ ನಡೆಸಿದ್ದರು. ಈ ಕುರಿತು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದ ಶಿವಕುಮಾರ್, 'ತಮಿಳುನಾಡಿಗೆ ನೀರು ಬಿಡುವ ಪ್ರಶ್ನೆಯೇ ಇಲ್ಲ' ಎಂದು ಆರೋಪ ನಿರಾಕರಿಸಿದ್ದರು.

ನೀರು ಬಿಟ್ಟಿದ್ದು ಬೆಂಗಳೂರಿಗೆ: ತಮಿಳುನಾಡಿಗೆ ನೀರು ಹರಿಸಲಾಗಿದೆ ಎಂಬ ಆರೋಪ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಎಂಜಿನಿಯರ್ ಜಯಂತ್, 'ಬೆಂಗಳೂರಿಗೆ ಕುಡಿಯುವುದಕ್ಕಾಗಿ ಕೆಆರ್‌ಎಸ್‌ನಿಂದ ಎರಡು ದಿನ ನೀರು ಬಿಡುಗಡೆ ಮಾಡಿದ್ದೇವೆಯೇ ಹೊರತು, ತಮಿಳುನಾಡಿಗಲ್ಲ. ಬೆಂಗಳೂರಿಗೆ ಪೂರೈಸುವ ಮಳವಳ್ಳಿ ತಾಲ್ಲೂಕಿನ ಶಿವಾ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ತೀರಾ ತಗ್ಗಿತ್ತು. ನೀರಿನ ಪ್ರಮಾಣ ಹೆಚ್ಚಿಸುವುದಕ್ಕಾಗಿ ನಿತ್ಯ ಹರಿಸುವ 1,000 ಕ್ಯುಸೆಕ್‌ಗಿಂತ ಹೆಚ್ಚು ಹರಿಸುವಂತೆ ಬೆಂಗಳೂರು ಜಲಮಂಡಳಿ ಅಧಿಕಾರಿಗಳು ಮನವಿ ಮಾಡಿದ್ದರು' ಎಂದರು.

ಪಟ್ಟಣ ಪಂಚಾಯತಿ ಕಾರ್ಯಾಲಯ, ಹಾರೋಹಳ್ಳಿ
ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ – 562 112.
ದೂರವಾಣಿ : 080–2976 0055, ಇಮೇಲ್ : tp.harohall@gmail.com

ಸಂಖ್ಯೆ : ಪ.ಪಂ.ಹಾ./ಆ.ಶಾ./ಎಂ.ಆರ್.ಎಫ್./ಎಸ್.ಬಿ.ಎಂ.ಟಿ.ಪಿ.ಆರ್/ಟೆಂಡರ್/ ಸಿ.ಆರ್.05/2023–24 ದಿನಾಂಕ : 15–03–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಹಾರೋಹಳ್ಳಿರವರು ಎಸ್.ಬಿ.ಎಂ. – 2.0 ಯೋಜನೆಯಡಿಯ ಅನುದಾನದಲ್ಲಿ ಹಾರೋಹಳ್ಳಿ ಪಟ್ಟಣ ಪಂಚಾಯಿತಿ – ಎಂ.ಆರ್,ಎಫ್ ಘಟಕದಲ್ಲಿ ತ್ಯಾಜ್ಯ ಸಂಸ್ಕರಣೆ ಮಾಡಲು ಅಗತ್ಯವಿರುವ ಯಂತ್ರ ಖರೀದಿಸುವುದು. **Indent No. : DMA/2023-24/IND1808, ಒಟ್ಟು ಮೊತ್ತ ರೂ. 21,19,694/–** ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಮತ್ತು ಪಟ್ಟಣ ಪಂಚಾಯಿತಿ ಹಾರೋಹಳ್ಳಿಯ ಸಮಗ್ರ ಘನತ್ಯಾಜ್ಯ ವಸ್ತು ನಿರ್ವಹಣೆ ಡಿ.ಪಿ.ಆರ್. ಅನುಷ್ಠಾನಕ್ಕಾಗಿ ಸ್ವಚ್ಛ ಭಾರತ್ ಮಿಷನ್ ನಗರ 2.0 ಯೋಜನೆಯ ಅನುದಾನದಡಿ **1) 05 ಸಂಖ್ಯೆಯ ಬಾಕ್ಸ್ ಮಾದರಿಯ ಆಟೋ ಟಿಪ್ಪರ್ ಖರೀದಿಸಲು ಟೆಂಡರ್ ರೂ. 45.00 ಲಕ್ಷಗಳು (Indent No. : DMA/2023-24/IND1810), 2) 10 ಸಂಖ್ಯೆಯ ಸ್ವಚ್ಛತೆ ಸಂಬಂಧ ತಳ್ಳುವ ಗಾಡಿಗಳನ್ನು (Pushcarts) ಖರೀದಿಸಲು ಟೆಂಡರ್ ರೂ. 75,000/– (Indent No. : DMA/2023-24/IND1811), 3) ಸ್ವಚ್ಛತೆ ಸಂಬಂಧ ವಾಹನಗಳಿಗೆ ಜಿ.ಪಿ.ಎಸ್.ನ್ನು ಖರೀದಿಸಿ ಅಳವಡಿಸಲು ಟೆಂಡರ್ ರೂ. 1.60 ಲಕ್ಷಗಳು (Indent No. : DMA/2023-24/IND1809)** ಅರ್ಹ ಪೂರೈಕೆದಾರರು / ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು **www.kppp.karnataka.gov.in ಪೋರ್ಟಲ್** ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಹಣ ಹಾಗೂ ಟೆಂಡರ್ ಪ್ರಕ್ರಿಯೆ ಶುಲ್ಕಗಳನ್ನು ಸಹ ವಿದ್ಯುನ್ಮಾನದ ಮೂಲಕ ಪಾವತಿಸಬೇಕು. ಟೆಂಡರ್‌ಗಳನ್ನು ಸಲ್ಲಿಸುವ **ಕೊನೆಯ ದಿನಾಂಕ : 21–03–2024 ರ ಸಂಜೆ 4.30 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ : 22–03–2024 ರ ಸಂಜೆ 4.30 ಗಂಟೆಯ ನಂತರ.** ಯಾವುದೇ ದಿನಾಂಕಗಳಲ್ಲಿ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತಿ ಹಾರೋಹಳ್ಳಿ, ಹಾರೋಹಳ್ಳಿ ತಾಲ್ಲೂಕು.

ಸಹಿ/– ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ ಹಾರೋಹಳ್ಳಿ, ಹಾರೋಹಳ್ಳಿ ತಾಲ್ಲೂಕು.

ಡಿಐಪಿಆರ್/ರಾಮನಗರ/618/ಮಣಿಪಾಲ್/2023–24

ತುಂಗಾ ತೀರದಲ್ಲಿ ಪರೀಕ್ಷಾರ್ಥ ಸ್ಫೋಟ • ಎರಡು ಪ್ರಕರಣದಲ್ಲಿ ಜೈಲು ಸೇರಿದ್ದ ಆರೋಪಿ

ಸ್ಫೋಟ: ಶಂಕಿತ ಮಾರ್ಝ್ ಎನ್‌ಐಎ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಸಂಚಿನಲ್ಲಿ ಭಾಗಿಯಾಗಿರುವ ಶಂಕೆಯಡಿ ಶಂಕಿತ ಮಾರ್ಝ್ ಮುನೀರ್ ಅಹ್ಮದ್‌ನನ್ನು (26) ಎನ್‌ಐಎ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದಿದ್ದು, ವಿಚಾರಣೆ ನಡೆಸುತ್ತಿದ್ದಾರೆ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಫಿಶ್ ಮಾರ್ಕೆಟ್ ರಸ್ತೆಯ ಮಾರ್ಝ್, ಎಂಜಿನಿಯರಿಂಗ್ ಪದವೀಧರ. ಭಯೋತ್ಪಾದನಾ ಸಂಘಟನೆಗಳ ಪರ ಮಂಗಳೂರಿನಲ್ಲಿ ಗೋಡೆ ಬರಹ ಬರೆದಿದ್ದ ಪ್ರಕರಣ ಹಾಗೂ ಶಿವಮೊಗ್ಗದ ತುಂಗಾ ನದಿ ತೀರದಲ್ಲಿ ಬಾಂಬ್‌ಗಳನ್ನು ಪರೀಕ್ಷಾರ್ಥ ಸ್ಫೋಟಿಸಿದ್ದ ಪ್ರಕರಣದಲ್ಲಿ ಈತನನ್ನು ತನಿಖಾ ಸಂಸ್ಥೆಗಳು ಬಂಧಿಸಿದ್ದವು. ಸದ್ಯ ಈತ, ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ.

ಮುಖ್ಯಾಂಶಗಳು

- ಕುಕ್ಕರ್ ಬಾಂಬ್ ಸ್ಫೋಟದಲ್ಲೂ ಭಾಗಿ
- ಐಇಡಿ ತಯಾರಿಸಿ ಪರೀಕ್ಷಾರ್ಥ ಸ್ಫೋಟ
- ರಾಷ್ಟ್ರಧ್ವಜ ಸುಟ್ಟಿದ್ದ ಶಂಕಿತರು

'ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಮೊಹಮ್ಮದ್ ಶಾರೀಕ್ ಹಾಗೂ ಅರಾಫತ್ ಜೊತೆಯಲ್ಲಿ ಮಾರ್ಝ್ ಒಡನಾಟ ಹೊಂದಿದ್ದ. ಐಎಸ್ (ಇಸ್ಲಾಮಿಕ್ ಸ್ಟೇಟ್) ಸಂಘಟನೆಯ ಉಗ್ರರ ಜೊತೆ ಸಂಪರ್ಕವಿಟ್ಟುಕೊಂಡು, ರಾಜ್ಯದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ. ಇದರ ಭಾಗವಾಗಿಯೇ ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟವಾಗಿರುವ ಅನುಮಾನವಿದ್ದು, ಇದೇ ಕಾರಣಕ್ಕೆ ಮಾರ್ಝ್‌ನನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದು ತನಿಖಾ ಸಂಸ್ಥೆಯ ಮೂಲಗಳು ಹೇಳಿವೆ.



ಮಾರ್ಝ್

'ಪ್ರಕರಣ ಸಂಬಂಧ ಸಂಗ್ರಹಿಸಲಾಗಿರುವ ಪುರಾವೆಗಳನ್ನು ಆಧರಿಸಿ, ಮಾರ್ಝ್‌ನನ್ನು ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಅರ್ಜಿ ಮನ್ನಿಸಿದ ನ್ಯಾಯಾಲಯ, ಮಾರ್ಝ್‌ನನ್ನು 7 ದಿನಗಳವರೆಗೆ ಕಸ್ಟಡಿಗೆ ನೀಡಿದೆ. ಗುರುವಾರವೇ (ಮಾರ್ಚ್ 14) ಮಾರ್ಝ್‌ನನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಆ್ಯಪ್ ಮೂಲಕ ಮಾತು, ಕೃತ್ಯಕ್ಕೆ ತಯಾರಿ: 'ತೀರ್ಥಹಳ್ಳಿಯ ಮಾರ್ಝ್, ಬಟ್ಟೆ ವ್ಯಾಪಾರಿ ಶಾರೀಕ್ ಹಾಗೂ ಇತರರು, ಧಾರ್ಮಿಕ ವಿಚಾರದಲ್ಲಿ ಪ್ರಚೋದಿತರಾಗಿ ಭಯೋತ್ಪಾದನಾ ಸಂಘಟನೆ ಜೊತೆ ಒಡನಾಟ ಬೆಳೆಸಿಕೊಂಡಿದ್ದರು. ಆ್ಯಪ್ ಮೂಲಕ ಮಾತುಕತೆ ನಡೆಸುತ್ತಿದ್ದರು. ಐಎಸ್ ಉಗ್ರರು, ಆ್ಯಪ್ ಮೂಲಕ ಇವರಿಗೆ ಪ್ರಚೋದನಕಾರಿ ಪುಸ್ತಕಗಳನ್ನು ಓದಲು ನೀಡುತ್ತಿದ್ದರು. ಸೂಚನೆಗಳನ್ನೂ ನೀಡುತ್ತಿದ್ದರು' ಎಂದು ಹೇಳಿವೆ.

'ಸ್ಫೋಟದ ವಸ್ತುಗಳಿಗೆ ಸಾಮ್ಯತೆ'

'ಪರೀಕ್ಷಾರ್ಥ ಬಾಂಬ್ ಸ್ಫೋಟಿಸಿದ್ದ ಸ್ಥಳದಲ್ಲಿ ದೊರೆತಿದ್ದ ವಸ್ತುಗಳಿಗೂ ರಾಮೇಶ್ವರಂ ಕೆಫೆಯಲ್ಲಿ ಸಿಕ್ಕ ವಸ್ತುಗಳಿಗೂ ಸಾಮ್ಯತೆ ಇದೆ. ಹೀಗಾಗಿ, ಮಾರ್ಝ್ ಹಾಗೂ ತಂಡದವರ ಮೇಲೆ ಹೆಚ್ಚಿನ ಅನುಮಾನವಿದೆ. ವಿಚಾರಣೆಯಿಂದಲೇ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದ ಶಂಕಿತನನ್ನು ಮಾರ್ಝ್ ಪ್ರಚೋದಿಸಿರುವ ಬಗ್ಗೆ ಮಾಹಿತಿ ಇದೆ. ಬಾಂಬ್ ಇರಿಸಿದ್ದ ಶಂಕಿತ ಯಾರು ಎಂಬುದು ಈತನಿಗೆ ಗೊತ್ತಿದೆ. ಜೊತೆಗೆ, ಬಾಂಬ್ ಸ್ಫೋಟದ ಸಂಚಿನಲ್ಲಿ ಈತನ ಪಾತ್ರವೂ ಇರುವ ಶಂಕೆ ಇದೆ' ಎಂದು ಮೂಲಗಳು ತಿಳಿಸಿವೆ.

'ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಮಾರ್ಝ್ ಹಾಗೂ ಇತರರು, ಕಚ್ಚಾ ಬಾಂಬ್ (ಐಇಡಿ) ತಯಾರಿಸುವುದು ಹೇಗೆ? ಎಂಬುದರ ತರಬೇತಿ ಪಡೆದಿದ್ದರು. ತಾವೇ ತಯಾರಿಸಿದ್ದ ಐಇಡಿ ಪರೀಕ್ಷಾರ್ಥ ಸ್ಫೋಟಿಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಶಿವಮೊಗ್ಗದ ಗುರುಪುರ–ಪುರಲೆ ಸಮೀಪದಲ್ಲಿರುವ ತುಂಗಾ ನದಿಯ ತೀರದಲ್ಲಿ ಶಂಕಿತರು ಪರೀಕ್ಷಾರ್ಥವಾಗಿ ಹಲವು ಬಾರಿ ಬಾಂಬ್‌ಗಳನ್ನು ಸ್ಫೋಟಿಸಿದ್ದರು. ರಾಷ್ಟ್ರಧ್ವಜವನ್ನೂ ಸುಟ್ಟಿದ್ದರು. ಇದನ್ನು ಪತ್ತೆ ಮಾಡಿದ್ದ ಶಿವಮೊಗ್ಗ ಜಿಲ್ಲಾ ಪೊಲೀಸರು, ಮಾರ್ಝ್, ಸೈಯದ್ ಯಾಸೀನ್‌ನನ್ನು ಬಂಧಿಸಿದ್ದರು. ವಿಚಾರಣೆ ನಡೆಸಿದಾಗ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಸಂಗತಿ ಗೊತ್ತಾಗಿತ್ತು' ಎಂದು ಮೂಲಗಳು ಹೇಳಿವೆ.

'ಶಿವಮೊಗ್ಗ ಪೊಲೀಸರು ಶಂಕಿತರಿಂದ 14 ಮೊಬೈಲ್, ಡಾಂಗಲ್, 2 ಲ್ಯಾಪ್‌ಟಾಪ್, ಪೆನ್‌ಡ್ರೈವ್, ಎಲೆಕ್ಟ್ರಾನಿಕ್ ಉಪಕರಣ, ರಿಲೆ ಸರ್ಕಿಟ್, ಬಲ್ಬ್‌ಗಳು, ಬೆಂಕಿಪೊಟ್ಟಣ, ಬ್ಯಾಟರಿಗಳು, ಸ್ಫೋಟದ ಕಚ್ಚಾ ವಸ್ತುಗಳು, ಪ್ರಮುಖ ದಾಖಲೆಗಳು ಹಾಗೂ ಕಾರು ಜಪ್ತಿ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

ಮಾರ್ಝ್ ಬಂಧನದಿಂದ ಮಾನಸಿಕವಾಗಿ ನೊಂದಿದ್ದ ಅವರ ತಂದೆ ಮುನೀರ್ ಅಹಮದ್ ಹೃದಯಾಘಾತದಿಂದ ಮೃತಪಟ್ಟಿದ್ದರು.

ಅಪಹರಣ: ವಾರ್ಡನ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಜೂಜಾಟವಾಡಲು ಖರ್ಚು ಮಾಡಿದ್ದ ಹಾಗೂ ಸ್ನೇಹಿತರಿಂದ ಪಡೆದ ಸಾಲ ತೀರಿಸಲು ಅಪಹರಣ ನಾಟಕವಾಡಿದ್ದ ಆರೋಪದಡಿ ಕಾಲೇಜ್‌ವೊಂದರ ವಾರ್ಡನ್ ಸೇರಿ ನಾಲ್ವರನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹಾಸನದ ಜೀವನ್ (29), ಈತನ ಸ್ನೇಹಿತರಾದ ವಿನಯ್ (27), ಪೂರ್ಣೇಶ್ ಅಲಿಯಾಸ್ ಪ್ರೀತಮ್ (28) ಹಾಗೂ ರಾಜು (28) ಬಂಧಿತರು. ಇವರಿಂದ ನಾಲ್ಕು ಮೊಬೈಲ್ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಜೀವನ್, ಪ್ರತಿಷ್ಠಿತ ಕಾಲೇಜೊಂದರಲ್ಲಿ ಕೆಲಸ ಮಾಡುತ್ತಿದ್ದ. ಆನ್‌ಲೈನ್ ಜೂಜಿನಲ್ಲಿ ಹಣ ಕಳೆದುಕೊಂಡಿದ್ದ. ಸ್ನೇಹಿತರ ಬಳಿಯೂ ಹೆಚ್ಚು ಸಾಲ ಮಾಡಿದ್ದ. ಸಾಲ ವಾಪಸು ನೀಡುವಂತೆ ಸ್ನೇಹಿತರು ಪೀಡಿಸಲಾರಂಭಿಸಿದ್ದರು' ಎಂದರು.

ಚಿಕ್ಕಮ್ಮನಿಗೆ ಕರೆ ಮಾಡಿ ಹಣಕ್ಕೆ ಬೇಡಿಕೆ: 'ಆರೋಪಿ ಜೀವನ್‌ನ ಚಿಕ್ಕಮ್ಮ ಸಹ ಕಾಲೇಜ್‌ವೊಂದರ ಉದ್ಯೋಗಿ. ಚಿಕ್ಕಮ್ಮನ ಬಳಿ ಹಣವಿರುವುದನ್ನು ತಿಳಿದುಕೊಂಡಿದ್ದ ಆರೋಪಿ, ಅವರನ್ನು ಬೆದರಿಸಿ ಹಣ ಪಡೆಯಲು ಅಪಹರಣ ನಾಟಕಕ್ಕೆ ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ಜೀವನ್ ಹಾಗೂ ಸ್ನೇಹಿತರು, ಕೊಠಡಿಯೊಂದಕ್ಕೆ ಹೋಗಿ ಮದ್ಯದ ಪಾರ್ಟಿ ಮಾಡಿದ್ದರು. ನಂತರ, ಜೀವನ್ ತಲೆ-ಹಣೆ ಮೇಲೆ ಟೊಮೆಟೊ ಸಾಸ್ ಹಚ್ಚಿದ್ದರು. ಅದನ್ನೇ ರಕ್ತದಂತೆ ಬಿಂಬಿಸಿ ಫೋಟೊ ತೆಗೆದಿದ್ದರು. ಅದೇ ಫೋಟೊವನ್ನು ಚಿಕ್ಕಮ್ಮ ಅವರಿಗೆ ಕಳುಹಿಸಿದ್ದ ಆರೋಪಿಗಳು, 'ಜೀವನ್‌ನನ್ನು ಅಪಹರಣ ಮಾಡಿದ್ದೇವೆ. ₹1 ಲಕ್ಷ ನೀಡಬೇಕು. ಇಲ್ಲದಿದ್ದರೆ, ಕೊಲೆ ಮಾಡುತ್ತೇವೆ' ಎಂಬುದಾಗಿ ಬೆದರಿಸಿದ್ದರು.

'ಫೋಟೊ ನೋಡಿ ಹೆದರಿದ್ದ ಚಿಕ್ಕಮ್ಮ, ಜೀವನ್ ಫೋನ್ ಪೇಗೆ ₹20 ಸಾವಿರ ಕಳುಹಿಸಿದ್ದರು. ಇದಾದ ನಂತರ ಅನುಮಾನ ಬಂದಿದ್ದು, ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡು, ಎಸ್. ಬಿಂಗೀಪುರ ಗ್ರಾಮದಲ್ಲಿ ಮದ್ಯದ ಪಾರ್ಟಿ ಮಾಡುತ್ತಿದ್ದ ವೇಳೆ ಆರೋಪಿಗಳನ್ನು ಬಂಧಿಸ ಲಾಗಿದೆ' ಎಂದು ಪೊಲೀಸರು ತಿಳಿಸಿದರು.


ಬಿಎಂಟಿಸಿ ಬಸ್ ಗುದ್ದಿ ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್ ಗುದ್ದಿ ಪಾದಚಾರಿ ಚೇತನ್ (35) ಎಂಬುವವರು ಮೃತಪಟ್ಟಿದ್ದು, ಈ ಅಪಘಾತದ ಬಗ್ಗೆ ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತಮಿಳುನಾಡಿನ ಚೇತನ್, ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಪೇಟಿಂಗ್ ಕೆಲಸ ಮಾಡುತ್ತಿದ್ದರು. ಬಸವೇಶ್ವರ ನಗರದಲ್ಲಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಗುರುವಾರ ರಾತ್ರಿ ಕೆಲಸ ಮುಗಿಸಿದ್ದ ಚೇತನ್, ಕಾಮಾಕ್ಷಿಪಾಳ್ಯ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಮನೆಯತ್ತ ಹೊರಟಿದ್ದರು. ಕೊಟಿಗೇಪಾಳ್ಯ ಮಾರ್ಗದ ಬಸ್ ಅದೇ ರಸ್ತೆಯಲ್ಲಿ



ತೆರಳುತ್ತಿತ್ತು. ಚಾಲಕ ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ಇದರಿಂದಾಗಿ ಬಸ್, ಚೇತನ್ ಅವರಿಗೆ ಗುದ್ದಿತ್ತು' ಎಂದು ತಿಳಿಸಿದರು.

'ರಸ್ತೆಯಲ್ಲಿ ಬಿದ್ದಿದ್ದ ಚೇತನ್ ಅವರ ಎಡ ಕೈ ಮತ್ತು ಎಡ ಕಾಲಿನ ಪಾದದ ಮೇಲೆಯೇ ಬಸ್ಸಿನ ಚಕ್ರ ಹರಿದಿತ್ತು. ತೀವ್ರ ರಕ್ತಸ್ರಾವವಾಗಿ ನರಳುತ್ತಿದ್ದ ಚೇತನ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದರು.

'ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತಕ್ಕೆ ಕಾರಣವಾದ ಆರೋಪದಡಿ ಬಿಎಂಟಿಸಿ ಬಸ್ ಚಾಲಕ ಶಿವಕುಮಾರ್‌ನನ್ನು ಬಂಧಿಸಲಾಗಿದೆ' ಎಂದು ಹೇಳಿದರು.

'ಅಪಘಾತ: ದಿನಕ್ಕೆ 34 ಮಂದಿ ಸಾವು'

ಬೆಂಗಳೂರು: '2023ರಲ್ಲಿ ಸಂಭವಿಸಿದ್ದ ಅಪಘಾತಗಳಲ್ಲಿ ಪ್ರತಿದಿನ 34 ಮಂದಿ ಮೃತಪಟ್ಟಿದ್ದಾರೆ. ಹಳೇ ವರ್ಷಕ್ಕೆ ಹೋಲಿಸಿದರೆ ಶೇ 5ರಷ್ಟು ಅಪಘಾತಗಳು ಹೆಚ್ಚಳವಾಗಿವೆ' ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್ ಕುಮಾರ್ ಮಾಹಿತಿ ನೀಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಪ್ರಕಟಿಸಿರುವ ಅವರು, ಅಪಘಾತಗಳ ಅಂಕಿ-ಅಂಶಗಳನ್ನು ಹಂಚಿಕೊಂಡಿದ್ದಾರೆ.

'ನಿರ್ಲಕ್ಷ್ಯದ ಚಾಲನೆ, ಚಾಲನೆ ಕೌಶಲ ಇಲ್ಲದಿದ್ದರೂ ಚಾಲನೆ ಮಾಡುವುದು, ರಸ್ತೆ ಸರಿ ಇಲ್ಲದಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಅಪಘಾತಗಳು ಸಂಭವಿಸಿವೆ' ಎಂದು ಅವರು ಹೇಳಿದ್ದಾರೆ.

'2023ರ ಜನವರಿಯಿಂದ ಡಿಸೆಂಬರ್‌ವರೆಗೆ 43,440 ಅಪಘಾತಗಳು ಸಂಭವಿಸಿವೆ. ಇದರಲ್ಲಿ 12,327 ಮಂದಿ ಮೃತಪಟ್ಟಿದ್ದಾರೆ. 52,531 ಮಂದಿ ಗಾಯಗೊಂಡಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ವಿದೇಶಿ ಮಹಿಳೆ ಹತ್ಯೆ: ಇಬ್ಬರು ಹೋಟೆಲ್ ಕೆಲಸಗಾರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚತಾರಾ ಹೋಟೆಲ್‌ವೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದ ವಿದೇಶಿ ಮಹಿಳೆ ಜರೀನಾ ಅವರನ್ನು ಕೊಲೆ ಮಾಡಿದ್ದ ಆರೋಪದಡಿ, ಅದೇ ಹೋಟೆಲ್‌ನ ಇಬ್ಬರು ಕೆಲಸಗಾರರನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಅಮ್ರಿತ್



ರಾಬರ್ಟ್

'ಅಸ್ಸಾಂ ರಾಜ್ಯದ ಚರೈಡಿಯೊ ಜಿಲ್ಲೆಯ ರಾಬರ್ಟ್ ಹಾಗೂ ಅಮ್ರಿತ್ ಬಂಧಿತರು. ಮಹಿಳೆ ಬಳಿಯ ವಸ್ತುಗಳು ಹಾಗೂ ನಗದು ದೋಚುವ ಉದ್ದೇಶದಿಂದ ಮಾರ್ಚ್ 13ರಂದು ತಡರಾತ್ರಿ ಜರೀನಾ ಅವರನ್ನು ಕೊಲೆ ಮಾಡಿ ಆರೋಪಿಗಳು ಪರಾರಿಯಾಗಿದ್ದರು' ಎಂದು ಕೇಂದ್ರ ವಿಭಾಗದ ಡಿಸಿಪಿ ಶೇಖರ್ ತಿಳಿಸಿದರು.

'ಕೃತ್ಯದ ನಂತರ ಆರೋಪಿಗಳು ಕೇರಳಕ್ಕೆ ಹೋಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕೇರಳಕ್ಕೆ ಹೋಗಿದ್ದ ವಿಶೇಷ ತಂಡ, ಆರೋಪಿಗಳನ್ನು ವಶಕ್ಕೆ ಪಡೆದು ನಗರಕ್ಕೆ ಕರೆತಂದಿದೆ. ವಿಚಾರಣೆ ವೇಳೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಇವರಿಂದ ₹13,000 ನಗದು, ₹2,000 ಮುಖಬೆಲೆಯ ಹಾಗೂ ₹5,000 ಉಜ್ಬೇಕಿಸ್ತಾನ್‌ದ 3 ನೋಟುಗಳು, ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

ಉಸಿರುಗಟ್ಟಿಸಿ ಹತ್ಯೆ: 'ಜರೀನಾ ಅವರು ಪ್ರವಾಸಕ್ಕೆಂದು ಮಾರ್ಚ್ 5ರಂದು ನಗರಕ್ಕೆ ಬಂದಿದ್ದರು. ಆನ್‌ಲೈನ್ ಮೂಲಕ ಕೊಠಡಿ ಕಾಯ್ದಿರಿಸಿ ಉಳಿದುಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳಾದ ರಾಬರ್ಟ್ ಹಾಗೂ ಅಮ್ರಿತ್, ಹೋಟೆಲ್‌ನಲ್ಲಿ ಸ್ವಚ್ಛತೆ ಕೆಲಸ ಮಾಡಿಕೊಂಡಿದ್ದರು. ಮಹಿಳೆಯನ್ನು ಆಗಾಗ ಮಾತನಾಡಿಸುತ್ತಿದ್ದರು. ಮಹಿಳೆ ಬಳಿ ಸಾಕಷ್ಟು ಹಣ ಹಾಗೂ ಆಭರಣ ಇರಬಹುದೆಂದು ತಿಳಿದಿದ್ದರು' ಎಂದರು.

'ಮಾರ್ಚ್ 13ರಂದು ರಾತ್ರಿ ಕೊಠಡಿಗೆ ನುಗ್ಗಿದ್ದ ಆರೋಪಿಗಳು, ಮಹಿಳೆ ಬಳಿಯ ನಗದು ಹಾಗೂ ಇತರೆ ವಸ್ತುಗಳನ್ನು ಕಸಿದುಕೊಳ್ಳಲು ಮುಂದಾಗಿದ್ದರು. ಇದಕ್ಕೆ ಮಹಿಳೆ ವಿರೋಧಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿಗಳು, ಮಹಿಳೆಯನ್ನು ಉಸಿರುಗಟ್ಟಿಸಿ ಕೊಂದಿದ್ದರು. ನಂತರ, ಬಾಗಿಲು ಹೊರಗಿನಿಂದ ಲಾಕ್ ಮಾಡಿಕೊಂಡು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಹಲವು ಗಂಟೆಯಾದರೂ ಜರೀನಾ ಅವರು ಕೊಠಡಿಯಿಂದ ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ಹೋಟೆಲ್‌ನ ವ್ಯವಸ್ಥಾಪಕ, ಕೊಠಡಿ ಬಾಗಿಲು ತೆರೆದು ನೋಡಿದಾಗ ಮೃತದೇಹ ಕಂಡಿತ್ತು. ಅವರೇ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ತಿಳಿಸಿದರು.

'ಮಹಿಳೆ ಒಬ್ಬರೇ ಕೊಠಡಿಯಲ್ಲಿದ್ದರು. ಅವರನ್ನು ಭೇಟಿಯಾಗಲು ಯಾರೊಬ್ಬರೂ ಹೋಟೆಲ್‌ಗೆ ಬಂದಿರಲಿಲ್ಲ. ಹೀಗಾಗಿ, ಹೋಟೆಲ್ ಸಿಬ್ಬಂದಿ ಮೇಲೆಯೇ ಅನುಮಾನ ಬಂದಿತ್ತು. ಆರೋಪಿಗಳಾದ ರಾಬರ್ಟ್ ಹಾಗೂ ಅಮ್ರಿತ್ ಸಹ ನಾಪತ್ತೆಯಾಗಿದ್ದರು. ಇವರೇ ಆರೋಪಿ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿತ್ತು' ಎಂದರು.

'ಕೆಲಸಗಾರರ ಹಿನ್ನೆಲೆ ಪರಿಶೀಲನೆಗೆ ಸೂಚನೆ'

'ಆರೋಪಿಗಳಾದ ರಾಬರ್ಟ್ ಹಾಗೂ ಅಮ್ರಿತ್, ಹಲವು ತಿಂಗಳಿನಿಂದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇವರಿಬ್ಬರು ಅಪರಾಧ ಹಿನ್ನೆಲೆಯುಳ್ಳವರೆಂಬ ಮಾಹಿತಿ ಇದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೋಟೆಲ್, ಕಚೇರಿ ಹಾಗೂ ಇತರೆ ಕಡೆಗಳಲ್ಲಿ ಕೆಲಸಗಾರರನ್ನು ನೇಮಿಸಿಕೊಳ್ಳುವಾಗ ಹಿನ್ನೆಲೆ ಪರಿಶೀಲಿಸಬೇಕು. ಕೆಲಸಗಾರರಿಂದ ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯಗೊಳಿಸಬೇಕು. ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ಠಾಣೆಗಳಿಗೆ ಮಾಹಿತಿ ನೀಡಬೇಕು' ಎಂದು ಅವರು ತಿಳಿಸಿದರು.

ಇಂದು, ನಾಳೆ ಫುಡ್‌ಫೆಸ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಉದ್ಯೋಗ ಭಾರತಿ, ಐಎಂಎಸ್ ಫೌಂಡೇಷನ್ ಹಾಗೂ ಬಿಗ್ ಫೌಂಡೇಷನ್ ಸಹಯೋಗದಲ್ಲಿ ಇದೇ 16 ಮತ್ತು 17ರಂದು 'ಫುಡ್‌ಫೆಸ್ಟ್–ಎಕ್ಸ್‌ಪೀರಿಯನ್ಸ್ ಮಿಲ್ಲೆಟ್ಸ್' ಕಾರ್ಯಕ್ರಮವನ್ನು ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಲಘು ಉದ್ಯೋಗ ಭಾರತೀಯ ಜಂಟಿ ಪ್ರಧಾನ ಕಾರ್ಯದರ್ಶಿ ರವಿಕುಮಾರ್, 'ಫುಡ್‌ಫೆಸ್ಟ್‌ನಲ್ಲಿ ರಾಗಿ, ಜೋಳ, ನವಣೆ, ಸಾಮೆ ಸೇರಿದಂತೆ ವಿವಿಧ ಸಿರಿಧಾನ್ಯಗಳಾಧಾರಿತ 100ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ' ಎಂದರು.

'ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳ ಉತ್ಪನ್ನಗಳು, ಮಾರುಕಟ್ಟೆ ಮತ್ತು ಬೇಡಿಕೆ ವಿಶ್ಲೇಷಣೆ, ಪೂರೈಕೆ, ಲಾಜಿಸ್ಟಿಕ್ಸ್ ಮತ್ತು ಗುಣಮಟ್ಟದ ಹಣಕಾಸು ಮತ್ತು ವ್ಯವಹಾರ ಬೆಂಬಲ, ನೆಟ್‌ವರ್ಕಿಂಗ್ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ. ಮೇಳದಲ್ಲಿ 500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು. 'ನಿತ್ಯದ ಅಡುಗೆಯಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಉತ್ತೇಜಿಸುವುದಕ್ಕಾಗಿ ಅಡುಗೆ ಸ್ಪರ್ಧೆ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದಾರೆ' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಲಘು ಉದ್ಯೋಗ ಭಾರತೀಯ ಕಾರ್ಯದರ್ಶಿಗಳಾದ ಹೇಮಾ ರಾಜೇಶ್, ಛಾಯಾ ಪ್ರಭು, ಸಿ.ಎನ್. ಭೋಜರಾಜ ಭಾಗವಹಿಸಿದ್ದರು.

ಉದ್ಯಮಿ ಕೊಲೆ: ಬಟ್ಟೆ ವ್ಯಾಪಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಕೃಷ್ಣ ಯಾದವ್ (55) ಅವರ ಕೊಲೆ ಪ್ರಕರಣ ಭೇದಿಸಿರುವ ಯಲಹಂಕ ಠಾಣೆ ಪೊಲೀಸರು, ಸ್ನೇಹಿತನೇ ಆಗಿರುವ ಆರೋಪಿ ಸಂತೋಷ್ ಕುಮಾರ್‌ನನ್ನು (39) ಬಂಧಿಸಿದ್ದಾರೆ.

'ಬಾಗಲೂರು ವೃತ್ತದಲ್ಲಿ ರಸ್ತೆ ಪಕ್ಕದಲ್ಲಿ ಮಾರ್ಚ್ 12ರಂದು ನಿಲ್ಲಿಸಿದ್ದ ಕಾರಿನಲ್ಲಿ ಕೃಷ್ಣ ಮೃತದೇಹ ಪತ್ತೆಯಾಗಿತ್ತು. ದೇಹದ ಮೇಲೆ ಚಾಕು ಇರಿತದ ಗಾಯಗಳಿದ್ದವು. ಮಗ ನೀಡಿದ್ದ ದೂರು ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಕೆಲ ಪುರಾವೆಗಳನ್ನು ಆಧರಿಸಿ ಆರೋಪಿ ಸಂತೋಷ್‌ಕುಮಾರ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.



ಸಂತೋಷ್ ಕುಮಾರ್



ಕೃಷ್ಣ ಯಾದವ್

'ದಾಸರಹಳ್ಳಿ ಬಳಿಯ ಮರಿಯಣ್ಣಪಾಳ್ಯದ ಸಂತೋಷ್ ಕುಮಾರ್, ಬಟ್ಟೆ ವ್ಯಾಪಾರಿ. ಮಾರುತಿನಗರದ ಕೃಷ್ಣ ಯಾದವ್ ಜೊತೆ ಸ್ನೇಹ ಇಟ್ಟುಕೊಂಡಿದ್ದ. ಇಬ್ಬರೂ ಪರಸ್ಪರ ಸೇರಿ ಪಾರ್ಟಿ ಮಾಡುತ್ತಿದ್ದರು' ಎಂದು ತಿಳಿಸಿದರು.

ಬಟ್ಟೆ ವ್ಯಾಪಾರಕ್ಕೆ ಹೂಡಿಕೆ: 'ಕೃಷ್ಣ ಯಾದವ್ ಅವರ ಕಚೇರಿ ಬಳಿಯೇ ಬೀದಿಬದಿಯಲ್ಲಿ ಸಂತೋಷ್‌ಕುಮಾರ್ ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಈತನ ಬಳಿ ಕೃಷ್ಣ ಬಟ್ಟೆ ಖರೀದಿಸಿದ್ದರು. ಗುಣಮಟ್ಟದ ಬಟ್ಟೆಗಳನ್ನು ಗಮನಿಸಿದ್ದ ಕೃಷ್ಣ, ಸ್ವಂತದ್ದೊಂದು ಕಾಯಂ ಮಳಿಗೆ ತೆರೆಯಲು ಹಣ ಹೂಡಿಕೆ ಮಾಡುವುದಾಗಿ ಹೇಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಪತ್ನಿ ಕಳುಹಿಸು ಎಂದಿದ್ದಕ್ಕೆ ಕೊಲೆ: 'ಕೃಷ್ಣ ಹಾಗೂ ಸಂತೋಷ್ ಕುಮಾರ್ ಮಾರ್ಚ್ 11ರಂದು ರಾತ್ರಿ ಭೇಟಿಯಾಗಿದ್ದರು. ಇಬ್ಬರೂ ಯಲಹಂಕದಲ್ಲಿ ಮದ್ಯ ಕುಡಿದು ಕಾರಿನಲ್ಲಿ ಸುತ್ತಾಡುತ್ತಿದ್ದರು. ಆರೋಪಿ ಸಂತೋಷ್, ತನ್ನ ಮೊಬೈಲ್‌ನಲ್ಲಿದ್ದ ಪತ್ನಿಯ ಫೋಟೊವನ್ನು ಕೃಷ್ಣ ಅವರಿಗೆ ತೋರಿಸಿದ್ದ' ಎಂದು ಪೊಲೀಸರು ಹೇಳಿದರು.

'ಫೋಟೊ ನೋಡಿದ್ದ ಕೃಷ್ಣ, 'ನಿನ್ನ ಪತ್ನಿಯನ್ನು ಒಂದು ರಾತ್ರಿ ನನ್ನ ಬಳಿ ಕಳುಹಿಸು. ನಿನ್ನ ಬಟ್ಟೆ ವ್ಯವಹಾರಕ್ಕೆ ಹೆಚ್ಚಿನ ಹಣ ಹೂಡಿಕೆ ಮಾಡುತ್ತೇನೆ' ಎಂದಿದ್ದ. ಇದರಿಂದ ಕೋಪಗೊಂಡ ಸಂತೋಷ್, ಕೃಷ್ಣ ಮೇಲೆ ದಾಳಿ ಮಾಡಿದ್ದರು. ಕಾರಿನಲ್ಲಿದ್ದ ಚಾಕುವಿನಿಂದ ಕೃಷ್ಣ ಅವರ ದೇಹದ ವಿವಿಧೆಡೆ 14 ಬಾರಿ ಇರಿದಿದ್ದ. ಸ್ಥಳದಲ್ಲೇ ಕೃಷ್ಣ ಮೃತಪಟ್ಟಿದ್ದರು. ಆರೋಪಿ ಪರಾರಿಯಾಗಿದ್ದ' ಎಂದು ತಿಳಿಸಿದರು.



ಪ್ರಶಸ್ತಿ ಪ್ರದಾನ

'ರೋಟರಿ ಕ್ಲಬ್ ಆಫ್ ಬೆಂಗಳೂರು ಕಂಟೋನ್‌ಮೆಂಟ್' ನೀಡುವ 'ರೋಟರಿ ಇಂಟರ್‌ನ್ಯಾಷನಲ್ ಗುಡ್‌ವಿಲ್ ಆ್ಯಂಡ್ ಅಂಡರ್‌ಸ್ಟ್ಯಾಂಡಿಂಗ್ ಅವಾರ್ಡ್–2024' ಪ್ರಶಸ್ತಿಯನ್ನು 'ದಿ ಮ್ಯಾಕ್ಸ್ ಮುಲ್ಲರ್ ಭವನ'ದ ಪರವಾಗಿ ನಿರ್ದೇಶಕ ಮೈಕಲ್ ಹೈನ್ಸ್ಟ್ ಸ್ವೀಕರಿಸಿದರು. ರೋಟರಿ ಕ್ಲಬ್ ಆಫ್ ಬೆಂಗಳೂರು ಕಂಟೋನ್‌ಮೆಂಟ್ ನ ಕಾರ್ಯದರ್ಶಿ ಸುಮನ್ ಶಂಕರ್, ಅಧ್ಯಕ್ಷೆ ಗರ್ಗಿ ಓಝಾ, ರೋಟರಿ ಇಂಟರ್‌ನ್ಯಾಷನಲ್ ಸರ್ವಿಸಸ್‌ನ ಡಿಸ್ಟ್ರಿಕ್ಟ್ ಡೈರೆಕ್ಟರ್ ವಚನ್ ಸುಂಕು ಹಾಗೂ ಕಂಟೋನ್‌ಮೆಂಟ್ ರೋಟರಿ ಇಂಟರ್‌ನ್ಯಾಷನಲ್ ಸರ್ವಿಸಸ್ ಡೈರೆಕ್ಟರ್ ಶ್ರೀಕಾಂತ್ ಕೆ.ಪಿ. ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ/

ಅತಿಥಿ ಶಿಕ್ಷಕರ ವಾರ್ಷಿಕ ಸಮ್ಮೇಳನ ನಾಳೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದಿಂದ ಇದೇ 17ರಂದು 'ಅತಿಥಿ ಶಿಕ್ಷಕರ ವಾರ್ಷಿಕ ರಾಜ್ಯ ಸಮ್ಮೇಳನವನ್ನು ಮೈಸೂರು ಬ್ಯಾಂಕ್ ವೃತ್ತದಲ್ಲಿರುವ ಶಿಕ್ಷಕರ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಹನುಮಂತ ಎಚ್.ಎಸ್. ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರಿ ಶಿಕ್ಷಕರಂತೆ ಅತಿಥಿ ಶಿಕ್ಷಕರಿಗೆ ಬೇಸಿಗೆಯ ರಜೆ ಸೇರಿದಂತೆ 12 ತಿಂಗಳು ವೇತನ ನೀಡಬೇಕು. ಪ್ರತಿವರ್ಷ ಸೇವೆ ಸಲ್ಲಿಸಿದ ಶಾಲೆಗಳಲ್ಲಿ ಪ್ರತಿವರ್ಷ ಸೇವಾ ಪ್ರಮಾಣ ಪತ್ರವನ್ನು ನೀಡಬೇಕು. ಸರ್ಕಾರಿ ಶಿಕ್ಷಕರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕೆಂದು ಸಮ್ಮೇಳನದಲ್ಲಿ ಹಕ್ಕೊತ್ತಾಯಗಳನ್ನು ಮಂಡನೆ ಮಾಡಲಾಗುವುದು' ಎಂದು ತಿಳಿಸಿದರು.

ಪೋಕ್ಸೊ ಪ್ರಕರಣ: ಬಿಎಸ್‌ವೈ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಪೋಕ್ಸೊ ಕಾಯ್ದೆಯಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

ಮಹಿಳೆಯೊಬ್ಬಳು ಮಗಳಿಗೆ ಆದ ಅನ್ಯಾಯಕ್ಕೆ ನ್ಯಾಯ ಕೊಡಿಸಿ ಎಂದು ಕೇಳಲು ಹೋದಾಗ, ಯಡಿಯೂರಪ್ಪ ಅವರು ಮಗಳೊಂದಿಗೆ ಪ್ರತ್ಯೇಕವಾಗಿ ಮಾತನಾಡುವುದಾಗಿ ಒಳಗೆ ಕರೆಸಿಕೊಂಡು ಲೈಂಗಿಕ ಕಿರುಕುಳ ನೀಡಿರುವುದಾಗಿ ಮಹಿಳೆಯೊಬ್ಬರು ಸದಾಶಿವನಗರದಲ್ಲಿ ದೂರು ದಾಖಲಿಸಿದ್ದಾರೆ. ಈ ಮಧ್ಯೆ, ದೂರುದಾರ ಮಹಿಳೆಯು ಮಾನಸಿಕ ಅಸ್ವಸ್ಥೆ ಎಂಬಿತ್ಯಾದಿ ದೋಷಾರೋಪಗಳು ಈಗಾಗಲೇ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ಪ್ರಭಾವಿ ವ್ಯಕ್ತಿಗಳ



ವಿರುದ್ಧ ದೂರು ನೀಡಿದ ಕೂಡಲೇ ಮಹಿಳೆಯರ ಮೇಲೆ ಇಂಥ ಟೀಕೆ, ಪ್ರಚಾರ ಶುರುವಾಗುತ್ತದೆ. ಇದು ಮಹಿಳಾ ವಿರೋಧಿ ಧೋರಣೆ ಎಂದು ಸಂಘಟನೆ ಹೇಳಿದೆ.

'ನೀವು ಏನಾದರೂ ಹೇಳಬೇಕಿದ್ದರೆ ಕೋರ್ಟ್‌ನಲ್ಲಿ ಹೇಳಿ' ಎಂದು ಜನಸಾಮಾನ್ಯರಿಗೆ ಹೇಳುವ ಪೊಲೀಸ್ ಇಲಾಖೆ ಇದನ್ನೇ ಪ್ರಭಾವಿಗಳಿಗೂ ಅನ್ವಯ ಮಾಡಬೇಕು. ರಾಜ್ಯದ ಮಾಜಿ ಮುಖ್ಯಮಂತ್ರಿ ಎಂಬ ಕಾರಣಕ್ಕೆ ವಿನಾಯಿತಿ ತೋರುವ ಅಗತ್ಯವಿಲ್ಲ. ಪೋಕ್ಸೊ ಕಾನೂನಿನ ಪ್ರಕಾರ ದೂರು ದಾಖಲಾದಾಗ ವಹಿಸಬೇಕಾದ ಕ್ರಮವನ್ನು ಯಾವುದೇ ಮುಲಾಜಿಗೆ ಒಳಗಾಗದೇ ಸರ್ಕಾರ ತೆಗೆದುಕೊಳ್ಳಬೇಕು. ಜೊತೆಗೆ ದೂರುದಾರ ಮಹಿಳೆಗೆ ರಕ್ಷಣೆ ನೀಡಬೇಕು ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಒತ್ತಾಯಿಸಿದ್ದಾರೆ.

ಅಬಕಾರಿ ನೀತಿ ಹಗರಣ ಇ.ಡಿಯಿಂದ ಕವಿತಾ ಬಂಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಿಆರ್‌ಎಸ್ ನಾಯಕಿ ಹಾಗೂ ವಿಧಾನಪರಿಷತ್ ಸದಸ್ಯೆ ಕೆ. ಕವಿತಾ ಅವರನ್ನು ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದು, ಹೆಚ್ಚಿನ ವಿಚಾರಣೆಗಾಗಿ ದೆಹಲಿಗೆ ಕರೆದೊಯ್ದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಹೈದರಾಬಾದ್‌ಗೆ ಭೇಟಿ ಕೊಟ್ಟು ರೋಡ್‌ಶೋ ನಡೆಸಿದ್ದಾರೆ. ಅದರ ಬೆನ್ನಿಗೇ ಬಿಆರ್‌ಎಸ್ ವರಿಷ್ಠ ಕೆ. ಚಂದ್ರಶೇಖರ್ ರಾವ್ ಪುತ್ರಿ ಕವಿತಾ ಅವರ ಬಂಧನವಾಗಿದೆ. ಇದು ಬಿಆರ್‌ಎಸ್ ಮತ್ತು ಬಿಜೆಪಿ ನಡುವೆ ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

'ಕವಿತಾ ಅವರ ಬಂಧನ ಕಾನೂನುಬಾಹಿರ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಪಕ್ಷದ ಕಾರ್ಯಕರ್ತರ ನೈತಿಕಸ್ಥೈರ್ಯ ಕುಸಿಯುವಂತೆ ಮಾಡಲು ಬಿಜೆಪಿ ಹೆಣೆದಿರುವ ರಾಜಕೀಯ ಪಿತೂರಿಯ ಭಾಗವಾಗಿದೆ' ಎಂದು ಬಿಆರ್‌ಎಸ್ ಆರೋಪಿಸಿದೆ.



ಕೆ.ಕವಿತಾ ಅವರನ್ನು ಇ.ಡಿ ಅಧಿಕಾರಿಗಳು ಹೈದರಾಬಾದ್‌ನಲ್ಲಿ ಶುಕ್ರವಾರ ಬಂಧಿಸಿ ದೆಹಲಿಗೆ ಕರೆದೊಯ್ದರು –ಪಿಟಿಐ ಚಿತ್ರ

ಹೈದರಾಬಾದ್‌ನಲ್ಲಿರುವ ಕವಿತಾ ಅವರ ನಿವಾಸದಲ್ಲಿ ನಿರ್ದೇಶನಾಲಯದ ಅಧಿಕಾರಿಗಳು ಬೆಳಿಗ್ಗೆ ಶೋಧ ನಡೆಸಿ, ನಂತರ ಅವರನ್ನು ಬಂಧಿಸಿದರು ಎಂದು ಇ.ಡಿ ಮೂಲಗಳು ಹೇಳಿವೆ.

5–6 ಗಂಟೆ ಶೋಧ ನಡೆಸಿದ ನಂತರ, ಇ.ಡಿ ಅಧಿಕಾರಿಗಳು ಬಂಧನ ವಾರಂಟ್ ಜಾರಿ ಮಾಡಿ, ಕವಿತಾ ಅವರನ್ನು ವಶಕ್ಕೆ ಪಡೆದರು.

ಕವಿತಾ ನಿವಾಸದಲ್ಲಿ ಇ.ಡಿ ಅಧಿಕಾರಿಗಳು ಶೋಧಕ್ಕೆ ಮುಂದಾದ ಸಂದರ್ಭದಲ್ಲಿ, ಹಲವು ನಾಟಕೀಯ ಬೆಳವಣಿಗೆಗಳು ನಡೆದವು. ಕವಿತಾ ಅವರ ಸಹೋದರ ಹಾಗೂ ಮಾಜಿ ಸಚಿವ ಕೆ.ಟಿ. ರಾಮರಾವ್, ಕುಟುಂಬದ ಸದಸ್ಯರು ಹಾಗೂ ಬಿಆರ್‌ಎಸ್ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಸ್ಥಳದಲ್ಲಿ ಜಮಾಯಿಸಿದ್ದರಲ್ಲದೇ, ಇ.ಡಿ ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ ನಡೆಸಿದರು.

'ಪ್ರಕರಣಕ್ಕೆ ಸಂಬಂಧಿಸಿ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಅಲ್ಲದೇ, ಪ್ರಯಾಣದ ವಾರಂಟ್ ಹಾಜರುಪಡಿಸದೇ ಕವಿತಾ ಅವರನ್ನು ಹೇಗೆ ಬಂಧಿಸುತ್ತೀರಿ' ಎಂದು ಕೆ.ಟಿ. ರಾಮ ರಾವ್, ಇ.ಡಿ ಅಧಿಕಾರಿಗಳನ್ನು ಪ್ರಶ್ನಿಸಿದರು.

ಶಾಸಕ ಯತ್ನಾಳ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ವಿಜಯಪುರ ನಗರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಯತ್ನಾಳ್ ಸಲ್ಲಿಸಿದ್ದ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯತ್ನಾಳ್ ಪರ ವಾದ ಮಂಡಿಸಿದ ವಕೀಲ ವೆಂಕಟೇಶ ಪಿ.ದಳವಾಯಿ, 'ದೂರಿನಲ್ಲಿ ಆರೋಪಿಸಿರುವಂತೆ ಅರ್ಜಿದಾರರ ಭಾಷಣವು ಕೋಮು ಗಲಭೆಗೆ ಪ್ರಚೋದನೆ ನೀಡಿಲ್ಲ. ಏಕೆಂದರೆ, ಅವರ ಭಾಷಣದ ಬಳಿಕ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಆದ್ದರಿಂದ, ಎಫ್‌ಐಆರ್ ರದ್ದುಪಡಿಸಬೇಕು' ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಗೆ ತಡೆ ನೀಡಿತು. ಪ್ರಾಸಿಕ್ಯೂಷನ್ ಪರ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–2 ಬಿ.ಎನ್. ಜಗದೀಶ್ ಹಾಜರಿದ್ದರು.

ಪ್ರಕರಣವೇನು?: 'ವಿಜಯಪುರ ನಗರದಲ್ಲಿ ಇದೇ 3ರಂದು ಆಯೋಜಿಸಲಾಗಿದ್ದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹಾಗೂ ತೆಲಂಗಾಣದ ಗೋಶಾ ಮಹಲ್ ವಿಧಾನಸಭಾ ಕ್ಷೇತ್ರದ ಶಾಸಕ ರಾಜಾಸಿಂಗ್ ಲೋಧಾ ಭಾಗವಹಿಸಿದ್ದರು. ವೇದಿಕೆಯಲ್ಲಿ ಭಾಷಣ ಮಾಡುವಾಗ ಇಬ್ಬರೂ ಪ್ರಚೋದನಕಾರಿ ಮತ್ತು ಎರಡು ಸಮುದಾಯಗಳ ಮಧ್ಯೆ ವೈಷಮ್ಯ ಹುಟ್ಟುಹಾಕುವ ಮಾತುಗಳನ್ನಾಡಿದ್ದಾರೆ' ಎಂದು ಸ್ಥಳೀಯ ನಿವಾಸಿ ಅಬೂಬಕರ್ ರಾಜೇಸಾಬ್ ಕಂಬಾಗಿ ದೂರು ನೀಡಿದ್ದರು. ಇದನ್ನು ಆಧರಿಸಿ ಗಾಂಧಿಚೌಕ ಠಾಣೆ ಪೊಲೀಸರು ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಅನಂತ ಕುಮಾರ ಹೆಗಡೆ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆ

ಹೆಗಡೆ ವಿರುದ್ಧದ ಪ್ರಕರಣಗಳಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ಅನಂತ ಕುಮಾರ ಹೆಗಡೆ ವಿರುದ್ಧ ಮುಂಡಗೋಡು ಠಾಣಾ ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಅನಂತ ಕುಮಾರ ಹೆಗಡೆ ಸಲ್ಲಿಸಿದ್ದ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು. ಅರ್ಜಿದಾರರ ಪರ ವಕೀಲ ಎಚ್.ಪವನಚಂದ್ರ ಶೆಟ್ಟಿ ವಾದ ಆಲಿಸಿದ ನ್ಯಾಯಮೂರ್ತಿಗಳು, ಪ್ರತಿವಾದಿಗಳಾದ ಮುಂಡಗೋಡು ಠಾಣಾ ಪೊಲೀಸರು ಮತ್ತು ದೂರುದಾರ ಕಾನ್‌ಸ್ಟೆಬಲ್ ಗಣಪತಿ ಬಸವಂತಪ್ಪ



ಹುನ್ನಳ್ಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದರು.

ಪ್ರಕರಣವೇನು?: ಮುಂಡಗೋಡು ತಾಲ್ಲೂಕಿನ ಪಾಳಾ ಮತ್ತು ಇಂದೂರ ಗ್ರಾಮದಲ್ಲಿ 2024ರ ಫೆಬ್ರುವರಿ 23ರಂದು ಬಿಜೆಪಿ ಮಹಾಶಕ್ತಿ ಕೇಂದ್ರದ ಕಾರ್ಯಕರ್ತರ ಸಭೆ ನಡೆದಿತ್ತು. ಇದರಲ್ಲಿ ಭಾಗವಹಿಸಿದ್ದ ಅನಂತ ಕುಮಾರ ಹೆಗಡೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ 'ಸಿದ್ರಾಮುಲ್ಲಾ ಖಾನ್ ಅತ್ಯಂತ ಹೇಸಿಗೆ ಬರುವ ರೀತಿ ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವಲ್ಲಿ ನಿರತರಾಗಿದ್ದಾರೆ. ಇಂತಹ ಸರ್ಕಾರವನ್ನು ನಾವೆಲ್ಲೂ ನೋಡಿಲ್ಲ. ಇವರ ಕೈಯಲ್ಲಿ ಅಧಿಕಾರ ಕೊಟ್ಟರೆ ನಮ್ಮನ್ನು ಮಾರಾಟ ಮಾಡುತ್ತಾರೆ. ಹಿಂದೂಗಳ ದೇವಸ್ಥಾನದ ಹುಂಡಿಗೆ ಹಾಕಿದ ಹಣವನ್ನು, ಚರ್ಚ್, ಮಸೀದಿಗೆ ಕೊಡುತ್ತಾರೆ. ಹಿಂದೂಗಳ ದೇವಸ್ಥಾನದಲ್ಲಿ ದೇವರಿಲ್ಲವೇ' ಎಂದು ಪ್ರಶ್ನಿಸಿದ್ದರು.

'ಅನಂತ ಕುಮಾರ ಹೆಗಡೆ ಸಿದ್ದರಾಮಯ್ಯ ವಿರುದ್ಧ ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ. ತನ್ಮೂಲಕ ಜಾತಿ, ಧರ್ಮಗಳ ನಡುವೆ ದ್ವೇಷ ಹುಟ್ಟುಹಾಕುವ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವ ರೀತಿಯಲ್ಲಿ ಪ್ರಚೋದನಾಕಾರಿ ಮಾತುಗಳನ್ನಾಡಿದ್ದಾರೆ' ಎಂದು ಆರೋಪಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿದೆ.

ಮತ್ತೊಂದು ಪ್ರಕರಣ: 'ಉತ್ತರ ಕನ್ನಡ ಜಿಲ್ಲೆಯ ತೆಂಗಿನಗುಂಡಿ ಬಂದರಿನಲ್ಲಿ 2024ರ ಜನವರಿ 21ರಂದು ಮತ್ತು 30ರಂದು ಅನಧಿಕೃತವಾಗಿ ಧ್ವಜದ ಕಟ್ಟೆ ಕಟ್ಟಿದ ಮತ್ತು ಆ ಕಟ್ಟೆಗೆ ವೀರ ಸಾವರ್ಕರ್ ಎಂಬ ನಾಮಫಲಕ ಅಳವಡಿಸಿ, ಧ್ವಜಸ್ತಂಭಕ್ಕೆ ಭಗವಾ ಧ್ವಜ ಅಳವಡಿಸಲಾಗಿದೆ' ಎಂದು ಆರೋಪಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಅನಂತ ಕುಮಾರ ಹೆಗಡೆ ವಿರುದ್ಧ ಭಟ್ಕಳ ಗ್ರಾಮಾಂತರ ಠಾಣಾ ಪೊಲೀಸರು ದಾಖಲಿಸಿದ್ದ ಎಫ್‌ಐಆರ್‌ಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ ಶುಕ್ರವಾರ ತಡೆ ನೀಡಿದೆ.

ಪ್ರತಿವಾದಿಗಳಾದ ಭಟ್ಕಳ ಗ್ರಾಮಾಂತರ ಠಾಣೆ ಪೊಲೀಸರು ಮತ್ತು ದೂರುದಾರ ಹೆಬ್ಳೆ ಪಂಚಾಯಿತಿ ಪಿಡಿಒ ಮಂಜುನಾಥ ಎಂ.ಗೊಂಡ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ. ಹೆಬ್ಳೆ ಪಂಚಾಯಿತಿಯಿಂದ ಅನುಮತಿ ಪಡೆಯದೇ ಅನಧಿಕೃತವಾಗಿ ಧ್ವಜ ಕಟ್ಟೆ ನಿರ್ಮಿಸಲಾಗಿದೆ ಎಂದು ಪ್ರಕರಣದಲ್ಲಿ ಅನಂತ ಕುಮಾರ ಹೆಗಡೆ ಅವರನ್ನು 16ನೇ ಆರೋಪಿಯನ್ನಾಗಿ ಮಾಡಲಾಗಿದೆ.

ವಿಚಾರಣೆಗೆ ಸಹಕರಿಸಲು ರಮೇಶ ಜಾರಕಿಹೊಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೌಭಾಗ್ಯಲಕ್ಷ್ಮೀ ಸಕ್ಕರೆ ಕಾರ್ಖಾನೆ ಅಭಿವೃದ್ಧಿಗೆ ಪಡೆದ ಸಾಲವನ್ನು ಮರುಪಾವತಿ ಮಾಡಿಲ್ಲ' ಎಂದು ಆರೋಪಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ವಿಚಾರಣೆಗೆ ಸಹಕರಿಸುವಂತೆ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಹೈಕೋರ್ಟ್ ಸೂಚಿಸಿದೆ.

ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಹಾಗೂ ಸಿಐಡಿ ನಡೆಸುತ್ತಿರುವ ತನಿಖೆ ರದ್ದುಪಡಿಸುವಂತೆ ಕೋರಿ ಸೌಭಾಗ್ಯಲಕ್ಷ್ಮಿ ಶುಗರ್ಸ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರಮೇಶ ಜಾರಕಿಹೊಳಿ ಸಲ್ಲಿಸಿರುವ ಅರ್ಜಿಯನ್ನು ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–2 ಬಿ.ಎನ್. ಜಗದೀಶ್, 'ವಿಚಾರಣೆಗೆ ಹಾಜರಾಗುವಂತೆ ಅರ್ಜಿದಾರರಿಗೆ ಸಿಐಡಿ ನೋಟಿಸ್ ಜಾರಿಗೊಳಿಸಿದೆ. ಆದರೆ, ಅವರು ವಿಚಾರಣೆಗೆ ಹಾಜರಾಗುತ್ತಿಲ್ಲ. ಇದರಿಂದ ಪ್ರಕರಣದ ತನಿಖೆಗೆ ಸ್ಥಗಿತಗೊಂಡಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.



ರಮೇಶ ಜಾರಕಿಹೊಳಿ

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿಗಳು, ಸಿಐಡಿ ವಿಚಾರಣೆಗೆ ಹಾಜರಾಗಿ ತನಿಖೆ ಮುಂದುವರಿಯಲು ಸಹಕರಿಸುವಂತೆ ಅರ್ಜಿದಾರರಿಗೆ ಸೂಚಿಸಿತು. ಜತೆಗೆ, ಅರ್ಜಿದಾರರು ವಿಚಾರಣೆಗೆ ಹಾಜರಾದಲ್ಲಿ, ಅವರನ್ನು ಕೋರ್ಟ್ ಅನುಮತಿಯಿಲ್ಲದೆ ಬಂಧಿಸಬಾರದು ಎಂದು ಸಿಐಡಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

‘ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್‌ನತ್ತ ಬರುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇಷ್ಟು ವರ್ಷಗಳ ಕಾಲ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್– ಜೆಡಿಎಸ್ ಮಧ್ಯೆ ಸ್ಪರ್ಧೆ ಇತ್ತು. ಈಗ ಎಚ್.ಡಿ. ದೇವೇಗೌಡರ ಕುಟುಂಬವೇ ಬಿಜೆಪಿ ಸೇರಿರುವುದರಿಂದ ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್‌ನತ್ತ ಬರುತ್ತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣಾ ಸಿದ್ಧತೆ ಕುರಿತು ಕ್ಷೇತ್ರದ ವ್ಯಾಪ್ತಿಯ ಶಾಸಕರು, ವಿಧಾನಸಭಾ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳು ಮತ್ತು ಪ್ರಮುಖ ಮುಖಂಡರ ಜತೆ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಜೆಡಿಎಸ್ ನಾಯಕರ ನಿರ್ಧಾರದಿಂದ ಆತಂಕಗೊಂಡಿರುವ ಆ ಪಕ್ಷದ ಕಾರ್ಯಕರ್ತರು ನಮ್ಮನ್ನು ಸಂಪರ್ಕಿಸುತ್ತಿದ್ದಾರೆ. ಹಳೆಯ ಘಟನೆಗಳನ್ನು ಮರೆತು ಎಲ್ಲರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳಲು ಸೂಚನೆ ನೀಡಿದ್ದೇನೆ’ ಎಂದರು.

‘ಜೆಡಿಎಸ್ ಇದೆಯಾ ಎಂಬುದನ್ನು ದೇವೇಗೌಡರು ಮತ್ತು ಎಚ್.ಡಿ. ಕುಮಾರಸ್ವಾಮಿ ನೋಡಿಕೊಳ್ಳಲಿ. ಆ ಬಳಿಕ ನಮ್ಮ ಪಕ್ಷದ ಬಗ್ಗೆ ಮಾತನಾಡಲಿ’ ಎಂದು ಹೇಳಿದರು.

‘ಜೆಡಿಎಸ್‌ನಿಂದಲೇ ಸ್ಪರ್ಧಿಸಬೇಕಿತ್ತು’: ಸಂಸದ ಡಿ.ಕೆ. ಸುರೇಶ್ ಮಾತನಾಡಿ, ‘ನಾನು ಕೆಲಸ ಮಾಡಿದ್ದೇನೆ. ಹೀಗಾಗಿ ಜನರ ಬಳಿ ಕೂಲಿ ಕೇಳುತ್ತಿದ್ದೇನೆ. ಡಾ.ಸಿ. ಎನ್. ಮಂಜುನಾಥ್ ಪ್ರಬಲ ಅಭ್ಯರ್ಥಿಯಾಗಿದ್ದರೆ ಜೆಡಿಎಸ್ ಚಿಹ್ನೆಯ ಅಡಿಯಲ್ಲೇ ಸ್ಪರ್ಧಿಸಬೇಕಿತ್ತು. ಜೆಡಿಎಸ್‌ನ ಮಹಿಳೆ ತೆನೆ ಇಳಿಸಿದ್ದಾಳೆ. ಹೀಗಾಗಿ ನನ್ನ ಜತೆ ಬನ್ನಿ ಎಂದು ಆ ಪಕ್ಷದ ಸ್ನೇಹಿತರಲ್ಲಿ ಮನವಿ ಮಾಡುತ್ತೇನೆ’ ಎಂದು ಹೇಳಿದರು.

‘ಹಾಸನದವರಿಗೆ ಗುತ್ತಿಗೆಗೆ ಕೊಟ್ಟಿಲ್ಲ’

‘ಎಚ್.ಡಿ. ಕುಮಾರಸ್ವಾಮಿ ಮತ್ತು ಹಾಸನ ಜಿಲ್ಲೆಯವರಿಗೆ ರಾಮನಗರ ಜಿಲ್ಲೆಯನ್ನು ಗುತ್ತಿಗೆಗೆ ಕೊಟ್ಟಿದ್ದೇವೆ ಎಂಬ ಭಾವನೆ ಇದೆ. ನಮ್ಮ ಜಿಲ್ಲೆಯನ್ನು ಗುತ್ತಿಗೆಗೆ ಕೊಟ್ಟಿಲ್ಲ’ ಎಂದು ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು.

‘ಕುಮಾರಸ್ವಾಮಿ ಅವರೇ ಸ್ಪರ್ಧಿಸಬಹುದಿತ್ತಲ್ಲವೆ? ಅವರ ಸಂಬಂಧಿಯನ್ನು ಏಕೆ ಬೇರೆ ಪಕ್ಷದಿಂದ ಕಣಕ್ಕಿಳಿಸುತ್ತಿದ್ದಾರೆ’ ಎಂದು ಕೇಳಿದರು.

ಶಿವಮೊಗ್ಗದಿಂದ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ

ಯಡಿಯೂರಪ್ಪ ಮಗನ ವಿರುದ್ಧ ಈಶ್ವರಪ್ಪ ಸ್ಪರ್ಧೆ

ಪ್ರಜಾವಾಣಿ ವಾರ್ತೆ

> **ಬೆಳಗಾವಿ ಲೋಕಸಭೆ ಕ್ಷೇತ್ರದ ಅಭ್ಯರ್ಥಿ ಆಯ್ಕೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಸ್ಥಳೀಯವಾಗಿ ಸಂಜಯ ಪಾಟೀಲ, ಹಾಲಿ ಸಂಸದರಾದ ಮಂಗಳ ಅಂಗಡಿ ಇದ್ದಾರೆ. ಸ್ಥಳೀಯರಿಗೆ ಟಿಕೆಟ್ ನೀಡಬೇಕು**
> **ರಮೇಶ ಜಾರಕಿಹೊಳಿ,** ಬಿಜೆಪಿ ಶಾಸಕ



ಬೆಂಗಳೂರು: ಬಿಜೆಪಿಯಲ್ಲಿ ಟಿಕೆಟ್ ಬೇಗುದಿ ತಾರಕಕ್ಕೇರಿದ್ದು, ಬಿಜೆಪಿಯ ಹಿರಿಯ ನಾಯಕ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಅವರು ಶಿವಮೊಗ್ಗ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವುದಾಗಿ ಘೋಷಿಸಿದ್ದಾರೆ.

ಈ ಕ್ಷೇತ್ರದಲ್ಲಿ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪನವರ ಮಗ, ಹಾಲಿ ಸಂಸದ ಬಿ.ವೈ. ರಾಘವೇಂದ್ರ ಅವರೇ ಅಭ್ಯರ್ಥಿ ಆಗಲಿದ್ದಾರೆ ಎಂದು ಪಕ್ಷ ಘೋಷಿಸಿದೆ.

ಶುಕ್ರವಾರ ಸಂಜೆ ಶಿವಮೊಗ್ಗದಲ್ಲಿ ನಡೆದ ‘ಅಭಿಪ್ರಾಯ ಸಂಗ್ರಹಣಾ ಸಭೆ’ಯಲ್ಲಿ ಈಶ್ವರಪ್ಪ ಈ ನಿರ್ಧಾರ ಪ್ರಕಟಿಸಿದ್ದಾರೆ. ‘ಇದು ಉದ್ವೇಗದ ತೀರ್ಮಾನ ಅಲ್ಲ. ಕಾಂಗ್ರೆಸ್ ಪಕ್ಷದ ಕುಟುಂಬ ರಾಜಕಾರಣವನ್ನು ವಿರೋಧಿಸಿಕೊಂಡು ಬಂದಿದ್ದೆವು. ಈಗ ಯಡಿಯೂರಪ್ಪ ಕುಟುಂಬ ರಾಜಕಾರಣಕ್ಕೆ ಮನ್ನಣೆ ನೀಡುವುದು ಎಷ್ಟು ಸರಿ? ಪಕ್ಷವನ್ನು ಕುಟುಂಬ ರಾಜಕಾರಣದ ಹಿಡಿತದಿಂದ ಬಿಡಿಸಲು ಹೋರಾಟ ಆರಂಭಿಸಿದ್ದೇನೆ’ ಎಂದು ಈಶ್ವರಪ್ಪ ಹೇಳಿದರು.

‘ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಬಿಜೆಪಿಯ ಬಿ.ವೈ.ರಾಘವೇಂದ್ರ, ಕಾಂಗ್ರೆಸ್‌ನ ಗೀತಾ ಶಿವರಾಜಕುಮಾರ್ ಅವರಿಗಿಂತ ಗುಲಗಂಜಿಯಷ್ಟಾದರೂ ತೂಕದಲ್ಲಿ ಹೆಚ್ಚಿದ್ದೇನೆ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಪರವಾಗಿ ಚುನಾವಣೆಗೆ ನಿಲ್ಲುತ್ತಿರುವೆ. ಸಿದ್ಧಾಂತ ಉಳಿಸಬೇಕು. ಬಿಜೆಪಿ ಮತ್ತೊಂದು ಕಾಂಗ್ರೆಸ್ ಪಕ್ಷ ಆಗದಂತೆ ತಡೆಯಬೇಕು ಎಂಬ ಕಾರಣಕ್ಕೇ ಈ ಸ್ಪರ್ಧೆ’ ಎಂದು ಅವರು ತಿಳಿಸಿದರು.

ಈ ಮಧ್ಯೆ ಶಿವಮೊಗ್ಗಕ್ಕೆ ಶುಕ್ರವಾರ ಬೆಳಿಗ್ಗೆ ಭೇಟಿ ನೀಡಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು, ‘ಈಶ್ವರಪ್ಪ ಅವರಿಗೆ ಅನ್ಯಾಯವಾಗಿದೆ. ಹಾವೇರಿ– ಗದಗ ಲೋಕಸಭಾ ಕ್ಷೇತ್ರದ ಟಿಕೆಟ್ ಬದಲಾವಣೆಗೆ ಇನ್ನೂ ಅವಕಾಶವಿದೆ. ಕೆ.ಇ.ಕಾಂತೇಶ್ ಅವರಿಗೆ ಟಿಕೆಟ್ ಕೊಡುವಂತೆ ದೆಹಲಿಗೆ ತೆರಳಿ ಪಕ್ಷದ ವರಿಷ್ಠರೊಂದಿಗೆ ಚರ್ಚೆ ನಡೆಸುತ್ತೇನೆ. ಈಶ್ವರಪ್ಪ ಅವರ ಮನವೊಲಿಸುವ ಕೆಲಸ ಮಾಡಿದ್ದೇನೆ’ ಎಂದು ಹೇಳಿದ್ದರು.

ರೈಲು ಪ್ರಯಾಣದ ಅವಧಿ ಇಳಿಕೆಗೆ ಕ್ರಮ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ವಿಜಯಪುರ–ಬಾಗಲಕೋಟೆ ರೈಲು ಪ್ರಯಾಣದ ಸಮಯ ನಾಲ್ಕು ಗಂಟೆಗಳಷ್ಟು ಕಡಿಮೆ ಮಾಡಲು ರೈಲ್ವೆ ಇಲಾಖೆ ಸಮ್ಮತಿಸಿದೆ ಎಂದು ಕೈಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಹೇಳಿದರು.

ಮೂಲಸೌಕರ್ಯ ಅಭಿವೃದ್ಧಿ ಇಲಾಖೆ, ನೈರುತ್ಯ ರೈಲ್ವೆ ಅಧಿಕಾರಿಗಳ ಜತೆ ಶುಕ್ರವಾರ ನಡೆಸಿದ ಸಭೆಯ ನಂತರ ಅವರು ಮಾತನಾಡಿದರು.

ಬೆಂಗಳೂರಿನಿಂದ ವಿಜಯಪುರ, ಬಾಗಲಕೋಟೆ ನಡುವಿನ 660 ಕಿ.ಮೀ. ಪ್ರಯಾಣಕ್ಕೆ 14 ಗಂಟೆ ವ್ಯಯವಾಗುತ್ತಿದೆ. ಹುಬ್ಬಳ್ಳಿ ನಿಲ್ದಾಣ ಹಾಗೂ ಗದಗದಲ್ಲಿ ಸಮಯ ವ್ಯರ್ಥವಾಗುತ್ತಿದೆ. ಅದನ್ನು ತಪ್ಪಿಸಿ, 10 ಗಂಟೆಗಳಿಗೆ ಇಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮನವರಿಕೆ ಮಾಡಲಾಗಿದೆ. ವಿಶೇಷ ರೈಲುಗಳ ಸಂಚಾರ ಹಾಗೂ ವಿದ್ಯುದೀಕರಣ ಕಾಮಗಾರಿ ಪೂರ್ಣಗೊಂಡರೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸಲು ಪ್ರಸ್ತಾವ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಹೋಳಿ ಹಬ್ಬ: ವಿಶೇಷ ರೈಲುಗಳ ಸಂಚಾರ

ಬೆಂಗಳೂರು: ಮುಂಬರುವ ಹೋಳಿ ಹಬ್ಬದ ಸಮಯದಲ್ಲಿ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಬೆಂಗಳೂರು–ಕೊಚುವೇಲಿ ನಿಲ್ದಾಣಗಳ ನಡುವೆ ಮಾರ್ಚ್ 23 ಮತ್ತು 30ರಂದು ರಾತ್ರಿ 11.55ಕ್ಕೆ ವಿಶೇಷ ರೈಲು



ಎರಡು ಟ್ರಿಪ್ ಸಂಚರಿಸಲಿವೆ. ಮಾರ್ಚ್ 24, 31ರಂದು ರಾತ್ರಿ 10ಕ್ಕೆ ಕೊಚುವೇಲಿಯಿಂದ ವಾಪಸ್ ಹೊರಡಲಿವೆ.

ಎಸ್‌ಎಂವಿಟಿ ಬೆಂಗಳೂರು-ಕಣ್ಣೂರು ನಿಲ್ದಾಣಗಳ ನಡುವೆ ಮಾರ್ಚ್ 19 ಮತ್ತು 26ರಂದು ರಾತ್ರಿ 11.55ಕ್ಕೆ ವಿಶೇಷ ರೈಲು ಎರಡು ಟ್ರಿಪ್ ಸಂಚರಿಸಲಿವೆ. ಮಾರ್ಚ್ 20 ಮತ್ತು 27ರಂದು ರಾತ್ರಿ 8ಕ್ಕೆ ಕಣ್ಣೂರಿನಿಂದ ವಾಪಸ್ ಹೊರಡಲಿವೆ.

ಹುಬ್ಬಳ್ಳಿ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣ-ಅಹಮದಾಬಾದ್ ನಿಲ್ದಾಣಗಳ ನಡುವೆ ಮಾರ್ಚ್ 24ರಂದು ರಾತ್ರಿ 7.30ಕ್ಕೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ. ಮಾರ್ಚ್ 25ರಂದು ರಾತ್ರಿ 9.25ಕ್ಕೆ ಅಹಮದಾಬಾದ್‌ನಿಂದ ವಾಪಸ್ ಹೊರಡಲಿದೆ.

ಕೆಎಸ್‌ಪಿಸಿಬಿ ಅಧ್ಯಕ್ಷರಾಗಿ ಶಾಂತ್ ಮುಂದುವರಿಕೆ

ನವದೆಹಲಿ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಅವರನ್ನು ಹುದ್ದೆಯಿಂದ ವಜಾಗೊಳಿಸಿದ್ದಕ್ಕೆ ಆದೇಶಕ್ಕೆ ತಡೆ ನೀಡಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ.

ಶಾಂತ್ ತಿಮ್ಮಯ್ಯ ಅವರನ್ನು ವಜಾಗೊಳಿಸಿ ಸರ್ಕಾರವು 2023ರ ಆಗಸ್ಟ್‌ನಲ್ಲಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಸರ್ಕಾರದ ಆದೇಶಕ್ಕೆ ದ್ವಿಸದಸ್ಯ ಪೀಠ ತಡೆ ನೀಡಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ, ‘ಹಿಂದಿನ ಸರ್ಕಾರದ ಅವಧಿಯಲ್ಲಿ ಶಾಂತ್ ಅವರನ್ನು ನೇಮಕ ಮಾಡಲಾಗಿತ್ತು. ಸರ್ಕಾರ ಬದಲಾಗಿದೆ ಎಂಬ ಕಾರಣಕ್ಕೆ ಹುದ್ದೆಯಿಂದ ವಜಾ ಮಾಡುವುದು ಸರಿಯಲ್ಲ. ಅವರ ಅಧಿಕಾರದ ಅವಧಿ ನವೆಂಬರ್‌ವರೆಗೆ ಇದೆ. ಅಲ್ಲಿಯವರೆಗೆ ಹುದ್ದೆಯಲ್ಲಿ ಮುಂದುವರಿಯಲಿ’ ಎಂದು ಅಭಿಪ್ರಾಯಪಟ್ಟು ಅರ್ಜಿ ವಜಾಗೊಳಿಸಿತು.

ಕರಕುಶಲ ವಸ್ತುಗಳ ಅನಾವರಣ

ಮಹಿಳಾ ಉದ್ಯಮಿಗಳಿಂದ ಭಾನುವಾರದವರೆಗೆ ಗೃಹ ಉತ್ಪನ್ನಗಳ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿಯೇ ತಯಾರಿಸಿದ ಸಿದ್ಧ ಆಹಾರ ಉತ್ಪನ್ನಗಳು, ವೈವಿಧ್ಯಮಯ ವಿನ್ಯಾಸದ ಕಸೂತಿ ಸೀರೆಗಳು, ಲೋಹದ ಹಾಗೂ ಮರದ ಕಲಾಕೃತಿಗಳು, ಬಗೆ ಬಗೆಯ ಕರಕುಶಲ ವಸ್ತುಗಳು...

ಇವು ಕಂಡುಬಂದದ್ದು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಹಮ್ಮಿಕೊಂಡಿರುವ ‘ಸ್ವಾವಲಂಬನ್ ಮೇಳ’ದಲ್ಲಿ. ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಸಿಡ್ಬಿ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಸ್ಥೆ (ಅವೇಕ್) ಜಂಟಿಯಾಗಿ ಹಮ್ಮಿಕೊಂಡಿದರುವ ಈ ಮೇಳಕ್ಕೆ ಶುಕ್ರವಾರ ಚಾಲನೆ ದೊರೆಯಿತು. ಈ ಮೇಳವು ಇದೇ 17ರವರೆಗೆ ಬೆಳಿಗ್ಗೆ 11ರಿಂದ ರಾತ್ರಿ 9 ಗಂಟೆಯವರೆಗೆ ನಡೆಯಲಿದೆ.

ಮೇಳದಲ್ಲಿ 75 ಮಳಿಗೆಗಳು ಇವೆ. ರಾಜ್ಯದ ಎಲ್ಲ ಜಿಲ್ಲೆಗಳ ಜತೆಗೆ ಹೊರರಾಜ್ಯದ ಮಳಿಗೆಗಳೂ ಇವೆ. ಕಲ್ಲಿನ ಹಾಗೂ ಹಿತ್ತಾಳೆ ಮೂರ್ತಿಗಳು, ಉಪ್ಪಿನ ಕಾಯಿ, ಸಂಡಿಗೆ, ಚಟ್ನಿಪುಡಿ,



ಮೇಳದ ಮಳಿಗೆಯೊಂದರಲ್ಲಿ ಆಭರಣಗಳನ್ನು ವೀಕ್ಷಿಸಿದ ಮಹಿಳೆಯರು – ಪ್ರಜಾವಾಣಿ ಚಿತ್ರ

ಹಪ್ಪಳ, ಜ್ಯೂಟ್ ಬ್ಯಾಗ್, ಸೌಂದರ್ಯ ಸಾಧನಗಳು, ಕುರ್ತಾಗಳು, ಸೀರೆಗಳು, ಮರದ ಕೆತ್ತನೆ ಹಾಗೂ ಕಲಾಕೃತಿಗಳು, ಪೇಂಟಿಂಗ್‌ಗಳು, ತೆಂಗಿನ ಎಣ್ಣೆ, ಆಟಿಕೆಗಳು ಸೇರಿ ವಿವಿಧ ಕರಕುಶಲ ವಸ್ತುಗಳನ್ನು ಮೇಳದಲ್ಲಿ ನೋಡಬಹುದಾಗಿದೆ. ಮತ್ತಿಕೆರೆಯ ಗೋಕುಲ ಉದ್ಯೋಗ ಎಂಬ ಸಂಸ್ಥೆಯು ಸಗಣಿ ಬಳಸಿ ವಿವಿಧ ಕಲಾಕೃತಿಗಳನ್ನು ತಯಾರಿಸಿದೆ. ಸಗಣಿಯನ್ನು ಒಣಗಿಸಿ, ಅದಕ್ಕೆ ಅಂಟು ಮಿಶ್ರಣ ಮಾಡಿ ಕೀ ಚೈನ್ ಹಾಗೂ ಕಲಾಕೃತಿಗಳನ್ನು ಸಿದ್ಧಪಡಿಸಿದೆ.

ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಸ್. ರಾಮನ್, ‘ಬೆಂಗಳೂರಿನಲ್ಲಿ ನವೋದ್ಯಮ ಸ್ಥಾಪನೆಗೆ ಉತ್ತಮ ವಾತಾವರಣವಿದೆ. ಜನರ ಬೇಕು ಬೇಡಗಳನ್ನು ತಿಳಿದು ಉದ್ಯಮ ಪ್ರಾರಂಭಿಸಬೇಕು’ ಎಂದು ತಿಳಿಸಿದರು.

ಅವೇಕ್ ಸಂಸ್ಥೆ ಅಧ್ಯಕ್ಷೆ ಆಶಾ ಎನ್. ಆರ್., ‘ಮಹಿಳೆಯರಲ್ಲಿ ಉದ್ಯಮಶೀಲತೆ ಅಭಿವೃದ್ಧಿಪಡಿಸಿ, ಸಶಕ್ತರನ್ನಾಗಿಸಲು ಸಂಸ್ಥೆ ಶ್ರಮಿಸುತ್ತಿದೆ. ಉದ್ಯಮ ಶೀಲತೆಯ ಬಗ್ಗೆ ಅರಿವು ಮೂಡಿಸಲು ಜಾಗೃತಿ ಶಿಬಿರ ನಡೆಸಲಾಗುತ್ತಿದೆ’ ಎಂದರು.

ಮಹಿಳೆಯರಿಗೆ ಸಾಲ ಸೌಲಭ್ಯ

ಮೇಳ ಉದ್ಘಾಟಿಸಿ ಮಾತನಾಡಿದ ಐಟಿ ಬಿಟಿ ಇಲಾಖೆ ಕಾರ್ಯದರ್ಶಿ ಏಕ್‌ರೂಪ್ ಕೌರ್, ‘ಮಹಿಳೆಯರಿಗೆ ಕುಟುಂಬ ನಿರ್ವಹಣೆ ಜವಾಬ್ದಾರಿ ಇರುವುದರಿಂದ ಎಲ್ಲರಿಗೂ ಕಚೇರಿಗಳಲ್ಲಿ ದಿನವಿಡೀ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಅಂತಹವರು ಬಿಡುವಿನ ಅವಧಿಯಲ್ಲಿ ಮನೆಯ ಮಟ್ಟದಲ್ಲಿಯೇ ಉದ್ಯಮ ಸ್ಥಾಪಿಸಿ, ಸ್ವಾವಲಂಬಿಯಾಗಬಹುದು. ಮಹಿಳಾ ಉದ್ಯಮಿಗಳಿಗೆ ಸರ್ಕಾರದಿಂದ ಶೇ 4ರ ಬಡ್ಡಿದರದಲ್ಲಿ ₹2 ಕೋಟಿವರೆಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ’ ಎಂದು ಹೇಳಿದರು.

ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿಯೇ ಶುಕ್ರವಾರ ಗರಿಷ್ಠ ತಾಪಮಾನ ಕಲಬುರಗಿ ಜಿಲ್ಲೆಯಲ್ಲಿ 39.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ರಾಜ್ಯದಾದ್ಯಂತ ಒಣಹವೆ ಮುಂದುವರಿದಿದೆ. ಹಲವು ಜಿಲ್ಲೆಗಳಲ್ಲಿ ತಾಪಮಾನ ಏರಿಕೆಯಾಗಿದೆ.

ಬಾಗಲಕೋಟೆ, ಧಾರವಾಡ, ಗದಗ, ಕಲಬುರಗಿ, ಕೊಪ್ಪಳ, ಬೆಂಗಳೂರು, ಹಾಸನ, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಎರಡು ದಿನ ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲ್ಯಾಣ ಕರ್ನಾಟಕ ಭಾಗದ ಕೆಲವು ಭಾಗದಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಗರಿಷ್ಠ 35, ಕನಿಷ್ಠ ಉಷ್ಣಾಂಶ 25 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಳಗಾವಿಗೆ ಇಡಾ ಮಾರ್ಟಿನ್ ಕಮಿಷನರ್

ಬೆಂಗಳೂರು: ಬೆಳಗಾವಿ ಪೊಲೀಸ್ ಕಮಿಷನರ್ ಆಗಿ ಇಡಾ ಮಾರ್ಟಿನ್ ಅವರನ್ನು ವರ್ಗಾವಣೆ ಮಾಡಲಾಗಿದೆ. ವರ್ಗಾವಣೆಯಾದವರು: ಉಮೇಶ್ ಕುಮಾರ್– ಎಡಿಜಿಪಿ, ಕೆಎಸ್‌ಆರ್‌ಪಿ. ಸೀಮಂತ್ ಕುಮಾರ್ ಸಿಂಗ್–ಎಡಿಜಿಪಿ, ಬಿಎಂಟಿಎಫ್, ಪಿ. ಹರಿಶೇಖರನ್– ಎಡಿಜಿಪಿ, ಅಪರಾಧಗಳು ಮತ್ತು ತಾಂತ್ರಿಕ ಸೇವೆಗಳು.

ಎಸ್‌ಯುಸಿಐ 19 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಗೆ 19 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ಕಮ್ಯುನಿಸ್ಟ್ ಪಕ್ಷವು (ಎಸ್‌ಯುಸಿಐ–ಸಿ) ಶುಕ್ರವಾರ ಬಿಡುಗಡೆ ಮಾಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ, ‘10 ವರ್ಷಗಳಿಂದ ದೇಶವನ್ನು ಆಳುತ್ತಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಸಾರ್ವಜನಿಕರ ಬದುಕನ್ನು ಮೂರಾಬಟ್ಟೆ ಮಾಡಿದೆ. ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರದಂತಹ ಸಮಸ್ಯೆಗಳ ಕುರಿತು ಮೌನವಾಗಿದೆ. ಜಾಗತಿಕ ಹಸಿವಿನ ಸೂಚ್ಯಂಕ, ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಭಾರತ ತೀರ ಕೆಳಸ್ಥಾನದಲ್ಲಿದೆ’ ಎಂದು ದೂರಿದರು.

‘ಕೋಮುವಾದಿ ಬಂಡವಾಳಶಾಹಿ ನೀತಿಗಳ ವಿರುದ್ಧ ಈ ಚುನಾವಣೆಯಲ್ಲಿ ಜನಪರ ಧ್ವನಿ ಮೊಳಗಬೇಕು. ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟದಿಂದ ನೈಜ ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ ಪರ್ಯಾಯ ನೀಡಲು ಖಂಡಿತ ಅಸಾಧ್ಯ. ಆದ್ದರಿಂದ ನಮ್ಮ ಪಕ್ಷವನ್ನು ಬೆಂಬಲಿಸುವಂತೆ’ ಮನವಿ ಮಾಡಿದರು.

ಅಭ್ಯರ್ಥಿಗಳ ಪಟ್ಟಿ: ಕೆ. ಹೇಮಾವತಿ (ಬೆಂಗಳೂರು ಗ್ರಾಮಾಂತರ), ಎಚ್.ಎಲ್. ನಿರ್ಮಲ (ಬೆಂಗಳೂರು ಉತ್ತರ), ಎಚ್.ಪಿ. ಶಿವಪ್ರಕಾಶ್ (ಬೆಂಗಳೂರು ಕೇಂದ್ರ) ಮತ್ತು ಷಣ್ಮುಗಂ (ಚಿಕ್ಕಬಳ್ಳಾಪುರ) ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

‘ರಾಜಕೀಯ ದಾಳವಾಗಿ ಚರಿತ್ರೆ ಬಳಕೆ’

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶುಕ್ರವಾರ ನಡೆದ ಕರ್ನಾಟಕ ಇತಿಹಾಸ ಪರಿಷತ್ತಿನ 34ನೇ ವಾರ್ಷಿಕ ಮಹಾ ಅಧಿವೇಶನದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕರಾದ ರಿಜ್ವಾನ್ ಅರ್ಷದ್, ಪುಟ್ಟಣ್ಣ ಅವರು ಚರ್ಚೆಯಲ್ಲಿ ತೊಡಗಿದ್ದರು. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಜಿ.ಜಗದೀಶ್, ಸಾಹಿತಿ ಬರಗೂರು ರಾಮಚಂದ್ರಪ್ಪ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಚರಿತ್ರೆಯನ್ನು ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಿರುವ ಅಪಾಯಕಾರಿ ಸನ್ನಿವೇಶ ನಿರ್ಮಾಣವಾಗಿದೆ. ಇದರಿಂದ ಸಮಾಜದಲ್ಲಿ ಬಿಕ್ಕಟ್ಟು ಎದುರಾಗಿದೆ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ, ಸರ್ಕಾರಿ ಕಲಾ ಕಾಲೇಜು, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್, ರಾಜ್ಯ ಪತ್ರಾಗಾರ ಇಲಾಖೆಯ ಆಶ್ರಯದಲ್ಲಿ ನಡೆದ ‘ಕರ್ನಾಟಕ ಇತಿಹಾಸ ಪರಿಷತ್ತಿನ 34ನೇ ವಾರ್ಷಿಕ ಮಹಾ ಅಧಿವೇಶನ’ದಲ್ಲಿ ಅವರು ಮಾತನಾಡಿದರು.

‘ಚರಿತ್ರೆಯು ಶೈಕ್ಷಣಿಕ ಚಹರೆ ಕಳೆದುಕೊಳ್ಳುತ್ತಿದೆಯೇ ಎನ್ನುವ ಆತಂಕ ಕಾಡಲಾರಂಭಿಸಿದೆ. ಸತ್ಯಾಂಶವಿರುವ ಇತಿಹಾಸವನ್ನು ಸಮಾಜಕ್ಕೆ ಇತಿಹಾಸಕಾರರು ತಿಳಿಸಬೇಕು. ಅಧ್ಯಯನಶೀಲ ರಾಜಕಾರಣಿಗಳೂ ನೈಜ ಇತಿಹಾಸವನ್ನೇ ಸಮಾಜದ ಎದುರು ಪ್ರಸ್ತುತಪಡಿಸಬೇಕು’ ಎಂದು ಕರೆ ನೀಡಿದರು.

‘ಸುಳ್ಳು ಸುದ್ದಿ ಹಾಗೂ ಇತಿಹಾಸ ತಿರುಚುವ ಕಾರಣಕ್ಕೆ ಸಮಾಜ ಬಿಕ್ಕಟ್ಟಿನಲ್ಲಿದೆ. ಆದ್ದರಿಂದ, ನೈಜ ಚರಿತ್ರೆಯನ್ನು ರಚಿಸುವ ಹಾಗೂ ಪ್ರತಿಪಾದಿಸುವ ದೊಡ್ಡ ಜವಾಬ್ದಾರಿ ಇತಿಹಾಸಕರರ ಮೇಲಿದೆ. ಆಪತ್ತಿನ ಸಂದರ್ಭದಲ್ಲಿ ಇತಿಹಾಸಕಾರರು ಹೆಚ್ಚು ಮಾತನಾಡಬೇಕು. ಚರಿತ್ರೆಯ ಚಾರಿತ್ರ್ಯ ಹರಣವಾಗದಂತೆ ಎಚ್ಚರಿಕೆ ವಹಿಸುವ ಜವಾಬ್ದಾರಿ ಎಲ್ಲರ ಮೇಲಿದೆ’ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ‘ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥಕ್ಕೆ ಬೇಕಾದಂತೆ ಇತಿಹಾಸವನ್ನು ತಿರುಚಿಕೊಳ್ಳುತ್ತಿವೆ. ತಂತ್ರಜ್ಞಾನವು ಕ್ಷಿಪ್ರವಾಗಿ ಬೆಳವಣಿಗೆ ಕಾಣುತ್ತಿದ್ದು, ಇತಿಹಾಸ ಬೇಕು ಎನ್ನುವ ಮನಸ್ಥಿತಿಯಲ್ಲಿ ಯಾರೂ ಇಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಭಾರತಕ್ಕೆ ಭವ್ಯವಾದ ಇತಿಹಾಸವಿದೆ. ಆದರೆ, ಪ್ರಚಾರ ಕಡಿಮೆ ಇದೆ. ಅದೇ ವಿದೇಶದಲ್ಲಿ ಕಡಿಮೆ ಸಂಖ್ಯೆಯ ಪಾರಂಪರಿಕ ತಾಣಗಳಿದ್ದರೂ ಅವುಗಳಿಗೆ ಹೆಚ್ಚಿನ ಪ್ರಚಾರ ದೊರೆಯುತ್ತಿದೆ’ ಎಂದು ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ‘ನಮ್ಮ ಸಂಸ್ಕೃತಿ, ದೇಶವನ್ನು ನಾವೇ ಹಾಳು ಮಾಡುತ್ತಿದ್ದೇವೆ. ಅಲ್ಲದೇ ಜಾತಿ, ಧರ್ಮದ ಹೆಸರಿನಲ್ಲಿ ಸಂಘರ್ಷ ನಡೆಸುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ’ ಎಂದು ಹೇಳಿದರು.

‘ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿಲ್ಲ, ಆತ ಸ್ವಾತಂತ್ರ್ಯ ಹೋರಾಟಗಾರ ಅಲ್ಲ ಎಂದು ಹೇಳಿಕೆ ನೀಡಲಾಗುತ್ತಿದೆ. ಆದರೆ, ವಾಸ್ತವದಲ್ಲಿ ಟಿಪ್ಪು ಹೋರಾಟ ನಡೆಸಿದ್ದಕ್ಕೆ ದಾಖಲೆಗಳಿವೆ. ಇತಿಹಾಸಕಾರರು ನೈಜ ವಿಷಯವನ್ನು ಸಮಾಜದ ಎದುರು ಪ್ರಸ್ತುತಪಡಿಸಬೇಕು’ ಎಂದು ಕರೆ ನಿಡಿದರು.

ಸಮ್ಮೇಳನದ ಸರ್ವಾಧ್ಯಕ್ಷ ಪ್ರೊ. ಅಶ್ವತ್ಥನಾರಾಯಣ, ಕಾಲೇಜಿನ ಪ್ರಾಂಶುಪಾಲ ಪ್ರೊ.ಪಿ.ಟಿ.ಶ್ರೀನಿವಾಸ ನಾಯಕ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಜಿ.ಜಗದೀಶ್ ಹಾಜರಿದ್ದರು.

‘ಜಿಲ್ಲೆಗೊಂದು ವಿ.ವಿ: ನಿರ್ವಹಣೆ ಕಷ್ಟ’


‘ಹಿಂದಿನ ಸರ್ಕಾರಗಳು ಪ್ರತಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ಸ್ಥಾಪಿಸಿದ್ದರಿಂದ ಸಾಕಷ್ಟು ಸಮಸ್ಯೆ ಎದುರಾಗಿದೆ. ಕೆಲವು ವಿ.ವಿಗಳಲ್ಲಿ ನಿವೃತ್ತಿ ವೇತನ ಕೊಡಲು ಆರ್ಥಿಕ ಸಮಸ್ಯೆ ಎದುರಾಗಿದೆ. ಆಸ್ಪತ್ರೆ, ರಸ್ತೆ, ಕಾಲೇಜು ಕೇಳಿದರೆ ಮಂಜೂರು ಮಾಡಬಹುದು. ಆದರೆ, ಜಿಲ್ಲೆಗೊಂದು ವಿಶ್ವವಿದ್ಯಾವಿದ್ಯಾಲಯ ಕೇಳಿದರೆ, ಅವುಗಳ ನಿರ್ವಹಣೆ ಕಷ್ಟವಾಗಲಿದೆ’ ಎಂದು ಸುಧಾಕರ್ ಹೇಳಿದರು.

ಆಳ್ವಾಸ್: ವಿದ್ಯಾರ್ಥಿ ವೇತನಕ್ಕೆ ಪ್ರವೇಶ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಈ ಬಾರಿ ಪಿಯುಸಿ ವಿದ್ಯಾರ್ಥಿಗಳಿಗೆ ಎರಡು ವರ್ಷಕ್ಕೆ ಒಟ್ಟಾರೆ ₹10 ಕೋಟಿಗೂ ಅಧಿಕ ಮೊತ್ತದ ಶೈಕ್ಷಣಿಕ ವಿದ್ಯಾರ್ಥಿ ವೇತನ ಘೋಷಿಸಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಆಳ್ವಾಸ್ ಪ್ರತಿಷ್ಠಾನವು ನಾಲ್ಕು ದಶಕಗಳಿಂದ ನಾಡಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ, ಕ್ರೀಡಾ ಹಾಗೂ ಸಾಂಸ್ಕೃತಿಕ ದತ್ತು ಸ್ವೀಕಾರ, ಪ್ರೋತ್ಸಾಹಧನ, ವಿವಿಧ ಶಿಷ್ಯವೇತನ ನೀಡುತ್ತ ಬಂದಿದೆ. ವರ್ಷಕ್ಕೆ ಸರಾಸರಿ 3,000 ವಿದ್ಯಾರ್ಥಿಗಳು ಈ ಸೌಲಭ್ಯ ಪಡೆಯುತ್ತಾರೆ. ಈ ಬಾರಿ ಘೋಷಿಸಿರುವ ಶೈಕ್ಷಣಿಕ ವಿದ್ಯಾರ್ಥಿ ವೇತನ ಪರೀಕ್ಷೆಯನ್ನು 10ನೇ ತರಗತಿ ಸಿಬಿಎಸ್‌ಇ (ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ), ಐಸಿಎಸ್‌ಇ (ಭಾರತೀಯ ಪ್ರೌಢಶಿಕ್ಷಣದ ಪ್ರಮಾಣ ಪತ್ರ) ಹಾಗೂ ರಾಜ್ಯ ಪಠ್ಯಕ್ರಮದ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಬರೆಯಬಹುದು ಎಂದರು.



ಮೋಹನ ಆಳ್ವ

ಗಣಿತ, ವಿಜ್ಞಾನ ಹಾಗೂ ಸಾಮಾನ್ಯ ಸಾಮರ್ಥ್ಯ ಕುರಿತ 100 ನಿಮಿಷಗಳ ಪರೀಕ್ಷೆಯು ಮಾರ್ಚ್ 31ರಂದು ಸಿಬಿಎಸ್‌ಇ ಮತ್ತು ಐಸಿಎಸ್‌ಇ ಹಾಗೂ ಏಪ್ರಿಲ್ 14ರಂದು ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಮೂಡುಬಿದಿರೆಯ ವಿದ್ಯಾಗಿರಿಯ ಆಳ್ವಾಸ್ ಕಾಲೇಜಿನಲ್ಲಿ ನಡೆಯಲಿದೆ. ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಶ್ನೆಪತ್ರಿಕೆ ಇರಲಿದೆ.

ಎಸ್ಸೆಸ್ಸೆಲ್ಸಿ ಅಂಕ ಪರಿಗಣಿಸಿ ವಿದ್ಯಾರ್ಥಿ ವೇತನಕ್ಕೆ ಆಯ್ಕೆ ಮಾಡಲಾಗುತ್ತದೆ. ಸಿಬಿಎಸ್‌ಇ ಮತ್ತು ಐಸಿಎಸ್‌ಇ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮಾರ್ಚ್ 28 ಮತ್ತು ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳು ಏಪ್ರಿಲ್ 10 ಕೊನೆಯ ದಿನವಾಗಿದೆ.

ವಿದ್ಯಾರ್ಥಿಗಳು https://scholarship.Alvas.org/ PUC/login.php ಈ ವೆಬ್‌ಸೈಟ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

ಆಳ್ವಾಸ್ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಇದ್ದರು.

ಮಾಹಿತಿಗೆ ಮೊ.8884477588, 63663 77827, 6366377823 ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ಸಂಗೀತ ಕಛೇರಿ, ‘ಎಸ್‌ವಿಎನ್ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ-2024: ಸಾಕ್ಸೋಫೋನ್ ವಾದನ: ಶ್ರೀಧರ್ ಸಾಗರ್, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ಪುತ್ತೂರು ನಿಕ್ಷಿತ್, ಖಂಜೀರಾ: ಕಾರ್ತಿಕ ಇನ್ನಂಜೆ, ಅತಿಥಿಗಳು: ಕೆ. ಜೈರಾಜ್, ಜಿ.ಆರ್. ಗೋಪಿನಾಥ್, ಪಿಟೀಲು: ಮೈಸೂರು ಮಂಜುನಾಥ್, ಸುಮಂತ್ ಮಂಜುನಾಥ್, ಮಾಳವಿ ಮಂಜುನಾಥ್, ಮೃದಂಗ: ಯಲ್ಲ ವೆಂಕಟೇಶ್ವರ ರಾವ್, ಖಂಜೀರಾ: ಗುರುಪ್ರಸನ್ನ, ಆಯೋಜನೆ: ರಾಮಸೇವಾ ಮಂಡಲಿ ಟ್ರಸ್ಟ್, ಸ್ಥಳ: ಎಸ್‌ವಿಎನ್ ಸ್ಮಾರಕ ಸಭಾಂಗಣ, ನೆಟ್ಟಿಗೆರೆ, ಕನಕಪುರ ರಸ್ತೆ, ಬೆಳಿಗ್ಗೆ 9.45

‘ಪರಸ್ಪರ ಸಂಬಂಧಗಳ ಮೂಲಕವೇ ಸಂತೋಷವಾಗಿ ಇರುವುದು ಹೇಗೆ?’ ಕುರಿತು ಉಪನ್ಯಾಸ, ಚಟುವಟಿಕೆಗಳು, ಸಂವಾದ: ಉಪಸ್ಥಿತಿ: ಶಾಂತಾ ನಾಗರಾಜ್, ಶೋಭಾ ಹೆಗಡೆ, ಮಾಲತಿ ಭಟ್, ಚಿತ್ರ ಸಿ., ಸುಧಾ ಶರ್ಮಾ ಚವತ್ತಿ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

‘ಶೀ ಆರ‍್ಸೆಸ್’ ಜಾಯಿನ್ ದ ಮೋಮೆಂಟಮ್: ಉದ್ಘಾಟನೆ: ಪ್ರಿಯಾಂಕ ಉಪೇಂದ್ರ, ಆಯೋಜನೆ: ಬಿ.ಪ್ಯಾಕ್, ಸ್ಥಳ: ರಂಗೋಲಿ ಮೆಟ್ರೊ ಆರ್ಟ್ ಸೆಂಟರ್, ಎಂ.ಜಿ. ರಸ್ತೆ, ಬೆಳಿಗ್ಗೆ 10.30



ಪ್ರಿಯಾಂಕ

ಆರ್. ಜಯಕುಮಾರ್ ಅವರ ‘ಕಾಡು ಹಾದಿಯ ಬೆಳಕಿನ ಜಾಡು’, ‘ಗಾಂಧಿ ಮರೆತ ನಾಡಿನಲ್ಲಿ’ ಪುಸ್ತಕಗಳ ಬಿಡುಗಡೆ: ಸತೀಶ್ ಜಾರಕಿಹೊಳಿ, ಹಂಸಲೇಖ, ಪುಸ್ತಕಗಳ ಕುರಿತು: ಪುರುಷೋತ್ತಮ ಬಿಳಿಮಲೆ, ಸಿದ್ದನಗೌಡ ಪಾಟೀಲ್, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ಬಿ.ಕೆ. ಶಿವರಾಂ, ಶಾಂತಲಾ ಧರ್ಮರಾಜ್, ಜಾಣಗೆರೆ ವೆಂಕಟರಾಮಯ್ಯ, ದಿನೇಶ್ ಅಮೀನ್‌ಮಟ್ಟು, ಬಂಜಗೆರೆ ಜಯಪ್ರಕಾಶ್, ಜಿ.ಎನ್. ನಾಗರಾಜ್, ರವೀಂದ್ರ ನಾಯಕ್, ಫಣಿರಾಜ್, ಬಾಬು ಪಿಲಾರ್, ಕೆ.ಶಾಂತಕುಮಾರಿ, ಮೋಹನ್ ಕೊಂಡಜ್ಜಿ, ಎಸ್.ಆರ್. ಆರಾಧ್ಯ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ಹಂಸಲೇಖ

‘ಎಲ್.ಎಸ್. ಶೇಷಗಿರಿರಾವ್ ಶತಮಾನದ ನೆನಪು’ ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ: ಉಪನ್ಯಾಸ: ಜಿ.ಎನ್. ನರಸಿಂಹಮೂರ್ತಿ, ಆಶಯ ನುಡಿ: ಬಾ.ಹ. ಉಪೇಂದ್ರ, ಉಪಸ್ಥಿತಿ: ಭಾರತಿ ಶೇಷಗಿರಿರಾವ್, ಅಧ್ಯಕ್ಷತೆ: ವ.ಚ.ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಚಾಲಕರ ಸಮಾವೇಶ, ಅಭಿನಂದನಾ ಸಮಾರಂಭ: ಅತಿಥಿಗಳು: ರಾಮಲಿಂಗಾರೆಡ್ಡಿ, ಎನ್.ವಿ. ಪ್ರಸಾದ್, ಎ.ಎಂ. ಯೋಗೀಶ್, ಉಮಾಶಂಕರ್, ಮಲ್ಲಿಕಾರ್ಜುನ, ಜ್ಞಾನೇಂದ್ರ ಕುಮಾರ್, ಸ್ಥಳ: ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ, ಸ್ಥಳ: ಪುರಭವನ ಜೆ.ಸಿ. ರಸ್ತೆ, ಬೆಳಿಗ್ಗೆ 11

ರಾಘವೇಂದ್ರ ಸ್ವಾಮಿ ಮೃತ್ತಿಕಾ ಬೃಂದಾವನಕ್ಕೆ ಲಕ್ಷ ಪುಷ್ಪಾರ್ಚನೆ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, 5ನೇ ಬಡಾವಣೆ, ಬೆಳಿಗ್ಗೆ 11



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಛಾಯಾಚಿತ್ರಗಳ ಪ್ರದರ್ಶನ: ಅತಿಥಿಗಳು: ಸಿ.ಆರ್. ಸತ್ಯನಾರಾಯಣ, ಆರ್. ಮಣಿವಣ್ಣನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಮಧ್ಯಾಹ್ನ 12

ಸೌಮ್ಯಕಾಶಿ ಅವರ ‘ಅವಳ ಹೆಜ್ಜೆಗುರುತು’ ಪುಸ್ತಕ ಬಿಡುಗಡೆ: ಆಯೋಜನೆ: ಹರಿವು ಬುಕ್ಸ್, ಸ್ಥಳ: ನಾಣಿ ಅಂಗಳ, ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಫೌಂಡೇಷನ್, ಸಂಜೆ 4.30

‘ಫಾದರ್ ಚಸರಾ ಕನ್ನಡ ಸಂಸ್ಕೃತಿ ದತ್ತಿ ಪ್ರಶಸ್ತಿ’ ಪ್ರದಾನ: ಜೆಸ್ಸಿ ಮರ್ಲಿನ್, ಪ್ರಶಸ್ತಿ ಪುರಸ್ಕೃತರು: ಜಿ.ಎಸ್. ಸಿದ್ಧಲಿಂಗಯ್ಯ, ಪ್ರವೀಣ್ ದತ್ ಸ್ಟೀಫನ್, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿ: ಸಿ.ಜಿ. ಲಕ್ಷ್ಮೀಪತಿ, ಉಪಸ್ಥಿತಿ: ರಫಾಯಲ್ ರಾಜ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 5

ಗೆಜ್ಜಗಾರಗುಪ್ಪೆ ಕೆ. ಉಮೇಶ್ ಅವರ ‘ಭಾವಾಂತರ’ ಪುಸ್ತಕ ಬಿಡುಗಡೆ: ಕರೀಗೌಡ ಬೀಚನಹಳ್ಳಿ, ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಪುಸ್ತಕದ ಕುರಿತು: ಬ್ಯಾಡರಹಳ್ಳಿ ಶಿವರಾಜ್, ಅತಿಥಿ: ಶಶಿಕಾಂತ ರಾವ್, ಆಯೋಜನೆ: ಪ್ರೀತಮ್ ಪಟೇಲ್ ಪ್ರಕಾಶನ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

‘ಕಿಸಾನ್ ಸತ್ಯಾಗ್ರಹ’ ಸಾಕ್ಷ್ಯಚಿತ್ರ ಪ್ರದರ್ಶನ: ಭಾಗವಹಿಸುವವರು: ಕೆ. ಮರುಳಸಿದ್ದಪ್ಪ, ರವಿವರ್ಮಕುಮಾರ್, ಪುರುಷೋತ್ತಮ ಬಿಳಿಮಲೆ, ಕೆ.ಟಿ. ಗಂಗಾಧರ್, ತೀಸ್ತಾ ಸೆಟಲ್ವಾಡ್, ಗಿರೀಶ್ ಕಾಸರವಳ್ಳಿ, ಬಂಜಗೆರೆ ಜಯಪ್ರಕಾಶ್, ಸಿದ್ದನಗೌಡ ಪಾಟೀಲ್, ಶ್ರೀನಿವಾಸ್ ಜಿ. ಕಪ್ಪಣ್ಣ, ಸಿ.ಎಸ್. ದ್ವಾರಕಾನಾಥ್, ಶಿವಸುಂದರ್, ಚುಕ್ಕಿ ನಂಜುಂಡಸ್ವಾಮಿ, ಮೀನಾಕ್ಷಿ ಸುಂದರಂ, ಹಿ.ಶಿ. ರಾಮಚಂದ್ರಗೌಡ, ಬಿ.ಟಿ. ವೆಂಕಟೇಶ್, ಮಾವಳ್ಳಿ ಶಂಕರ್, ಗುಂಡಣ್ಣ ಚಿಕ್ಕಮಗಳೂರು, ಎ. ನಾರಾಯಣ, ಆಯೋಜನೆ: ಕೇಸರಿ ಹರವು, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ, ಸಿಐಟಿಯು, ಎದ್ದೇಳು ಕರ್ನಾಟಕ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಪಾರ್ಕ್ ಸಂಜೆ 6



ಮರುಳಸಿದ್ದಪ್ಪ

ವಜ್ರ ಮಹೋತ್ಸವ: ಸಂಗೀತ ಕಛೇರಿ: ಪಿಟೀಲು: ಎಸ್. ಶೇಷಗಿರಿರಾವ್, ಅನಿರುದ್ಧ ಭಾರದ್ವಾಜ್, ಮೃದಂಗ: ಟಿ.ಎಸ್. ಚಂದ್ರಶೇಖರ್, ಘಟ: ಬಿ.ಎಸ್. ರಘುನಂದನ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ರಂಗೋತ್ಸವ-2024: ಅತಿಥಿಗಳು: ದೊಮಿನಿಕ್, ನಾಗಭೂಷಣ್ ಎಲ್.ಎನ್., ಅಂಕಲ್ ಶ್ಯಾಮ್, ‘ಮೇಘದೂತ ದರ್ಶನ’ ನಾಟಕ ಪ್ರದರ್ಶನ: ನಿರ್ದೇಶನ: ಮಾಲತೇಶ ಬಡಿಗೇರ, ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಹರಿದಾಸ ವೈಭವ: ಗಾಯನ: ಸುಷ್ಮಾ ಶ್ರೇಯಸ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಶೇಷಾದ್ರಿಪುರ, ಸಂಜೆ 6.30

ಹರಿದಾಸ ವಾಣಿ: ಗಾಯನ: ಪ್ರಣೀತ ಟಿ. ಮಣೂರ್, ಪಿಟೀಲು: ಎಂ.ಎಸ್. ಸತ್ಯನಾರಾಯಣ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 7

‘ಮಲ್ಲಿಗೆ ತೋಟದಲ್ಲಿ ಮರ್ಡರ್’ ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7.30

ಪಂಡಿತ್ ಕುಮಾರ್ ಗಂಧರ್ವ ಜನ್ಮ ಶತಮಾನೋತ್ಸವ

ಬೆಂಗಳೂರು ಕಲಾ ಮಹೋತ್ಸವ 22ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಮ್ ಸಂಸ್ಥೆಯು ಪಂಡಿತ್ ಕುಮಾರ್ ಗಂಧರ್ವ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಇದೇ 22ರಿಂದ 31ರವರೆಗೆ 16ನೇ ಆವೃತ್ತಿಯ ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ ಹಮ್ಮಿಕೊಂಡಿದೆ.

ವೀಣಾ ವಾದಕಿ ಸುಮಾ ಸುಧೀಂದ್ರ ಹಾಗೂ ನೃತ್ಯ ಕಲಾವಿದೆ ವೀಣಾ ಮೂರ್ತಿ ವಿಜಯ್ ಅವರು ಈ ಮಹೋತ್ಸವದ ನಿರ್ದೇಶಕರಾಗಿದ್ದಾರೆ. 20ರಿಂದ 24ರವರೆಗೆ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಸಭಾಂಗಣ ಹಾಗೂ 30ರಂದು ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಮಹೋತ್ಸವದ ಕಾರ್ಯಕ್ರಮಗಳು ನಡೆಯಲಿವೆ.

22ರಂದು ಸಂಜೆ 6 ಗಂಟೆಗೆ ಕಲಾ ಮಹೋತ್ಸವ ಉದ್ಘಾಟನೆಯಾಗಲಿದೆ. 6.30ರಿಂದ ಕೊಳಲು ವಾದಕ ರೋಣು ಮುಜುಮ್ದಾರ್, ವೀಣಾ ವಾದಕಿ ಸುಮಾ ಸುಧೀಂದ್ರ, ತಬಲಾ ವಾದಕ ರಾಜೇಂದ್ರ ನಾಕೋಡ್, ಘಟ ವಾದಕ ಎಸ್.ಎನ್. ನಾರಾಯಣಮೂರ್ತಿ ಹಾಗೂ ಮೃದಂಗ ವಾದಕ ಬಿ.ಸಿ. ಮಂಜುನಾಥ್ ಅವರಿಂದ ಜುಗಲ್ ಬಂದಿ ನಡೆಯಲಿದೆ.



ಸುಮಾ ಸುಧೀಂದ್ರ



ವೆಂಕಟೇಶ್ ಕುಮಾರ್



ಸಂಗೀತಾ ಕಟ್ಟಿ

ಸಂಜೆ 7.45ರಿಂದ ಅಭಿಷೇಕ್ ರಘುರಾಮ್, ಎಚ್.ಎಂ. ಸ್ಮಿತಾ, ಅರ್ಜುನ್ ಕುಮಾರ್ ಹಾಗೂ ಜಿ. ಗುರುಪ್ರಸನ್ನ ಅವರಿಂದ ಕರ್ನಾಟಕ ಸಂಗೀತ ಕಛೇರಿ ನಡೆಯಲಿದೆ. 23ರಂದು ಸಂಜೆ 6 ಗಂಟೆಗೆ ನವದೆಹಲಿಯ ರಮಾ ವೈದ್ಯನಾಥನ್ ಮತ್ತು ತಂಡದಿಂದ ‘ಪ್ರತಿಬೋಧನಾ’ ಶೀರ್ಷಿಕೆಯಡಿ ನೃತ್ಯ ಪ್ರದರ್ಶನ ನಡೆಯಲಿದೆ. 7.15ರಿಂದ ‘ಸಿಲಪ್ಪದಿಕಾರಂ’ ನೃತ್ಯ ರೂಪಕ ಪ್ರದರ್ಶನ ಕಾಣಲಿದೆ.

24ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ವಿಧುಲಾ ವೇಣುಗೋಪಾಲ್ ಮತ್ತು ತಂಡದಿಂದ ಹಿಂದೂಸ್ತಾನಿ ಸಂಗೀತ ಕಛೇರಿ, ನಾಗರಾಜ್ ರಾವ್ ಹವಾಲ್ದಾರ್ ಮತ್ತು ತಂಡದಿಂದ ‘ಹಿಂದೂಸ್ತಾನಿ ಸಂಗೀತಕ್ಕೆ ಪಂಡಿತ್ ಕುಮಾರ್ ಗಂಧರ್ವ ಅವರ ಕೊಡುಗೆ’ ವಿಷಯದ ಬಗ್ಗೆ ಉಪನ್ಯಾಸ ಹಾಗೂ ಸಂಗೀತಾ ಕಟ್ಟಿ ಮತ್ತು ತಂಡದಿಂದ ಹಿಂದೂಸ್ತಾನಿ ಸಂಗೀತ ಕಛೇರಿ ನಡೆಯಲಿದೆ. ಸಂಜೆ 6ರಿಂದ ಸತ್ಯಜಿತ್ ಸಂಜು ಅವರಿಂದ ಹಾರ್ಮೋನಿಯಂ ವಾದನ, ಚಂದನ ಬಾಲ ಕಲ್ಯಾಣ್ ಅವರಿಂದ ಭಕ್ತಿ ಸಂಗೀತ ಹಾಗೂ ಆದರ್ಶ ಶೆಣೈ ಅವರಿಂದ ತಬಲಾ ವಾದನ ನಡೆಯಲಿದೆ. ಸಂಜೆ 7 ಗಂಟೆಗೆ ವೆಂಕಟೇಶ್ ಕುಮಾರ್ ಮತ್ತು ತಂಡದಿಂದ ಹಿಂದೂಸ್ತಾನಿ ಸಂಗೀತ ಕಛೇರಿ ನಡೆಯಲಿದೆ.

ಮಾ.30ರಂದು ಸಂಜೆ 6.30ಕ್ಕೆ ಗಾಯಕ ಭುವನೇಶ್ ಕೊಮ್ಕಲಿ, ತಬಲಾ ವಾದಕ ಕೇಶವ್ ಜೋಶಿ ಹಾಗೂ ಹಾರ್ಮೋನಿಯಂ ವಾದಕ ವ್ಯಾಸಮೂರ್ತಿ ಕಟ್ಟಿ ಅವರಿಂದ ಹಿಂದೂಸ್ತಾನಿ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ.

ಸಂಗೀತ-ನೃತ್ಯ ಕಾರ್ಯಕ್ರಮಗಳ ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ದೊರೆಯಲಿವೆ. ವಿವರಕ್ಕೆ 8050209838ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗಿಡನೆಡುವ ಕಾರ್ಯಕ್ರಮ

ಅಂತರರಾಷ್ಟ್ರೀಯ ಕಲಾ ಮಹೋತ್ಸವದ ಕೊನೆಯದಿನವಾದ ಮಾ.31ರಂದು ಬೆಳಿಗ್ಗೆ 10.30ಕ್ಕೆ ‘ಗ್ರೀನ್‌ಪಾತ್‘ ಸಂಸ್ಥೆ, ನೆಲಮಂಗಲದ ಸಮೀಪದ ಮರಸರಹಳ್ಳಿಯಲ್ಲಿರುವ ತನ್ನ ’ಸುಕೃಷಿ ಸಾವಯವ ತೋಟ’ದಲ್ಲಿ ಕಾಲೇಜು ವಿದ್ಯಾರ್ಥಿಗಳೊಂದಿಗೆ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

‘ಹೃದಯಾಘಾತ ಚಿಕಿತ್ಸೆಗೆ ಹೃದಯಜ್ಯೋತಿ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಹೃದಯಾಘಾತವಾದಾಗ ತುರ್ತಾಗಿ ಚಿಕಿತ್ಸೆ ನೀಡಲು ‘ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಹೃದಯಜ್ಯೋತಿ ಯೋಜನೆ’ ಜಾರಿಗೊಳಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆ ವತಿಯಿಂದ ಶುಕ್ರವಾರ ಇಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಹೃದಯಜ್ಯೋತಿ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಹೃದಯಾಘಾತವಾದಾಗ ಸುವರ್ಣ ಅವಧಿಯಲ್ಲಿ (ಗೋಲ್ಡನ್ ಹವರ್) ಚಿಕಿತ್ಸೆ ನೀಡಿ ಜೀವ ಉಳಿಸುವುದು ಯೋಜನೆಯ ಉದ್ದೇಶ’ ಎಂದು ಹೇಳಿದರು.

‘ಸಮುದಾಯ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಇಸಿಜಿ ಮಾಡಿ ತಕ್ಷಣವೇ ಕೃತಕ ಬುದ್ಧಿಮತ್ತೆ (ಎಐ) ಮುಖಾಂತರ ಆಘಾತದ ತೀವ್ರತೆ ಪತ್ತೆ ಮಾಡಲು ಫೋನ್, ಕಿಟ್‌ಗಳ ವ್ಯವಸ್ಥೆ ಮಾಡಲಾಗಿದೆ. ಇಸಿಜಿ (ಎಲೆಕ್ಟ್ರೊ ಕಾರ್ಡಿಯೊ ಗ್ರಾಫ್) ಯಂತ್ರಕ್ಕೆ ಲಿಂಕ್ ಆದ ಫೋನ್ ಮೂಲಕ ತಂತ್ರಾಂಶ ಬಳಸಿ ಬೆಂಗಳೂರಿನ ಟ್ರೈಕಾಕ್ಸ್ ಸ್ಪೆಷಾಲಿಟಿ ಸಂಸ್ಥೆ ಸಂಪರ್ಕಿಸಿ ಕೃತಕ ಬುದ್ಧಿಮತ್ತೆ (ಎಐ) ಮೂಲಕ ಆಘಾತದ ಪ್ರಮಾಣ ಅರಿಯಬಹುದು. ಇದಕ್ಕೆ ಆರು ನಿಮಿಷ ಬೇಕು’ ಎಂದರು.

‘ಇಸಿಜಿಯಲ್ಲಿ ತೀವ್ರ ಆಘಾತದ ಲಕ್ಷಣ ಕಂಡುಬಂದರೆ ‘ಟೆನೆಕ್ಟ್‌ಪಾಲ್ಸ್’ ಚುಚ್ಚುಮದ್ದು ನೀಡುತ್ತಾರೆ. ₹28 ಸಾವಿರ ಮೌಲ್ಯದ ಈ ಚುಚ್ಚುಮದ್ದನ್ನು ಆಸ್ಪತ್ರೆಗಳಿಗೆ ಉಚಿತವಾಗಿ ಪೂರೈಸಲಾಗುತ್ತದೆ. ಈ ಚುಚ್ಚುಮದ್ದು ಹೃದಯದಲ್ಲಿ ‘ಬ್ಲಾಕ್’ ಆಗದಂತೆ ತಡೆಯುತ್ತದೆ. ನಂತರ ರೋಗಿಗಳು ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಚಿಕಿತ್ಸೆ ಪಡೆಯಬಹುದು’ ಎಂದರು.

‘ರಾಜ್ಯದ 15 ಜಿಲ್ಲೆಗಳ 71 ತಾಲ್ಲೂಕು ಆಸ್ಪತ್ರೆಗಳಿಗೆ ಈ ಯೋಜನೆ ಲಿಂಕ್ ಮಾಡಲಾಗಿದೆ. ಈ ಮೊದಲು ಯೋಜನೆಯನ್ನು ಮೂರು ಕಡೆ ಪರಿಚಯಿಸಿದ್ದೆವು. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲ ತಾಲ್ಲೂಕು ಆಸ್ಪತ್ರೆಗಳಿಗೂ ಈ ಯೋಜನೆ ವಿಸ್ತರಿಸಲಾಗುವುದು’ ಎಂದು ತಿಳಿಸಿದರು.

‘ಚಿಕ್ಕ ವಯಸ್ಸಿನಲ್ಲೇ ಹೃದಯಾಘಾತ ಆಗುವುದು ಕಂಡುಬರುತ್ತಿದೆ. ಹೃದಯಾಘಾತವಾದಾಗ ತುರ್ತು ಚಿಕಿತ್ಸೆ ಎಲ್ಲರಿಗೂ ಸಿಗಬೇಕು ಎಂಬುದು ನಮ್ಮ ಉದ್ದೇಶ. ಪುನೀತ್ ರಾಜಕುಮಾರ್ ನಮಗೆ ಪ್ರೇರಣಾಶಕ್ತಿ. ಅವರು ಹೃದಯಾಘಾತಕ್ಕೆ ತುತ್ತಾದರು. ಅವರು ನಟ ಮಾತ್ರವಲ್ಲ ಮನುಷ್ಯತ್ವಕ್ಕೆ ಹೆಸರಾದವರು. ಯೋಜನೆಯನ್ನು ಅರ್ಥಪೂರ್ಣವಾಗಿಸಲು ಅವರ ಹೆಸರು ಇರಿಸಲಾಗಿದೆ. ಭಾರತದಲ್ಲೇ ಇದು ವಿನೂತನ ಯೋಜನೆ’ ಎಂದು ಹೇಳಿದರು.

‘ಜನದಟ್ಟಣೆಯ ಸಾರ್ವಜನಿಕ ಸ್ಥಳಗಳಲ್ಲಿ ಸ್ವಯಂ ಚಾಲಿತ ಡಿಫಿಬ್ರಿಲೇಟರ್ (ಎಇಡಿ) ಸಾಧನಗಳನ್ನು ಅಳವಡಿಸಲು ಸಿದ್ಧತೆ ನಡೆದಿದೆ. ಹೃದಯಸ್ತಂಭನ ಆದಾಗ ಶಾಖ ನೀಡಿ ಹೃದಯ ಮತ್ತೆ ಕೆಲಸ ನಿರ್ವಹಿಸುವಂತೆ ಮಾಡಲು ಬಳಸುವ ಸಾಧನ ಇದು’ ಎಂದು ಅವರು ಹೇಳಿದರು.



ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಹೃದಯಜ್ಯೋತಿ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಯೋಜನೆ ಕಿಟ್ ಬಿಡುಗಡೆಗೊಳಿಸಿದರು. ಶಾಸಕ ಎನ್‌.ಎಚ್‌.ಕೋನರಡ್ಡಿ, ಸಚಿವ ಸಂತೋಷ ಎಸ್‌.ಲಾಡ್, ಜಿಲ್ಲಾಧಿಕಾರಿ ದಿವ್ಯಪ್ರಭು ಜಿಆರ್‌ಜೆ ಪಾಲ್ಗೊಂಡಿದ್ದರು

ಭಾನುವಾರವೂ ತೆರೆದಿರಲಿವೆ ಉಪ ನೋಂದಣಿ ಕಚೇರಿಗಳು

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ತಲಾ ಒಂದು ಉಪ ನೋಂದಣಿ ಕಚೇರಿ ಭಾನುವಾರವೂ ಕಾರ್ಯನಿರ್ವಹಿಸಲಿದೆ. ರಜೆ ದಿನಗಳಲ್ಲೂ ನೋಂದಣಿಗೆ ಅವಕಾಶ ಕಲ್ಪಿಸುವ ಈ ವ್ಯವಸ್ಥೆಯನ್ನು ರಾಜ್ಯದಾದ್ಯಂತ ವಿಸ್ತರಿಸಿ ಕಂದಾಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ ಈ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಈಗ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.ಭಾನುವಾರ ತೆರೆದಿರಲಿರುವ ಉಪ ನೋಂದಣಿ ಕಚೇರಿಗಳನ್ನು ಸರದಿಯ ಆಧಾರದಲ್ಲಿ ಗುರುತಿಸಿ, ಮಾಹಿತಿಯನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

‘ಡಯಾಲಿಸಿಸ್: 800 ಹೊಸ ಯಂತ್ರ’

ಹಾವೇರಿ: ‘ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ 800 ಹೊಸ ಡಯಾಲಿಸಿಸ್ ಯಂತ್ರಗಳನ್ನು ಕೊಡುತ್ತಿದ್ದೇವೆ. ಏಕ ಬಳಕೆಯ ಯಂತ್ರಗಳಾದ ಕಾರಣ ನಿರ್ವಹಣೆ ಸುಲಭ. ಸೋಂಕು ತಡೆಗಟ್ಟಲು ಸಾಧ್ಯವಾಗುತ್ತದೆ. ಬೆಳಗಾವಿ ವಿಭಾಗದ 58 ತಾಲ್ಲೂಕು ಆಸ್ಪತ್ರೆಗಳು ಮತ್ತು 7 ಜಿಲ್ಲಾ ಆಸ್ಪತ್ರೆಗಳಿಗೆ ಹೊಸ ಏಜೆನ್ಸಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಇಲ್ಲಿಯ ಜಿಲ್ಲಾಸ್ಪತ್ರೆಯಲ್ಲಿ ನವೀಕೃತ ಡಯಾಲಿಸಿಸ್ ಘಟಕವನ್ನು ಶುಕ್ರವಾರ ಉದ್ಘಾಟಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹಾವೇರಿ ಸೇರಿ ರಾಜ್ಯದಲ್ಲಿ ಬಾಕಿ ಉಳಿದ 15 ಜಿಲ್ಲಾಸ್ಪತ್ರೆಗಳಿಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರವನ್ನು ನೀಡಿ, ಜನರಿಗೆ ಉಚಿತವಾಗಿ ಸೇವೆ ನೀಡಲು ಕ್ರಮ ಕೈಗೊಳ್ಳುತ್ತೇವೆ’ ಎಂದರು.

‘ಬಿಜೆಪಿ ಸರ್ಕಾರ ಜೀವರಕ್ಷಕ ಔಷಧಗಳ ವಿತರಣೆಯ ವ್ಯವಸ್ಥೆ ಹಾಳು ಮಾಡಿತ್ತು. ಅದನ್ನು ಸರಿಪಡಿಸುವ ಕೆಲಸ ನಮ್ಮ ಸರ್ಕಾರ ಮಾಡುತ್ತಿದೆ. ಈಗಾಗಲೇ ಬಹಳ ಸುಧಾರಣೆಯಾಗಿದೆ. ಮೇ ತಿಂಗಳ ಒಳಗೆ ಸರ್ಕಾರಿ ಆಸ್ಪತ್ರೆಗಳಿಗೆ ಎಲ್ಲ ಔಷಧಗಳನ್ನು ಪೂರೈಸಲು ಕ್ರಮ ಕೈಗೊಂಡು, ಜನರಿಗೆ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ’ ಎಂದರು.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ನಡೆದ ಸಂವಾದದಲ್ಲಿ ಪರಕಾಲ ಪ್ರಭಾಕರ್

‘ಧರ್ಮದ ಸಂಕೋಲೆಯನ್ನು ಕಳಚಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಜಾತಿ, ಧರ್ಮದ ಸಂಕೋಲೆ ಕಳಚಿ, ವೈಚಾರಿಕ ವಿಷಯಗಳತ್ತ ಗಮನಹರಿಸಬೇಕು. ಎಲ್ಲ ಪ್ರಜೆಗಳನ್ನೂ ಸಮಾನವಾಗಿ ಕಾಣುವ ರಾಜಕೀಯ ಪ್ರಬುದ್ಧತೆ ಬೆಳೆಸಿಕೊಳ್ಳಬೇಕು ಎಂದು ರಾಜಕೀಯ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಹೇಳಿದರು.

ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಶುಕ್ರವಾರ ‘ಭವಿಷ್ಯವನ್ನು ಸಶಕ್ತಗೊಳಿಸುವುದು: ಯುವಕರು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುವಂತೆ ಪ್ರೋತ್ಸಾಹಿಸುವ’ ಕುರಿತು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯುವ ಸಮೂಹ ಸಾಮಾಜಿಕ ಜಾಲತಾಣಗಳಲ್ಲೇ ಸಮಯ ವ್ಯರ್ಥ ಮಾಡುತ್ತಿದೆ. ಸಂದೇಶಗಳನ್ನು ಹರಿಬಿಟ್ಟ ತಕ್ಷಣ ಲಕ್ಷಾಂತರ ಜನರಿಗೆ ತಲುಪುತ್ತದೆ ಎಂಬ ಭ್ರಮೆ ಬಹುತೇಕರಲ್ಲಿದೆ. ವ್ಯಕ್ತಿ–ವ್ಯಕ್ತಿಗಳ ಮಧ್ಯೆ, ಸಮುದಾಯಗಳ ಮಧ್ಯೆ ಬೆರೆತು ಕಲಿಯುವ, ಮುಖಾಮುಖಿ ತಲುಪಿಸುವ ಕೆಲಸಗಳು ಆಗಬೇಕಿದೆ. ಅದಕ್ಕಾಗಿ ಮಾನವೀಯ ಸಂಬಂಧಗಳನ್ನು ಬೆಸೆಯಬೇಕಿದೆ ಎಂದರು.

‘ಯುವ ಜನರು ಪ್ರಬುದ್ಧರಾಗಬೇಕು. ಆಡಳಿತ, ರಾಜಕೀಯ ವಿಚಾರಗಳನ್ನು ವಿಮರ್ಶೆ ಮಾಡಬೇಕು. ನಮ್ಮಿಂದ ಆಯ್ಕೆಯಾದ ಸರ್ಕಾರ ನಮಗಾಗಿ ಇದೆಯೇ ಹೊರತು, ನಾವು ಸರ್ಕಾರಕ್ಕಾಗಿ ಅಲ್ಲ ಎನ್ನುವ ಸತ್ಯ ಅರ್ಥ ಮಾಡಿಕೊಂಡು ನಡೆಯಬೇಕು. ತಪ್ಪುಗಳನ್ನು ಖಂಡಿಸಬೇಕು. ಉತ್ತಮ ಕಾರ್ಯಗಳನ್ನು ಬೆಂಬಲಿಸಬೇಕು’ ಎಂದು ಹೇಳಿದರು.

ಒಮ್ಮೆ ಮತದಾನ ಮಾಡಿ, ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮುಂದಿನ ಐದು ವರ್ಷಗಳವರೆಗೆ ಮನೆಯಲ್ಲೇ ಕುಳಿತುಕೊಳ್ಳುವ ಜನರ ಸಂಖ್ಯೆ ಹೆಚ್ಚಾಗಿದೆ. ಇಂತಹ ಮನೋಭಾವ ತೊರೆಯಬೇಕು. ರಾಜಕೀಯ ವಿಚಾರ, ಚರ್ಚೆಗಳಲ್ಲಿ ಭಾಗವಹಿಸಬೇಕು ಎಂದರು.

ಸರ್ಕಾರಗಳು ಜನರನ್ನು ಹೇಗೆ ದಾರಿ ತಪ್ಪಿಸುತ್ತವೆ. ಅದಕ್ಕೆ ಜನರು ಹೇಗೆ ಹೊಂದಿಕೊಂಡಿದ್ದಾರೆ ಎನ್ನುವುದಕ್ಕೆ ಕೆಲ ಉದ್ಘಾಟನಾ ಕಾರ್ಯಕ್ರಮಗಳು ಅತ್ಯುತ್ತಮ ಉದಾಹರಣೆ. ಮಾಧ್ಯಮಗಳೂ ಉದ್ಘಾಟನೆಗೆ ಭಾರಿ ಪ್ರಚಾರ ನೀಡುತ್ತವೆ. ಆದರೆ, ಯಾರೂ ಆ ಕಾಮಗಾರಿಗಳ ಗುಣಮಟ್ಟ ಕುರಿತು ಚರ್ಚಿಸುವುದೇ ಇಲ್ಲ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಕಣ್ಣನ್ ಗೋಪಿನಾಥನ್, ಆಮ್ನೆಸ್ಟಿ ಇಂಟರ್‌ನ್ಯಾಷನಲ್ ವಕ್ತಾರ ಆಕಾರ್ ಪಟೇಲ್, ಸಂಶೋಧನಾ ವಿದ್ಯಾರ್ಥಿ ಇಳಾ ಅನನ್ಯಾ ಉಪಸ್ಥಿತರಿದ್ದರು.



ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪರಕಾಲ ಪ್ರಭಾಕರ್ ಮಾತನಾಡಿದರು. ಕಣ್ಣನ್ ಗೋಪಿನಾಥನ್, ಆಕಾರ್ ಪಟೇಲ್, ಇಳಾ ಅನನ್ಯಾ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಕೆಕೆಆರ್‌ಟಿಸಿ ಅಧ್ಯಕ್ಷ ಸ್ಥಾನ ನಿರಾಕರಣೆ

ಕಲಬುರಗಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಹುದ್ದೆಯನ್ನು ಅಫಜಲಪುರ ಶಾಸಕ ಎಂ.ವೈ. ಪಾಟೀಲ ಅವರು ತಿರಸ್ಕರಿಸಿದ್ದು, ತಮ್ಮ ಬದಲು ಯುವಕರಿಗೆ ನೀಡಬೇಕು ಎಂದು ತಿಳಿಸಿದ್ದಾರೆ.

ಸಾರಿಗೆ ಇಲಾಖೆ ಶುಕ್ರವಾರವಷ್ಟೇ ಪಾಟೀಲ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿತ್ತು. ನೇಮಕ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಎಂ.ವೈ. ಪಾಟೀಲ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ನನಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು. ಆದರೆ, ಈ ಸ್ಥಾನವನ್ನು ಯುವಕರಿಗೆ ನೀಡಿದರೆ ಮತ್ತಷ್ಟು ಒಳ್ಳೆದಾಗುತ್ತದೆ. ನನಗೆ ಈ ಸ್ಥಾನ ಬೇಕಾಗಿಲ್ಲ’ ಎಂದು ‘ಪ್ರಜಾವಾಣಿ’ಗೆ ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರು ರೇಸ್

ಪೆರಿಕಲ್ಸ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಟ್ರೋಫಿ ಶನಿವಾರ ಮುಕ್ತಾಯಗೊಳ್ಳಲಿರುವ ಬೆಂಗಳೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪೆರಿಕಲ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರಾಮಿಸ್‌ಆಫ್‌ದಿಫ್ಯೂಚರ್ 4, ಶೆರೌಕ್ 9, ಫೋರ್ಸ್ ಆಫ್ ನೇಚರ್ 2
2ನೇ ರೇಸ್: ಈಕೊ ಫ್ರೆಂಡ್ಲಿ 7, ಇಂಡಿಯನ್ ಬ್ಲೂಸ್ 1, ಗ್ಲೋ ಇನ್ ದಿ ಡಾರ್ಕ್ 4
3ನೇ ರೇಸ್: ಅಮೇಜಿಂಗ್ ರೂಲರ್ 1, ಕ್ರೈಮ್ ಆಫ್ ಫ್ಯಾಶನ್ 7, ಟ್ರೂ ಪಂಚ್ 5
4ನೇ ರೇಸ್: ದಿವಿಸ್ಪರ್‌ಕ್ವೈಟ್ಲಿ 4, ಮೈ ವಿಶನ್ 3, ಕ್ಯಾಸ್ಟನೆಡ 1
5ನೇ ರೇಸ್: ಬ್ರೀಝ್ ಬ್ಲಸ್ಟರ್ 9, ಇಂಪಿಯಾನ 5, ಆರ್ಮ್‌ಸ್ಟ್ರಾಂಗ್ 4
6ನೇ ರೇಸ್: ಪೆರಿಕಲ್ಸ್ 4, ಕಲ್ಕಿ 1, ಮ್ಯಾಂಡರಿನೊ 2
7ನೇ ರೇಸ್: ಸನ್‌ಲಿಟ್ ಪಾತ್ 1, ಸ್ಟ್ರೈಕಿಂಗ್ ಐಸ್ 4, ವಿಷನ್ 3
8ನೇ ರೇಸ್: ಎಬಲ್ ಒನ್ 2, ಲೆಕ್ಸ್ ಲೂಥರ್ 3, ಲಾಟರ್‌ಬ್ರನೆನ್ 4

ಉತ್ತಮ ಬೆಟ್: ಅಮೇಜಿಂಗ್ ರೂಲರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಕೊಯಮತ್ತೂರು: ಪ್ರಧಾನಿ ರೋಡ್ ಶೋಗೆ ಅನುಮತಿ

ಚೆನ್ನೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇದೇ 18ರಂದು ಕೊಯಮತ್ತೂರಿನಲ್ಲಿ ನಡೆಸಲಿರುವ ನಾಲ್ಕು ಕಿ.ಮೀ ರೋಡ್ ಶೋಗೆ ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡುವಂತೆ ಮದ್ರಾಸ್ ಹೈಕೋರ್ಟ್, ಪೊಲೀಸರಿಗೆ ಸೂಚಿಸಿದೆ.

ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಭದ್ರತಾ ಕಾರಣಗಳನ್ನು ನೀಡಿ ಪೊಲೀಸರು ಪ್ರಧಾನಿ ರೋಡ್ ಶೋಗೆ ಅನುಮತಿ ನಿರಾಕರಿಸಿದ್ದರು. ಇದನ್ನು ಪ್ರಶ್ನಿಸಿ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಜೆ. ರಮೇಶ್ ಕುಮಾರ್ ಹೈಕೋರ್ಟ್ ಮೊರೆ ಹೋಗಿದ್ದರು.

‘ರಾಜಕೀಯ ಕಾರಣಕ್ಕಾಗಿ ರೋಡ್ ಶೋಗೆ ಅನುಮತಿ ನಿರಾಕರಿಸಲಾಗಿದೆ. ಇದು ಸಮಂಜಸವಲ್ಲ. ಸಂವಿಧಾನದ 19ನೇ ವಿಧಿಯಡಿ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ’ ಎಂಬುದನ್ನು ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್. ಆನಂದ್ ವೆಂಕಟೇಶ್ ಅವರು, ಷರತ್ತುಗಳೊಂದಿಗೆ ಅನುಮತಿ ನೀಡುವಂತೆ ಆರ್.ಎಸ್. ಪುರಂ ವಲಯದ ಸಹಾಯಕ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದರು.

ಕಲಿಕೆ ಜತೆ ಕೌಶಲ ತರಬೇತಿಗೆ ಆದೇಶ

ಬೆಂಗಳೂರು: ಸರ್ಕಾರಿ ಪ್ರಥಮದರ್ಜೆ ಕಾಲೇಜು, ಎಂಜಿನಿಯರಿಂಗ್, ಐಟಿಐ, ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ‘ಕಲಿಕೆ ಜತೆ ಕೌಶಲ’ ತರಬೇತಿ ಆರಂಭಿಸಲು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಆದೇಶ ಹೊರಡಿಸಿದೆ. ಕಾಲೇಜು ವಿದ್ಯಾರ್ಥಿಗಳಿಗೆ ಕಲಿಕೆ ಜತೆಗೆ, ಉದ್ಯೋಗಾಧಾರಿತ ಕೌಶಲ ತರಬೇತಿ ನೀಡಲು ಬಜೆಟ್‌ನಲ್ಲಿ ಯೋಜನೆ ಘೋಷಿಸಲಾಗಿತ್ತು. ಮೊದಲ ಹಂತದಲ್ಲಿ ದಾವಣ ಗೆರೆ, ತುಮಕೂರು, ರಾಯಚೂರು, ಕಲಬುರ್ಗಿ ವಿ.ವಿ.ಯ ಅಂತಿಮ ವರ್ಷದ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸೂಚಿಸಲಾಗಿದೆ.

ಪ್ರಜಾವಾಣಿ ಶನಿವಾರ, 16 ಮಾರ್ಚ್ 2024
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ



ಇಫ್ತಾರ್ ಕೂಟದ ರಸದೂಟ
ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಂಜಾನ್ ಉಪವಾಸ ಹೀಗಿರಲಿ

ರಂಜಾನ್ ಮಾಸ, ತ್ಯಾಗ ಮತ್ತು ಪ್ರೀತಿಯ ಪ್ರತೀಕ. ಈ ಪವಿತ್ರ ಮಾಸದಲ್ಲಿ ಉಪವಾಸವಿರುವ ಕುಟುಂಬದವರ ದೇಖರೇಖಿ ಮಾಡುವ ಮಹಿಳೆಯರ ದಿನಚರಿ ಹೀಗಿರಲಿ ಎನ್ನುತ್ತಾರೆ ಪೌಷ್ಟಿಕಾಂಶತಜ್ಞೆ ದೀಪಾ ಬಿ.ಆರ್



ಆಹಾರ ಸೇವಿಸಬಹುದಾದ ಅವಧಿಯಲ್ಲಿ ಸಾಧ್ಯವಿದ್ದಷ್ಟೂ ನೀರು ಸೇವಿಸಿ. ನೀವು ತಯಾರಿಸುವ ಭೋಜನಗಳಲ್ಲಿ ಕುಟುಂಬದ ಸದಸ್ಯರೆಲ್ಲರೂ ಪಾಲ್ಗೊಳ್ಳುವಂತೆ ನೋಡಿಕೊಳ್ಳಿ. ತರಕಾರಿ ಹೆಚ್ಚಿಕೊಡಲು, ಮಸಾಲೆ ಅರಿಯಲು ಉಳಿದವರಿಂದ ಸಹಾಯ ಪಡೆಯಿರಿ. ಮಕ್ಕಳಿಂದಲೂ (ದಾಳಿಂಬೆ ಬಿಡಿಸಿಕೊಡುವ, ಹಣ್ಣು ಹೆಚ್ಚುವಂಥ, ಒಣಹಣ್ಣುಗಳನ್ನು ಜೋಡಿಸಿಡುವಂಥ) ಕೆಲಸಗಳನ್ನು ಮಾಡಿಸಿ. ಎಲ್ಲವನ್ನೂ ಒಬ್ಬರೆ ಮಾಡುವುದರಲ್ಲಿ, ನಿಮ್ಮ ಆರೋಗ್ಯ ಏರುಪೇರಾಗಬಹುದು.

ಉಪವಾಸದ ಸಮಯದಲ್ಲಿ ದೇಹಕ್ಕೆ ಅಗತ್ಯವಿರುವ ಶಕ್ತಿಯನ್ನು ಪೂರೈಸಲು ಕಂದು ಅಕ್ಕಿ, ಕೆಂಪು ಅಕ್ಕಿ, ಸಂಪೂರ್ಣ ಗೋಧಿ ಬ್ರೆಡ್ ಮತ್ತು ಓಟ್ಸ್‌ನಂತಹ ಧಾನ್ಯಗಳನ್ನು ಸ್ವೀಕರಿಸಿ. ಇವು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳ ಅತ್ಯುತ್ತಮ ಮೂಲಗಳು. ದೇಹಕ್ಕೆ ನಿರಂತರ ಶಕ್ತಿ ನೀಡಿ ಹಸಿವನ್ನು ದೂರವಿರಿಸುತ್ತದೆ. ಬೆಳಗಿನ ಜಾವದ ಊಟದಲ್ಲಿ ಇವನ್ನು ಸೇರ್ಪಡೆ ಮಾಡಿದರೆ ರಕ್ತದಲ್ಲಿ ಸಕ್ಕರೆ ಮಟ್ಟವನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ.



ಪ್ರೊಟೀನ್: ಇಫ್ತಾರ್ ಭೋಜನದಲ್ಲಿ ಪ್ರೊಟೀನ್-ಭರಿತ ಆಹಾರಗಳನ್ನು ಸೇರಿಸುವುದು ಉಪವಾಸದ ಸಮಯದಲ್ಲಿ ಕಳೆದುಹೋದ ಅಮೈನೋ ಆಮ್ಲಗಳನ್ನು ಪುನಃ ತುಂಬಲು ಸಹಾಯ ಮಾಡುತ್ತದೆ, ಸ್ನಾಯುಗಳು ಶಕ್ತಿಯುತವಾಗಿರುವಂತೆ ನೋಡಿಕೊಳ್ಳುತ್ತದೆ. ಮಾಂಸ, ಕೋಳಿ, ಮೊಟ್ಟೆ, ಮೀನು, ದ್ವಿದಳ ಧಾನ್ಯಗಳು, ಮೊಸರು ಮತ್ತು ಡೈರಿ ಉತ್ಪನ್ನಗಳು ಪ್ರೊಟೀನ್ ಮೂಲಗಳಾಗಿವೆ.



ಆರೋಗ್ಯಕರ ಕೊಬ್ಬುಗಳು: ಆವಕಾಡೊ, ಆಲಿವ್ ಎಣ್ಣೆ ಮತ್ತು ಕೊಬ್ಬಿನ ಮೀನುಗಳು ನಿಮ್ಮ ಆರೋಗ್ಯಕ್ಕೆ ಪ್ರಯೋಜನಕಾರಿಯಾದ ಆರೋಗ್ಯಕರ ಕೊಬ್ಬುಗಳನ್ನು ಹೊಂದಿವೆ. ಇದು ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಸಾಲ್ಮನ್ ಮತ್ತು ಮ್ಯಾಕೆರೆಲ್ ನಂಥ ಕೊಬ್ಬಿದ ಮೀನುಗಳಲ್ಲಿ ಕಂಡುಬರುವ ಒಮೆಗಾ -3 ಕೊಬ್ಬಿನಾಮ್ಲಗಳು ಹೃದ್ರೋಗ ಮತ್ತು ಮಧುಮೇಹದಂತಹ ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ಹಣ್ಣುಗಳು ಮತ್ತು ತರಕಾರಿಗಳು: ಹಣ್ಣು ಮತ್ತು ತರಕಾರಿಗಳು ಜೀವಸತ್ವಗಳು, ಖನಿಜಗಳು ಉತ್ತಮ ರೋಗನಿರೋಧಕವನ್ನು ಹೆಚ್ಚಿಸುತ್ತದೆ. ವಿವಿಧ ಹಣ್ಣುಗಳು ಮತ್ತು ತರಕಾರಿಗಳನ್ನು ಸೇವಿಸುವುದರಿಂದ ಉಪವಾಸದ ಸಮಯದಲ್ಲಿ ಕಳೆದುಹೋದ ಎಲೆಕ್ಟ್ರೋಲೈಟ್‌ಗಳನ್ನು ಪುನಃ ತುಂಬಿಸಲು ಅಗತ್ಯವಾದ ಪೋಷಕಾಂಶಗಳನ್ನು ಒದಗಿಸುತ್ತದೆ. ಹೆಚ್ಚುವರಿಯಾಗಿ, ಹಣ್ಣುಗಳು ಮತ್ತು ತರಕಾರಿಗಳಲ್ಲಿನ ಫೈಬರ್ ಅಂಶವು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ ಮತ್ತು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುತ್ತದೆ.

ಹೈಡ್ರೇಟಿಂಗ್ ಆಹಾರಗಳು: ಸೌತೆಕಾಯಿ, ಕಲ್ಲಂಗಡಿ, ಕಿತ್ತಳೆ ಮತ್ತು ಸೂಪ್‌ಗಳು ಹೈಡ್ರೇಟಿಂಗ್ ಆಹಾರಗಳಾಗಿವೆ. ಹೆಚ್ಚಿನ ನೀರಿನ ಅಂಶವನ್ನು ಹೊಂದಿರುವುದರಿಂದ ಉಪವಾಸದ ಸಮಯದಲ್ಲಿ ಇವು ಅತ್ಯುತ್ತಮ ಆಯ್ಕೆಯಾಗಿವೆ. ಉಪವಾಸದಿಂದ ದೇಹವು ಡಿಹೈಡ್ರೇಟ್ ಆಗಬಹುದು. ಹಾಗಾಗಿ ಬೇಸಿಗೆ ಕಾಲದಲ್ಲಿ. ನಿಮ್ಮ ಆಹಾರದಲ್ಲಿ ಹೈಡ್ರೇಟಿಂಗ್ ಆಹಾರಗಳನ್ನು ಸೇರಿಸುವುದು ಒಳ್ಳೆಯದು. ಇದು ಆಯಾಸ, ತಲೆನೋವು ಮತ್ತು ತಲೆತಿರುಗುವಿಕೆಯಂಥ ಸಮಸ್ಯೆಗಳನ್ನು ನಿವಾರಿಸುತ್ತದೆ.

ತಪ್ಪಿಸಬೇಕಾದ ಆಹಾರಗಳು

ಸಕ್ಕರೆ ಆಹಾರಗಳು ಮತ್ತು ಪಾನೀಯಗಳು: ರಂಜಾನ್ ಸಮಯದಲ್ಲಿ, ಸಕ್ಕರೆ ತಿಂಡಿಗಳು, ಸಿಹಿತಿಂಡಿಗಳು ಮತ್ತು ಕಾರ್ಬೋನೇಟೆಡ್ ಪಾನೀಯಗಳ ಬಳಕೆಯನ್ನು ಮಿತಿಗೊಳಿಸಿ. ಸಕ್ಕರೆಯ ಸತ್ಕಾರಗಳು ತ್ವರಿತ ಶಕ್ತಿಯ ಉತ್ತೇಜನವನ್ನು ನೀಡಬಹುದಾದರೂ ರಕ್ತದಲ್ಲಿನ ಸಕ್ಕರೆಯ ಮಟ್ಟದಲ್ಲಿ ಇಳಿಕೆಗೆ ಕಾರಣವಾಗುತ್ತವೆ. ಇದರಿಂದಾಗಿ ಬಹುಬೇಗ ದಣಿಯುತ್ತೀರಿ. ಶಕ್ತಿಗಾಗಿ ಸಕ್ಕರೆ ಆಹಾರಗಳನ್ನು ಅವಲಂಬಿಸುವ ಬದಲು, ಹಣ್ಣುಗಳು, ಬೀಜಗಳು ಅಥವಾ ಮೊಸರುಗಳಂತಹ ಆರೋಗ್ಯಕರ ಪರ್ಯಾಯಗಳನ್ನು ಆರಿಸಿಕೊಳ್ಳಿ. ಹೆಚ್ಚುವರಿಯಾಗಿ, ಸಕ್ಕರೆ ಪಾನೀಯಗಳ ಬದಲಿಗೆ ನೀರು ಅಥವಾ ಗಿಡಮೂಲಿಕೆ ಚಹಾಗಳನ್ನು ಕುಡಿಯುವುದು ಒಳ್ಳೆಯದು.

ಎಣ್ಣೆಯಲ್ಲಿ ಕರಿದ ಆಹಾರಗಳು ಮತ್ತು ಸಂಸ್ಕರಿಸಿದ ಆಹಾರಗಳು: ಕರಿದ ಆಹಾರಗಳು ಮತ್ತು ಸಂಸ್ಕರಿಸಿದ ತಿಂಡಿಗಳನ್ನು ತಪ್ಪಿಸಬೇಕು. ಈ ಆಹಾರಗಳಲ್ಲಿ ಸಾಮಾನ್ಯವಾಗಿ ಅನಾರೋಗ್ಯಕರ ಕೊಬ್ಬುಗಳು, ಸೋಡಿಯಂ ಮತ್ತು ಸಂರಕ್ಷಕಗಳು ಅಧಿಕವಾಗಿರುತ್ತವೆ. ಇದು ನಿಮ್ಮ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಬಹುದು. ಸಮೋಸಾ ಅಥವಾ ಪಕೋಡಗಳಂತಹ ಕರಿದ ಆಹಾರಗಳು ಭಾರವಾಗಿರುತ್ತದೆ ಮತ್ತು ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತದೆ, ಇದು ಉಪವಾಸದ ಸಮಯದಲ್ಲಿ ಅಸ್ವಸ್ಥತೆಗೆ ಕಾರಣವಾಗುತ್ತದೆ. ಚಿಪ್ಸ್ ಅಥವಾ ಕುಕೀಗಳಂಥ ಸಂಸ್ಕರಿಸಿದ ತಿಂಡಿಗಳು ಸಾಮಾನ್ಯವಾಗಿ ಕಡಿಮೆ ಪೋಷಕಾಂಶಗಳನ್ನು ಹೊಂದಿರುತ್ತವೆ ಮತ್ತು ಹೆಚ್ಚಿನ ಕ್ಯಾಲೋರಿಗಳನ್ನು ಹೊಂದಿರುತ್ತವೆ. ಇವುಗಳ ಸೇವನೆಯಿಂದ ತೂಕ ಹೆಚ್ಚಾಗುತ್ತದೆ. ಕರಿದ ಅಥವಾ ಸಂಸ್ಕರಿಸಿದ ಆಹಾರ ಸೇವಿಸುವ ಬದಲು ಹಣ್ಣುಗಳು, ತರಕಾರಿಗಳು, ನೇರ ಪ್ರೊಟೀನ್‌ಗಳು ಮತ್ತು ಧಾನ್ಯಗಳಿಂದ ಮಾಡಿದ ಖಾದ್ಯಗಳ ಮೇಲೆ ಗಮನವಿಡಿ.

ಮಸಾಲೆಯುಕ್ತ ಮತ್ತು ಉಪ್ಪು ಅಂಶವಿರುವ ಆಹಾರಗಳು: ಮಸಾಲೆಗಳು ಮತ್ತು ಉಪ್ಪು ಹಾಗೂ ಭಕ್ಷ್ಯಗಳಿಗೆ ಪರಿಮಳವನ್ನು (added flavor) ಸೇರಿಸಿರುವ ಖಾದ್ಯಗಳ ಸೇವನೆ ಸಲ್ಲದು. ಮಸಾಲೆಯುಕ್ತ ಆಹಾರಗಳು ಬಾಯಾರಿಕೆ ಮತ್ತು ಅಸ್ವಸ್ಥತೆಯನ್ನು ಹೆಚ್ಚಿಸಬಹುದು, ವಿಶೇಷವಾಗಿ ಧಗೆಯ ವಾತಾವರಣದಲ್ಲಿ ಉಪವಾಸ ಇನ್ನಷ್ಟು ಸವಾಲಿನ ವಿಷಯವಾಗಿರುತ್ತದೆ. ಹಾಗೆಯೇ, ಉಪ್ಪು ಭರಿತ ಆಹಾರಗಳಿಂದ ನಿರ್ಜಲೀಕರಣ ಉಂಟಾಗಬಹುದು. ಭಾರೀ ಮೇಲೋಗರಗಳು ಅಥವಾ ಉಪ್ಪು ಭರಿತ ತಿಂಡಿಗಳ ಬದಲಿಗೆ, ಗಿಡಮೂಲಿಕೆಗಳು, ನಿಂಬೆ ಅಥವಾ ಕಡಿಮೆ ಮಸಾಲೆ ಹಾಕಿದ ಹಗುರವಾದ ಊಟವನ್ನು ಆಯ್ಕೆಮಾಡಿಕೊಳ್ಳಬಹುದು.

ಪೊಟ್ಟಣಗಳಲ್ಲಿರುವ ಆಹಾರಗಳು, ಕಾಂಡಿಮೆಂಟ್ಸ್‌ಗಳಲ್ಲಿ ಸಿಗುವ ಆಹಾರದಲ್ಲಿನ ಉಪ್ಪಿನಂಶದ ಕಡೆಗೆ ಗಮನ ಕೊಡಿ. ಸಾಧ್ಯವಾದಾಗಲೆಲ್ಲಾ ಕಡಿಮೆ-ಸೋಡಿಯಂ ಆಯ್ಕೆಗಳನ್ನು ಇರಿಸಿಕೊಳ್ಳಿ.

ಕೆಫೀನ್ ಹೊಂದಿರುವ ಪಾನೀಯಗಳು: ಕಾಫಿ ಮತ್ತು ಚಹಾವು ಜನಪ್ರಿಯ ಪಾನೀಯಗಳಾಗಿವೆ. ಆದರೆ ರಂಜಾನ್ ಉಪವಾಸದ ಸಮಯದಲ್ಲಿ ಅವುಗಳ ಸೇವನೆಯನ್ನು ಮಿತಿಗೊಳಿಸುವುದು ಮುಖ್ಯವಾಗಿದೆ.

ಕಾಫಿ ಮತ್ತು ಚಹಾದಂಥ ಪಾನೀಯಗಳು ಮೂತ್ರದ ಉತ್ಪಾದನೆಯನ್ನು ಹೆಚ್ಚಿಸಬಹುದು ಮತ್ತು ನಿರ್ಜಲೀಕರಣಕ್ಕೆ ಕಾರಣವಾಗಬಹುದು. ಹರ್ಬಲ್ ಟೀಗಳು, ನೀರು ಅಥವಾ ಹಣ್ಣು-ಇನ್‌ಫ್ಯೂಸ್ಡ್ ನೀರಿನಂತಹ ಕೆಫೀನ್-ಮುಕ್ತ ಪಾನೀಯಗಳನ್ನು ಆರಿಸಿಕೊಳ್ಳಿ.

ಅತಿಯಾಗಿ ತಿನ್ನುವುದು: ಸೆಹ್ರಿ ಮತ್ತು ಇಫ್ತಾರ್ ಸಮಯದಲ್ಲಿ ಅತಿಯಾಗಿ ತಿನ್ನುವುದರಿಂದ ಜೀರ್ಣ ಸಂಬಂಧಿತ ಸಮಸ್ಯೆಗಳು ಉಂಟಾಗಿ, ತೂಕ ಹೆಚ್ಚಾಗಬಹುದು. (Portion control) ಭಾಗಶಃ ನಿಯಂತ್ರಣ ಪದ್ಧತಿಯನ್ನು ಅಭ್ಯಾಸ ಮಾಡುವುದು ಒಳಿತು. ಹೆಚ್ಚು ತಿನ್ನುವುದರಿಂದ ಜೀರ್ಣಾಂಗ ವ್ಯವಸ್ಥೆಯ ಕಾರ್ಯವೈಖರಿಯಲ್ಲಿ ವ್ಯತ್ಯಯ ಉಂಟಾಗಬಹುದು. ಇದರಿಂದ ಆಲಸ್ಯ ಬರಬಹುದು. ಬದಲಾಗಿ, ನೇರ ಪ್ರೊಟೀನ್‌ಗಳು, ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳಂಥ ವಿವಿಧ ಪೌಷ್ಟಿಕಾಂಶಭರಿತ ಆಹಾರಗಳನ್ನು ಒಳಗೊಂಡಿರುವ ಸಮತೋಲಿತ ಊಟ ಸೇವನೆಯ ಕಡೆಗೆ ಗಮನವಹಿಸಿ.

ಮಧುಮೇಹಿಗಳು ಏನು ಮಾಡಬಹುದು?



ಟೈಪ್ 1 ಡಯಾಬಿಟಿಸ್ (ಇನ್ಸುಲಿನ್ ಅವಲಂಬಿತ) ಇರುವವರಿಗೆ ರಂಜಾನ್ ಉಪವಾಸಕ್ಕೆ ಮುನ್ನ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ವೈದ್ಯರ ಸಲಹೆಯಿಲ್ಲದೆ ಉಪವಾಸ ಬೇಡ.
ಸೂಕ್ತ ಆಹಾರ, ಸಾಕಷ್ಟು ವಿಶ್ರಾಂತಿ ಮತ್ತು ಸೂಚಿಸಿದ ಔಷಧಿಗಳನ್ನು ಕ್ರಮಬದ್ಧವಾಗಿ ಸೇವಿಸಿದ ಬಳಿಕವೇ ಉಪವಾಸ ಕೈಗೊಳ್ಳಿ.

ಇನ್ಸುಲಿನ್ ಪ್ರಮಾಣ ಮತ್ತು ಸಮಯವನ್ನು ಬದಲಿಸಿ: ಒಂದು ವೇಳೆ ಉಪವಾಸಕ್ಕೆ ವೈದ್ಯರು ಅನುಮತಿಸಿದರೆ ಮತ್ತು ನೀವು ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದರೆ ಇದರ ಪ್ರಮಾಣ ಮತ್ತು ತೆಗೆದುಕೊಳ್ಳಬೇಕಾದ ಸಮಯದ ಕುರಿತು ವೈದ್ಯರ ಸಲಹೆ ಪಡೆಯಿರಿ.

ಸಮತೋಲಿತ ಆಹಾರ ಸೇವಿಸಿ: ಆಹಾರ ಸಂತುಲಿತವಾಗಿದ್ದು ನಿಮ್ಮ ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ಆರೋಗ್ಯಕರ ಮಿತಿಯಲ್ಲಿರುವಂತೆ ನೋಡಿಕೊಳ್ಳಿ. ಕಡಿಮೆ ಗ್ಲೈಸೆಮಿಕ್ ಇಂಡೆಕ್ಸ್ ಮತ್ತು ಹೆಚ್ಚಿನ ಫೈಬರ್ ಹೊಂದಿರುವ ಆಹಾರವನ್ನು ಸೇವಿಸಿ. ನಿಮ್ಮ ಆಹಾರ ನಿಧಾನವಾಗಿ ಜೀರ್ಣಗೊಳ್ಳುವ ಮತ್ತು ನಿಧಾನವಾಗಿ ರಕ್ತಕ್ಕೆ ಬಿಡುಗಡೆಯಾಗುವಂತಹದ್ದೇ ಆಗಿರಲಿ. ಉದಾಹರಣೆಗೆ: ರಾಗಿ, ಗೋಧಿ, ಸಿರಿ ಧಾನ್ಯ, ಮೊಳಕೆ ಕಟ್ಟಿದ ಕಾಳು, ಸೊಪ್ಪು, ತರಕಾರಿಗಳು ಮತ್ತು ಹಣ್ಣುಗಳು ಇತ್ಯಾದಿ. ಉಪವಾಸದ ಅವಧಿಯಲ್ಲಿಯೂ ಕೊಂಚ ದೈಹಿಕ ಚಟುವಟಿಕೆ ಅಗತ್ಯ. ರಂಜಾನ್ ಸಮಯದಲ್ಲಿ ಸಿಹಿತಿಂಡಿಗಳ ಸೇವನೆಯನ್ನು ಮಿತಿಗೊಳಿಸಿ. ತಲೆತಿರುಗುವಿಕೆ, ಮಸುಕಾದ ದೃಷ್ಟಿ ಅಥವಾ ಅನಿಯಮಿತ ಹೃದಯ ಬಡಿತದಂತಹ ರೋಗಲಕ್ಷಣಗಳನ್ನು ಹೊಂದಿದ್ದರೆ, ತಕ್ಷಣವೇ ಉಪವಾಸ ನಿಲ್ಲಿಸಿ ವೈದ್ಯರನ್ನು ಭೇಟಿ ಮಾಡಿ.

ಹೃದಯದ ಕಾಯಿಲೆ, ಕಿಡ್ನಿ, ಯಕೃತ್ ಸಮಸ್ಯೆ ಇರುವವರು ಉಪವಾಸ ಮಾಡುವುದು ಅಷ್ಟು ಒಳ್ಳೆಯದಲ್ಲ. ದೇಹ ನೀಡುವಂತಹ ಕೆಲವು ಸೂಚನೆಗಳನ್ನು ಗಮನಿಸಿ ಮತ್ತು ವೈದ್ಯರ ಸಲಹೆಯಂತೆ ಉಪವಾಸವನ್ನು ಮಾಡಿ.

ಸಿಹಿ ಸವಿ

ರಸಸ್ವಾದ

ರಂಜಾನ್ ತಿಂಗಳು ಎಂದಾಕ್ಷಣ ಮೊದಲು ನೆನಪಿಗೆ ಬರುವುದು ಶೀರ್‌ಕುರ್ಮಾ. ಅದರ ಹಿಂದೆ ಸಾಲಾಗಿ ನೆನಪಾಗುವುದು ಬಗೆಬಗೆಯ ಖಾದ್ಯಗಳು. ಮಾಂಸಾಹಾರಿಗಳಿಗಂತೂ ಈ ತಿಂಗಳಿನಲ್ಲಿ ಬಗೆಬಗೆಯ ಖಾದ್ಯಗಳು ಸಿಗುತ್ತವೆ. ಹಬ್ಬದ ಊಟಕ್ಕೆ ಹೊಸ ಮೆರುಗು ಕೊಡುವುದೇ ಶೀರ್ ಕುರ್ಮಾ. ಈ ಶೀರ್ ಕುರ್ಮಾದ ರುಚಿ ಧರ್ಮದ ಗಡಿ ಮೀರಿದ್ದು. ರಂಜಾನ್ ಹಬ್ಬದ ನೆಪದಲ್ಲಿ ಮುಸ್ಲಿಮೇತರರ ಮನೆಗಳಿಗೆ ಸೌಹಾರ್ದದ ರುಚಿಯಾಗಿ ದೊರೆಯುತ್ತದೆ. ಕ್ಷೀರದ ಅಪಭ್ರಂಶ ಶೀರ್ ಎಂಬ ವಾದವೂ ಇದೆ. ಈ ಸಿಹಿಯ ರೆಸಿಪಿ ನೀಡಿದ್ದಾರೆ ಸುಷ್ಮಾ ಸವಸುದ್ದಿ



ಶೀರ್ ಕುರ್ಮಾ

ಬೇಕಾಗುವ ಸಾಮಗ್ರಿಗಳು: 2 ಲೀ. ಹಾಲು, ತೆಳುವಾಗಿರುವ ಶ್ಯಾವಿಗೆ, ಬಾದಾಮಿ (ಸಿಪ್ಪೆ ತೆಗೆದು ನೆನೆಸಿ ಈಡಬೇಕು), ಗೋಡಂಬಿ, ಚಿರಾಂಜಿ, ಖರ್ಜೂರ, ಮಿಲ್ಕ್ ಮೇಡ್ ವಿತ್ ಸ್ವೀಟ್, ಪಿಸ್ತಾ, ಕೇಸರಿ, ತುಪ್ಪ.

ಮಾಡುವ ವಿಧಾನ: ಹಾಲು ಬಿಸಿ ಮಾಡಿ, ಚೆನ್ನಾಗಿ ಕುದಿಸಬೇಕು. ಎಲ್ಲ ಒಣಹಣ್ಣುಗಳನ್ನು ಚಿಕ್ಕದಾಗಿ ಕಟ್ ಮಾಡಿ ಇಟ್ಟುಕೊಳ್ಳಬೇಕು. ಒಂದು ಪಾತ್ರೆಯಲ್ಲಿ ತುಪ್ಪದ ಜೊತೆಗೆ ಕಟ್ ಮಾಡಿದ ಒಣಹಣ್ಣುಗಳನ್ನು ಹುರಿದುಕೊಳ್ಳಬೇಕು. ಬಾದಾಮಿ, ಪಿಸ್ತಾ, ಗೋಡಂಬಿ, ಚಿರಂಜಿ, ಖರ್ಜೂರವನ್ನು ಹುರಿದುಕೊಳ್ಳಬೇಕು. ತೆಳುವಾದ ಶ್ಯಾವಿಗೆಯನ್ನು ತುಪ್ಪದ ಜೊತೆಗೆ ಹುರಿದುಕೊಳ್ಳಬೇಕು. ನಂತರ ಹಾಲನ್ನು ಕಾಯಿಸುತ್ತಾ ಅದಕ್ಕೆ ಹುರಿದುಕೊಂಡಿರುವ ಒಣಹಣ್ಣುಗಳನ್ನು ಹಾಕಿ, ಒಂದು ನಿಮಿಷ ಚೆನ್ನಾಗಿ ಕಲಕಬೇಕು. ನಂತರ ಶ್ಯಾವಿಗೆ ಹಾಕಿ ಒಂದು ನಿಮಿಷ ಕುದಿಸಬೇಕು. 400 ಗ್ರಾಂ ಮಿಲ್ಕ್ ಮೇಡ್ ಹಾಕಿ, ರುಚಿಗೆ ತಕ್ಕಷ್ಟು ಸಕ್ಕರೆ ಹಾಕಿ ಕುದಿಸಿ, ಕೊನೆಗೆ ಕೇಸರಿ ಹಾಕಿದರೆ ಶಿರ್ ಕುರ್ಮಾ ತಯಾರು.

ಮಿಲ್ಕ್ ಶರಬತ್



ದಿನಾ ರೋಜಾ ಇರುವವರಿಗೆ ಇಫ್ತಾರ್‌ಗೆ ಕುಡಿಯಲು ತಣ್ಣ ಮಿಲ್ಕ್ ಶರಬತ್ ಹಿತವಾಗಿರುತ್ತದೆ.

ಬೇಕಾಗುವ ಸಾಮಗ್ರಿಗಳು: 3 ಕಪ್ ಹಾಲು, ಅರ್ಧ ಕಪ್ ಸಕ್ಕರೆ, ಬಾದಾಮಿ, ಗೋಡಂಬಿ, ಅರ್ಧ ಕಪ್ ದಾಳಿಂಬೆ, ಸಣ್ಣದಾಗಿ ಹೆಚ್ಚಿದ ಸೇಬು.

ಮಾಡುವ ವಿಧಾನ: ಹಾಲನ್ನು ಚೆನ್ನಾಗಿ ಕುದಿಸಬೇಕು. ಹಾಲು ಕುದಿಯುವಾಗ ಅದಕ್ಕೆ ಅರ್ಧ ಕಪ್ ಸಕ್ಕರೆ ಸೇರಿಸಬೇಕು. ಒಂದು ಗಂಟೆ ಆರಲು ಬಿಡಬೇಕು. ಬಾದಾಮಿ, ಗೋಡಂಬಿಗಳನ್ನು ಮಿಕ್ಸಿಗೆ ಹಾಕಿ ಪೌಡರ್ ಮಾಡಿಕೊಳ್ಳಬೇಕು. ಹಾಲು ಆರಿದ ಬಳಿಕ ಅದಕ್ಕೆ ಪೌಡರ್, ನೆನೆಸಿಟ್ಟ ಕಾಮಕಸ್ತೂರಿ ಬೀಜ, ದಾಳಿಂಬೆ, ಕಟ್ ಮಾಡಿದ ಸೇಬು ಸೇರಿಸಿ ಮಿಶ್ರಣ ಮಾಡಬೇಕು. ರುಚಿಗೆ 1 ಟೀ ಸ್ಪೂನ್ ರೂಹ್ ಅಫ್ಜಾ ಸೇರಿಸಬಹುದು.

ಪಿಸಿಒಡಿ: ಗರ್ಭಧಾರಣೆಗೆ ತೊಡಕಾಗಬಹುದೇ?



ಸ್ಪಂದನ

ಡಾ. ವೀಣಾ ಎಸ್. ಭಟ್

ಸ್ಪಂದನಾ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

- **ನನ್ನ ಹೆಂಡತಿಗೆ ಪಿಸಿಒಡಿ ಸಮಸ್ಯೆ ಇದೆ. ಗರ್ಭದಲ್ಲಿ ಚಿಕ್ಕ, ಚಿಕ್ಕ ನೀರು ಗುಳ್ಳೆ ಇದೆ ಎಂದು ವೈದ್ಯರು ಹೇಳಿದ್ದಾರೆ. ಗರ್ಭಧಾರಣೆಗೆ ತೊಂದರೆಯಾಗುತ್ತದೆಯೇ ?**

ಪಿಸಿಒಡಿ ಆಧುನಿಕ ಜಗತ್ತಿನ ಜೀವನಶೈಲಿಗೆ ಸಂಬಂಧಿಸಿದ ಅತಿಸಾಮಾನ್ಯ ಸಮಸ್ಯೆ. ಆನುವಂಶೀಯ, ಅಸಮರ್ಪಕ ಜೀವನಶೈಲಿ, ಆಹಾರಪದ್ಧತಿ ಈ ಎಲ್ಲ ಕಾರಣಗಳಿಂದಲೂ ಈ ಸಮಸ್ಯೆ ಉಂಟಾಗಬಹುದು. ನೂರರಲ್ಲಿ 20 ರಿಂದ 30 ಮಹಿಳೆಯರನ್ನು ಈ ಸಮಸ್ಯೆ ಬಾಧಿಸುತ್ತದೆ. ಪ್ರತಿ ಹೆಣ್ಣಿಗೂ ಸಂತಾನೋತ್ಪತ್ತಿ ವಯಸ್ಸಿನಲ್ಲಿ ಅಂಡಾಶಯದಿಂದ ಪ್ರತಿ ತಿಂಗಳು ಪ್ರಬಲಕೋಶಿಕೆಯೊಂದು ಬೆಳವಣಿಗೆಯಾಗಿ ಅಂಡಾಣು ಬಿಡುಗಡೆಯಾಗುತ್ತದೆ. ಆದರೆ, ಪಿಸಿಒಡಿ ಇರುವವರಲ್ಲಿ ಈಸ್ಟ್ರೋಜನ್ ಮತ್ತು ಆ್ಯಂಡ್ರೋಜನ್ ಹಾರ್ಮೋನ್‌ಗಳ ಹೆಚ್ಚಳದಿಂದಾಗಿ ಹಾರ್ಮೋನ್ ಬಿಡುಗಡೆಯಲ್ಲಿ ಅಸಮತೋಲನ ಉಂಟಾಗುತ್ತದೆ. ಅಂಡಾಶಯದಿಂದ ಪ್ರತಿ ತಿಂಗಳು ನಿಗದಿತ ಅವಧಿಯಲ್ಲಿ ಅಂಡಾಣು ಬಿಡುಗಡೆಯಾಗುವ ಪ್ರಕ್ರಿಯೆ ಆಗುವುದೇ ಇಲ್ಲ. ಹೀಗೆ ಅಂಡೋತ್ಪತ್ತಿಯಾಗದೇ, ಉಳಿದ ಅಪಕ್ವ ಕೋಶಿಕೆಗಳು (ಫಾಲಿಕಲ್ಸ್) ಅಂಡಾಶಯದ ತೊಗಟೆಯಲ್ಲಿ ಸ್ಕ್ಯಾನಿಂಗ್‌ನಲ್ಲಿ ಮುತ್ತು ಜೋಡಿಸಿದಂತೆ ಗೋಚರಿಸುತ್ತವೆ.

ಇದೇ ಪಿಸಿಒಡಿ ಸಮಸ್ಯೆ ಕೇವಲ ಮೇಲ್ನೋಟಕ್ಕೆ ಗೋಚರಿಸುವ ಹಾಗೆ ಕೇವಲ ಅಂಡಾಶಯಕ್ಕಷ್ಟೇ ಸೀಮಿತವಾಗಿದ್ದರೆ ಅದನ್ನು ಪಿಸಿಓ ಅಥವಾ ಪಾಲಿಸಿಸ್ಟಿಕ್ ಓವೇರಿಯನ್ ಡಿಸೀಸ್ ಎನ್ನುತ್ತೇವೆ.

ಇದು ಹದಿವಯಸ್ಸಿನಲ್ಲಿಯೇ ಆರಂಭವಾಗಿ, ಮುಟ್ಟು ನಿಲ್ಲುವವರೆಗೂ ಮುಂದುವರಿಯಬಹುದು. ಹದಿವಯಸ್ಸಿನಲ್ಲಿ ಋತುಚಕ್ರದ ಏರುಪೇರು, ಹೆಚ್ಚುವ ಮೊಡವೆಗಳು, ಅತಿಯಾದ ರಕ್ತಸ್ರಾವ, ಅನಗತ್ಯ ಜಾಗಗಳಲ್ಲಿ ಕೂದಲ ಬೆಳವಣಿಗೆ ಉಂಟು ಮಾಡಬಹುದು.



ಸಂತಾನೋತ್ಪತ್ತಿ ವಯಸ್ಸಿನಲ್ಲಿ ಪಿಸಿಒಡಿ ಇಂದ ಮಕ್ಕಳಾಗದೇ ಇರುವುದು ಆಗಬಹುದು. ಅಕಸ್ಮಾತ್ ಒಮ್ಮೆ ಕಷ್ಟಪಟ್ಟು ಗರ್ಭ ನಿಂತರೂ ಗರ್ಭಪಾತವಾಗುವುದು ಇಂಥ ಸಮಸ್ಯೆಗಳನ್ನು ಉಂಟುಮಾಡಬಹುದು. ಮಧುಮೇಹ, ಹೃದ್ರೋಗ, ಗರ್ಭಾಶಯದ ಕ್ಯಾನ್ಸರ್, ನಿದ್ರೆಯಲ್ಲಿ ಉಸಿರಾಟದ ತೊಂದರೆ, ಬೊಜ್ಜು ಹೀಗೆ ಹಲವಾರು ದೀರ್ಘಾವಧಿ ಆರೋಗ್ಯ ಸಮಸ್ಯೆಗಳು ಉಂಟಾದರೆ ಅದನ್ನು ಪಾಲಿಸಿಸ್ಟಿಕ್ ಓವೇರಿಯನ್ ಸಿಂಡ್ರೋಮ್ ಎನ್ನುತ್ತಾರೆ. ಇದನ್ನೆಲ್ಲ ಓದಿ ಗಾಬರಿ ಆಗಬೇಡಿ. ಉತ್ತಮ ಜೀವನಶೈಲಿ ಅಳವಡಿಸಿಕೊಂಡರೆ ಪಿಸಿಒಡಿಯನ್ನು ಜಯಿಸಬಹುದು. ಆಹಾರಕ್ರಮ, ಒಳ್ಳೆಯ ನಿದ್ರೆ, ಸೂಕ್ತ ವ್ಯಾಯಾಮ, ಭಾವೋದ್ವೇಗ ನಿರ್ವಹಣೆ ಸಮರ್ಪಕವಾಗಿರಲಿ.

ಪಿಸಿಒಡಿ ಶೇ 70ರಷ್ಟು ಮಹಿಳೆಯರಲ್ಲಿ ಬೊಜ್ಜು ಇರುತ್ತವೆ. ಇನ್ನು ಶೇಕಡ 20ರಿಂದ 30ರಷ್ಟು ತೆಳ್ಳಗಿರುವ ಮಹಿಳೆಯರಲ್ಲೂ, ಆದರೆ ಅಂತಹವರಲ್ಲಿ ಉದರದ ಬೊಜ್ಜು ಅಂದರೆ ಹೊಟ್ಟೆಯ ಭಾಗದಲ್ಲಿರುವ ಬೊಜ್ಜು ಇದ್ದಾಗ ಕಂಡು ಬರಬಹುದು. ಆಹಾರದಲ್ಲಿ ಹೆಚ್ಚು ಪ್ರೊಟೀನ್ ಅಂಶಗಳನ್ನು, ಹಸಿರು ಸೊಪ್ಪು, ತರಕಾರಿ, ಮೊಳಕೆ ಕಾಳುಗಳು, ಬೀಜಗಳು, ಒಣ ಹಣ್ಣುಗಳಿರಲಿ.

ಕಾರ್ಬೋಹೈಡ್ರೇಟ್ ಸೇವನೆ ಕಡಿಮೆಮಾಡಿ. ಆಹಾರ ಸೇವನೆ ಕೆಲಸವನ್ನು ಗಮನವಿಟ್ಟು ಮಾಡಿ (ಮೈಂಡ್‌ಫುಲ್ ಈಟಿಂಗ್). ದಿನಕ್ಕೆ ಮೂರರಿಂದ ನಾಲ್ಕು ಲೀಟರ್ ನೀರನ್ನು ಸೇವಿಸಿ. ಕನಿಷ್ಠ ಒಂದು ಗಂಟೆಯಾದರೂ ವ್ಯಾಯಾಮ ಮಾಡಿ. ದೀರ್ಘ ಉಸಿರಾಟ ಕ್ರಮ, ಸಕಾರಾತ್ಮಕ ಚಿಂತನೆಯಿಂದ ನಿಮ್ಮ ತೂಕ ನಿರ್ವಹಣೆ ಮಾಡಿಕೊಳ್ಳಬಹುದು. ಜೊತೆಗೆ ಅಂಡೋತ್ಪತ್ತಿ ಪ್ರಚೋದಕ ಔಷಧಗಳನ್ನು ನಿಮಗೆ ಬಳಸಲು ವೈದ್ಯರು ಸೂಚಿಸುತ್ತಾರೆ. ಸೂಕ್ತ ಸಮಯದಲ್ಲಿ ಅಂಡೋತ್ಪತ್ತಿಯಾಗುವ ಆಸುಪಾಸಿನ ದಿನಗಳಲ್ಲಿ ನೀವು ಲೈಂಗಿಕ ಸಂಪರ್ಕ ಮಾಡಲು ತಿಳಿಸುತ್ತಾರೆ ಇದರಿಂದ ಹೆಚ್ಚಿನವರಿಗೆ ಗರ್ಭಧಾರಣೆಯಾಗುತ್ತದೆ. ಚಿಂತಿಸಬೇಡಿ.

ನಗುವಿನೊಂದಿಗೆ ನಾಗಮಣಿ ನವೋಲ್ಲಾಸ

ಪವಿತ್ರಾ ಭಟ್

ಮುಂದೇನೊ; ಮತ್ತೇನೊ; ಇಂದಿಗಾ ಮಾತೇಕೆ? |
ಸಂದರ್ಭ ಬರಲಿ; ಬಂದಾಗಳಾ ಚಿಂತೆ ||
ಹೊಂದಿಸುವನಾರೊ; ನಿನ್ನಾಳಲ್ಲ; ಬೇರಿಹನು |
ಇಂದಿಗಿಂದಿನ ಬದುಕು – ಮಂಕುತಿಮ್ಮ ||

ಎಂದಿದ್ದಾರೆ ಡಾ.ಡಿ.ವಿ. ಗುಂಡಪ್ಪ.

ಬದುಕಿನ ಹಲವು ಮಜಲುಗಳನ್ನು ದಾಟಿ 58ರ ಹರೆಯದಲ್ಲಿರುವ ನಾಗಮಣಿಯವರೂ ಇದೇ ತೆರನಾದ ಮಾತು ಹೇಳುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ 'ಥ್ಯಾಂಕ್ಸ್ ಹೇಳೋಣ ವಿಥ್ ನಾಗು' ಎನ್ನುವ ಪಾಡ್‌ಕಾಸ್ಟ್ ಕಾರ್ಯಕ್ರಮದ ಮೂಲಕ ಹೊಸ ಅಲೆ ಸೃಷ್ಟಿಸಿದ್ದಾರೆ. ಕ್ಯಾನ್ಸರ್ ಬೆನ್ನತ್ತಿದರೂ ಅಮಿತ ಜೀವನೋತ್ಸಾಹದಿಂದ ಪುಟಿದೆದ್ದಿದ್ದಾರೆ. ಹಲವರ ಬದುಕಿಗೆ ಉತ್ಸಾಹ, ಉಲ್ಲಾಸ ತುಂಬುತ್ತಿದ್ದಾರೆ.

***

ಮನುಷ್ಯನಿಗೆ ಕಲಿಕೆ ನಿರಂತರ. ಹೀಗಾಗಿಯೇ 51ನೇ ವಯಸ್ಸಿನಲ್ಲಿ ಸಂಗೀತ ತರಗತಿಗೆ ಸೇರಿಕೊಂಡೆ. ಬದುಕಿನ ಜಂಜಾಟಗಳ ನಡುವೆ ಸಮಾಧಾನ ನೀಡಿದ್ದು ಸಂಗೀತ ಮತ್ತು ಒಂದಷ್ಟು ಆಧ್ಯಾತ್ಮ. ಜಗ್ಗಿ ವಾಸುದೇವ್ ಅವರ ಭೇಟಿ ನನ್ನ ಜೀವನ ಪ್ರೀತಿಯನ್ನು ಇಮ್ಮಡಿಗೊಳಿಸಿತ್ತು.

ಕಳೆದ ಡಿಸೆಂಬರ್ 1 ರಂದು ವೈದ್ಯರ ಬಳಿ ತೆರಳಿ ತಪಾಸಣೆ ಮಾಡಿಸಿದಾಗ ಬಲಭಾಗದ ಸ್ತನದಲ್ಲಿ ಗಡ್ಡೆ ಬೆಳೆಯಲು ಆರಂಭವಾಗಿರುವುದು ತಿಳಿಯಿತು. ನನಗೆ ಸಾವಿನ ಭಯವಿಲ್ಲ. ಆದರೆ, ಚಿಕಿತ್ಸೆಯ ವೇಳೆ ಮತ್ತು ನಂತರ ಉಂಟಾಗುವ ನೋವು ಹೆಚ್ಚು ಭಯ ಹುಟ್ಟಿಸಿತ್ತು. ಇದ್ದ ಎಲ್ಲಾ ಶಕ್ತಿಯನ್ನು ಎದುರಿಗೆ ತಂದುಕೊಂಡು ಚಿಕಿತ್ಸೆಗೆ ಒಪ್ಪಿಕೊಂಡೆ. ಒಂದು ಸ್ತನವನ್ನೂ ತೆಗೆಯಬೇಕಾಯಿತು. ಅರ್ಧನಾರೀಶ್ವರನಿಗಿರುವುದೂ ಒಂದೇ ಸ್ತನ. ನೋವಿನ ನಡುವೆಯೂ ಚಿಕ್ಕ ಸಮಾಧಾನ. ಇರುವಷ್ಟು ದಿನ ನಗುತ್ತಾ ಇರಬೇಕು ಎನ್ನುವ ಭಾವ ನನ್ನದು.

ನನ್ನ ಕುಟುಂಬ ನೀಡಿದ ಧೈರ್ಯದಿಂದ ನೋವು ಗೆದ್ದ ಸಂತೋಷ ನನ್ನಲ್ಲಿದೆ. ನನ್ನಂತೆಯೇ ಕ್ಯಾನ್ಸರ್ ಇರುವವರು ಆತ್ಮವಿಶ್ವಾಸದಿಂದ ಇರಬೇಕು, ಗೆಲ್ಲಬೇಕು ಎನ್ನುವ ಯೋಚನೆಗೆ ವೇದಿಕೆಯಾಗಿದ್ದು ನಮ್ಮ ಪಾಡ್‌ಕಾಸ್ಟ್ ಕಾರ್ಯಕ್ರಮ.

ಮಾತೊಂದೇ ಬಂಡವಾಳವಾಗಿರುವ ನನಗೆ ಸದಾ ಏನಾದರೊಂದು ಮಾಡುತ್ತಿರಬೇಕು ಎನ್ನುವ ಉತ್ಸಾಹ. ಆ ಮೂಲಕ ಆರಂಭವಾಗಿದ್ದು, 'ಥ್ಯಾಂಕ್ಸ್ ಹೇಳೋಣ ವಿಥ್ ನಾಗು' ಪಾಡ್‌ಕಾಸ್ಟ್ ಕಾರ್ಯಕ್ರಮ.

ಸಾಧಕಿ



ನಾಗಮಣಿ

ಅತಿಥಿಗಳೊಂದಿಗಿನ ಮಾತುಕತೆಯ ಜತೆಗೆ ಪಾಡ್‌ಕಾಸ್ಟ್‌ನಲ್ಲಿ ಕ್ಯಾನ್ಸರ್ ಬಗೆಗಿನ ಜಾಗೃತಿ ಮೂಡಿಸಬೇಕು ಎನ್ನಿಸಿತು. ಹೀಗಾಗಿಯೇ ಸ್ತನ ಕ್ಯಾನ್ಸರ್ ಇದ್ದರೆ ಏನೆಲ್ಲಾ ಆಗತ್ತೆ, ಯಾವೆಲ್ಲಾ ರೀತಿಯ ಚಿಕಿತ್ಸೆಗಳಿರುತ್ತವೆ, ನಾನು ನೋವನ್ನು ಗೆದ್ದ ಬಗೆ ಹೇಗೆ ಎಂದು ಸ್ವ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೇನೆ. ನಮ್ಮ ಜೀವನೋತ್ಸಾಹ, ಬದುಕಿನೆಡೆಗಿನ ಪ್ರೀತಿ, ಆತ್ಮಸ್ಥೈರ್ಯ, ಆಧ್ಯಾತ್ಮಿಕತೆಯಲ್ಲಿನ ನಂಬಿಕೆ ಎಲ್ಲವನ್ನೂ ಎದುರಿಸುವ ಶಕ್ತಿ ನೀಡುತ್ತದೆ ಎನ್ನುವುದು ನನ್ನ ಭಾವ.

ನಮ್ಮ ಸಿಂಫೋನಿ ಆಂಪ್ಸ್ (SymphoNy Amps) ಯುಟ್ಯೂಬ್ ಚಾನೆಲ್, ಇನ್‌ಸ್ಟಾಗ್ರಾಮ್, ಫೇಸ್ಬುಕ್‌ನಂತಹ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ವೀಕ್ಷಕರನ್ನು ತಲುಪುವ ಪ್ರಯತ್ನ ಮಾಡುತ್ತಿದ್ದೇವೆ. ನನ್ನಂತೆ ಅದೆಷ್ಟೊ ಜನ ಕ್ಯಾನ್ಸರ್‌ಗೆ ಒಳಗಾಗಿ ಗಾಬರಿಯಿಂದ ಜೀವನವೇ ಮುಗಿದುಹೋಯಿತು ಎನ್ನುವ ಭಾವದಲ್ಲಿರುತ್ತಾರೆ. ಅಂತಹವರಿಗೆ ಧೈರ್ಯ ತುಂಬುವ ಸಣ್ಣ ಪ್ರಯತ್ನ ನನ್ನದು.

ಪಾಡ್‌ಕಾಸ್ಟ್ ಕಾರ್ಯಕ್ರಮಕ್ಕೆ 'ಥ್ಯಾಂಕ್ಸ್ ಹೇಳೋಣ ವಿಥ್ ನಾಗು' ಹೆಸರು ಸೂಚಿಸಿದ್ದು ನನ್ನ ಮಗ. 'ಅಮ್ಮಾ ನೀವು ಯಾವಾಗಲೂ, ಯಾರು ಸಿಕ್ಕಿದರೂ ಥ್ಯಾಂಕ್ಸ್, ಥ್ಯಾಂಕ್ಯೂ ಹೇಳುತ್ತಲೇ ಇರುತ್ತೀರಿ. ಹೀಗಾಗಿ ಅದನ್ನೇ ಪಾಡ್‌ಕಾಸ್ಟ್ ಹೆಸರಾಗಿಸೋಣ' ಎಂದಿದ್ದ.

ಈಗಿನ ಯುವಜನತೆಗೂ ನಾನು ಹೇಳುವುದಿಷ್ಟೆ ಇರುವುದು ಒಂದೇ ಜೀವನ, ಒತ್ತಡ, ಸವಾಲು ಸಹಜ, ಅದರೆಡೆಗೆ ಒತ್ತು ನೀಡದೆ ಇರುವಷ್ಟು ದಿನ ಖುಷಿಯಿಂದ ಸಾಗಿ. ಆಗ ಮಾತ್ರ ಬದುಕಿಗೊಂದು ಸಾರ್ಥಕತೆ ದೊರೆಯುತ್ತದೆ.

247 ಪಿಡಿಒ ಹುದ್ದೆ ಭರ್ತಿಗೆ ಕೆಪಿಎಸ್‌ಸಿ ಅಧಿಸೂಚನೆ

ಬೆಂಗಳೂರು: ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) 247 ಹುದ್ದೆಗಳ ನೇರ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

150 ಹುದ್ದೆಗಳು ಉಳಿಕೆ ಮೂಲ ವೃಂದಕ್ಕೆ ಸೇರಿದ್ದರೆ, 97 ಹುದ್ದೆಗಳು ಹೈದ್ರಾಬಾದ್-ಕರ್ನಾಟಕ ವೃಂದಕ್ಕೆ ಸೇರಿವೆ. ಏಪ್ರಿಲ್ 15ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, ಮೇ 15ಕ್ಕೆ ಮುಕ್ತಾಯವಾಗಲಿದೆ ಎಂದು ಆಯೋಗವು ತಿಳಿಸಿದೆ.

ಪದವೀಧರರು ಅರ್ಜಿ ಸಲ್ಲಿಸಬಹುದು. ಸಾಮಾನ್ಯ ವರ್ಗಕ್ಕೆ ಕನಿಷ್ಠ ವಯಸ್ಸು 18 ವರ್ಷ ಗರಿಷ್ಠ 35 ವರ್ಷ, ಹಿಂದುಳಿದ ವರ್ಗಗಳ ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿಗಳಿಗೆ 38 ವರ್ಷ ಹಾಗೂ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಪ್ರವರ್ಗ-1ರ ಅಭ್ಯರ್ಥಿಗಳಿಗೆ 40 ವರ್ಷ ಗರಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 600, ಹಿಂದುಳಿದ ವರ್ಗಗಳ ಅಭ್ಯರ್ಥಿ ಗಳಿಗೆ ₹ 300, ಮಾಜಿ ಸೈನಿಕರಿಗೆ ₹ 50 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.

ಚುನಾವಣೆ ದಿನಾಂಕ ಪ್ರಕಟಣೆ ಇಂದು

ಒಂದನೇ ಪುಟದಿಂದ...

ಅವರು ಕಳೆದೊಂದು ತಿಂಗಳಲ್ಲಿ ಉತ್ತರ ಹಾಗೂ ದಕ್ಷಿಣದ ರಾಜ್ಯಗಳಲ್ಲಿ ಚಾಲನೆ ಕೊಟ್ಟಿರುವ ಹಾಗೂ ಉದ್ಘಾಟಿಸಿರುವ ಕಾಮಗಾರಿಗಳ ಗಾತ್ರ ಸರಿಸುಮಾರು ಕೇಂದ್ರದ ಬಜೆಟ್‌ನಷ್ಟು. ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಆಕ್ರಮಣಕಾರಿ ನಾಯಕತ್ವ ಪ್ರದರ್ಶಿಸಿದ್ದ ಮೋದಿ ತಮ್ಮ ಜನಪ್ರಿಯತೆಯ ಅಲೆಯನ್ನು ಉತ್ತುಂಗಕ್ಕೆ ಏರಿಸುವಲ್ಲಿ ಯಶಸ್ಸು ಕಂಡಿದ್ದರು. ಈ ಸಲವೂ ಅದೇ ಅಲೆಯನ್ನು ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನ ನಡೆಸಿದ್ದಾರೆ. 'ಚುನಾವಣಾ ಚಾಣಕ್ಯ' ಎಂಬ ಬಿರುದನ್ನು ಬೆನ್ನಿಗಂಟಿಸಿಕೊಂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣೆ ನೆಲವನ್ನು ಹದಗೊಳಿಸುವ ಕೆಲಸದಲ್ಲಿ ತೊಡಗಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಭಾರತ ಜೋಡೊ ನ್ಯಾಯ ಯಾತ್ರೆ' ಮೂಲಕ ಹಿಂದಿ ಸೀಮೆಯ ರಾಜ್ಯಗಳಲ್ಲಿ ಪಕ್ಷದ ಮತ ಪ್ರಮಾಣ ಹೆಚ್ಚಿಸುವ ಕಸರತ್ತು ನಡೆಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಳೆದೊಂದು ತಿಂಗಳಲ್ಲಿ ವಿವಿಧ ರ‍್ಯಾಲಿಗಳಲ್ಲಿ ಭಾಗಿಯಾಗಿ ಪ್ರಚಾರ ನಡೆಸಿದ್ದಾರೆ. ಸತತ ಸೋಲು ಹಾಗೂ 'ಆಪರೇಷನ್ ಕಮಲ'ದಿಂದ ಸೋತು ಕಂಗಾಲಾಗಿರುವ ಗತಕಾಲದ ಬೃಹತ್ ಪಕ್ಷ ಕಾಂಗ್ರೆಸ್‌ಗೆ ಈ ಚುನಾವಣೆಯು ಅಳಿವು ಉಳಿವಿನ ಪ್ರಶ್ನೆಯಾಗಿದೆ. ಈ ಚುನಾವಣೆಯಲ್ಲಿ ಸ್ಥಾನ ಗಳಿಕೆಯಲ್ಲಿ ಗಣನೀಯ ಸುಧಾರಣೆ ಕಾಣದಿದ್ದರೆ ಭವಿಷ್ಯದಲ್ಲಿ ಮತ್ತೆ ತಲೆಯೆತ್ತುವುದು ಕಷ್ಟ ಎಂಬ ಅರಿವು ಹಾಗೂ ಕಳವಳದಿಂದ 'ಕೈ' ದಂಡ ನಾಯಕರು ಜಾಗರೂಕತೆಯ ನಡೆ ಇಟ್ಟಿದ್ದಾರೆ. ಈ ಚುನಾವಣೆಯು ಕಾಂಗ್ರೆಸ್ ಪಕ್ಷದ ನಾಯಕತ್ವ, ಸಂಘಟನಾ ಸಾಮರ್ಥ್ಯವನ್ನು ಅಗ್ನಿಪರೀಕ್ಷೆಗೆ ಒಡ್ಡಲಿದೆ.

ಎನ್‌ಡಿಎ ಮೈತ್ರಿಕೂಟಕ್ಕೆ 400ರ ಗಡಿ ದಾಟುವ ಗುರಿಯನ್ನು ಪ್ರಧಾನಿ ಮೋದಿ ನಿಗದಿಪಡಿಸಿದ್ದಾರೆ. ಇದಕ್ಕಾಗಿ ಆಡಳಿತಾರೂಢ ಬಿಜೆಪಿಯು ಹೊಸ ಹಾಗೂ ಹಳೆಯ ಮಿತ್ರರನ್ನು ತನ್ನ ತೆಕ್ಕೆಯೊಳಗೆ ಸೆಳೆಯಲು ಪ್ರಯತ್ನಿಸುತ್ತಿದೆ. ಕಮಲ ಪಾಳಯವು ಟಿಡಿಪಿ, ಜನಸೇನಾ ಮತ್ತು ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿಯನ್ನು ಮಿತ್ರಕೂಟಕ್ಕೆ ಸೇರಿಸುವಲ್ಲಿ ಯಶಸ್ವಿಯಾಗಿದೆ. ಬಿಜೆಡಿ ಹಾಗೂ ಅಕಾಲಿದಳವನ್ನೂ ಎನ್‌ಡಿಎಗೆ ಕರೆತಂದು ಮತ ಹಾಗೂ ನೆಲೆ ವಿಸ್ತರಿಸಲು ಬಿರುಸಿನ ಪ್ರಯತ್ನ ನಡೆಸಿದೆ.

ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಕಳೆದ ಚುನಾವಣೆಯಲ್ಲೇ ಉತ್ತುಂಗಕ್ಕೆ ಏರಿರುವ ಬಿಜೆಪಿ ಹಾಗೂ ಮಿತ್ರರು ಈ ಸಲ ದಕ್ಷಿಣದಲ್ಲಿ 'ಮ್ಯಾಜಿಕ್' ಮಾಡುವ ನಿರೀಕ್ಷೆಯಲ್ಲಿದ್ದಾರೆ. ಶ್ರೀರಾಮ ಮಂದಿರದ ಕನಸನ್ನು ಸಾಕಾರಗೊಳಿಸಿರುವ ದರಿಂದ ಮತ ಗಳಿಕೆಯಲ್ಲಿ ಏರುಗತಿ ಕಂಡು ಅಧಿಕಾರದ ಗದ್ದುಗೆಯನ್ನು ಸುಲಲಿತವಾಗಿ ಏರಬಹುದು ಎಂಬ ಅಂದಾಜಿನಲ್ಲಿ ಕಮಲ ಪಾಳಯದ ಉನ್ನತ ನಾಯಕರಿದ್ದಾರೆ.

'ಇಂಡಿಯಾ' ಮೈತ್ರಿಕೂಟವನ್ನು ನಡು ದಾರಿಯಲ್ಲಿ ಕೈ ಬಿಟ್ಟ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಎನ್‌ಡಿಎ ಕೂಟಕ್ಕೆ ಸೇರಿಕೊಂಡಿದ್ದಾರೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು 'ಇಂಡಿಯಾ'ದಿಂದ ಅಂತರ ಕಾಯ್ದುಕೊಂಡು ಪಶ್ಚಿಮ ಬಂಗಾಳದಲ್ಲಿ ಏಕಾಂಗಿಯಾಗಿ ಚುನಾವಣೆ ಎದುರಿಸಲು ಮುಂದಡಿ ಇಟ್ಟಿದ್ದಾರೆ. ಅದರ ನಡುವೆಯೂ, ಮೈತ್ರಿಕೂಟದಲ್ಲಿ ಉಳಿದಿರುವ ಮಿತ್ರರೊಂದಿಗೆ ಸೀಟು ಹಂಚಿಕೆ ಪೂರ್ಣಗೊಳಿಸಲು ಕಾಂಗ್ರೆಸ್ ಸಕಲ ಪ್ರಯತ್ನ ನಡೆಸಿದೆ. ಉತ್ತರ ಪ್ರದೇಶ, ತಮಿಳುನಾಡು, ದೆಹಲಿಯಂತಹ ರಾಜ್ಯಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಂಡಿದ್ದರೆ, ಬಿಹಾರ, ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ನಲ್ಲಿ ಕೊಡು-ಕೊಳ್ಳುವಿಕೆಯಲ್ಲಿ ಇನ್ನೂ ಸಹಮತಕ್ಕೆ ಬಂದಿಲ್ಲ.

ಕಣ್ಣೀರಿಟ್ಟ ಸಂಸದ ಸಂಗಣ್ಣ

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ಕೊಪ್ಪಳ ಸಂಸದ ಸಂಗಣ್ಣ ಕರಡಿ ಅವರು ವೇದಿಕೆಯ ಮೇಲೆಯೇ ಶುಕ್ರವಾರ ಕಣ್ಣೀರಿಟ್ಟ ಪ್ರಸಂಗ ನಡೆಯಿತು.

ನಗರದ ರೈಲು ನಿಲ್ದಾಣದಲ್ಲಿ ನಡೆದ ಯಶವಂತಪುರ–ಕಾರಟಗಿ ಎಕ್ಸ್‌ಪ್ರೆಸ್ ರೈಲು ಸಿಂಧನೂರಿನವರೆಗೆ ವಿಸ್ತರಣೆ ಉದ್ಘಾಟನಾ ಸಮಾರಂಭ ಮುಗಿದ ನಂತರ, ಬೆಂಬಲಿಗರು ಮತ್ತು ಕಾರ್ಯಕರ್ತರು ಬಂದು ಮಾತನಾಡಿಸಿದಾಗ ಭಾವುಕರಾದರು.

‘ಕ್ಷೇತ್ರದ ಇತಿಹಾಸದಲ್ಲಿ ಇದುವರೆಗೂ ಆಗದೇ ಇರುವಂತಹ ಕೆಲಸ ಮಾಡಿದ್ದೀರಿ. 30 ವರ್ಷಗಳ ಕಾಲ ಆಗದೇ ಇರುವ ರೈಲು ಮಾರ್ಗ, ಬೈಪಾಸ್ ರಸ್ತೆ ಸೇರಿದಂತೆ ಹಲವಾರು ಕೆಲಸ ಮಾಡಿದ ನಿಮಗೆ ಟಿಕೆಟ್ ನಿರಾಕರಿಸುವ ಮನಸು ಹೈಕಮಾಂಡ್‌ಗೆ ಹೇಗೆ ಬಂತು’ ಎಂದು ಕಾರ್ಯಕರ್ತರು ಪ್ರಶ್ನಿಸಿದರು. ಇದನ್ನು ಕೇಳಿದ ಸಂಸದರು ಬಿಕ್ಕಿಬಿಕ್ಕಿ ಅತ್ತರು.

‘ಇಂದಿನ ಕಾಲದಲ್ಲಿ ಪ್ರಾಮಾಣಿಕರಿಗೆ, ಕೆಲಸ ಮಾಡುವ ವ್ಯಕ್ತಿಗಳಿಗೆ ಬೆಲೆ ಇಲ್ಲದಂತಾಗಿದೆ’ ಎನ್ನುತ್ತಲೇ ಸಂಸದರು ಕಣ್ಣೀರಾದರು. ಪಕ್ಕದಲ್ಲಿದ್ದ ಮಸ್ಕಿಯ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಅವರ ಕಣ್ಣಾಲಿಗಳೂ ತೇವಗೊಂಡವು.

ಇದಕ್ಕೂ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಸಂಗಣ್ಣ ಕರಡಿ ಅವರು, ‘ಲೋಕಸಭೆ ಚುನಾವಣೆಯ ಟಿಕೆಟ್ ಕೊಡುವ ಬಗ್ಗೆ ಹೈಕಮಾಂಡ್ ತೀರ್ಮಾನವೇ ಅಂತಿಮ. ನನಗೆ ಯಾಕೆ ಟಿಕೆಟ್ ಕೊಟ್ಟಿಲ್ಲ ಎಂಬುದು ತಿಳಿಯುತ್ತಿಲ್ಲ. ಬಿಜೆಪಿ ನಾಯಕರು ಸೌಜನ್ಯಕ್ಕಾದರೂ ಫೋನ್ ಮಾಡಿ ಟಿಕೆಟ್ ನಿರಾಕರಿಸುವ ಕುರಿತು ಮಾತನಾಡಿಲ್ಲ’ ಎಂದು ತಿಳಿಸಿದರು.

ಬೆಳಗಾವಿ ಜಿಲ್ಲೆಯಲ್ಲೇ ಸಮರ್ಥರು ಇರುವಾಗ, ಹೊರಗಿನವರು ಯಾಕೆ?

ಶೆಟ್ಟರ್‌ಗೆ ಟಿಕೆಟ್: ಅತೃಪ್ತರ ಸಭೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭೆ ಕ್ಷೇತ್ರದಿಂದ ಜಗದೀಶ ಶೆಟ್ಟರ್ ಅವರಿಗೆ ಬಿಜೆಪಿ ಟಿಕೆಟ್ ಖಾತ್ರಿಯಾದ ಕಾರಣ ಟಿಕೆಟ್ ವಂಚಿತ ಮುಖಂಡರು ರಾಜ್ಯಸಭೆ ಮಾಜಿ ಸದಸ್ಯ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರ ಮನೆಯಲ್ಲಿ ಶುಕ್ರವಾರ ಗೋಪ್ಯ ಸಭೆ ನಡೆಸಿದರು.

ಟಿಕೆಟ್ ಆಕಾಂಕ್ಷಿಗಳಾದ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಅನಿಲ ಬೆನಕೆ, ವಿಧಾನ ಪರಿಷತ್ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಬೈಲಹೊಂಗಲದ ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಮತ್ತು ಅವರ ಬೆಂಬಲಿಗರು ತುರ್ತು ಸಭೆಯಲ್ಲಿ ಪಾಲ್ಗೊಂಡರು.

‘ಟಿಕೆಟ್ ಹಂಚಿಕೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಜಗದೀಶ ಶೆಟ್ಟರ್‌ಗೆ ಅವಕಾಶ ಕೊಡಬಾರದು. ಈ ಬಗ್ಗೆ ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ತರಬೇಕು ಎಂದು ಆಕಾಂಕ್ಷಿಗಳು ಸಭೆಯಲ್ಲಿ ಆಗ್ರಹಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಆದರೆ, ಇದನ್ನು ಯಾರೂ ಬಹಿರಂಗವಾಗಿ ಹೇಳಲಿಲ್ಲ.

ಸಭೆ ಬಳಿಕ ಸುದ್ದಿಗಾರರ ಜೊತೆ ಪ್ರಭಾಕರ ಕೋರೆ ಮಾತನಾಡಿ, ‘ನಾನು ಪಕ್ಷದ ಕೋರ್ ಕಮಿಟಿ ಸಭೆಗೆ ಹಾಜರು ಆಗಿರಲಿಲ್ಲ. ಪಕ್ಷ ಸಂಘಟನೆ ಕುರಿತಾಗಿ ಚರ್ಚಿಸಲು ಇಲ್ಲಿ ಸೇರಿದ್ದೇವಷ್ಟೇ. ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುವುದೋ ನೋಡೋಣ. ಶೆಟ್ಟರ್‌ಗೆ ಟಿಕೆಟ್ ನೀಡುವುದಕ್ಕೂ, ನಾವು ಸೇರಿದ್ದಕ್ಕೂ ಸಂಬಂಧವಿಲ್ಲ’ ಎಂದರು.

‘ನಾವು ಯಾರನ್ನೂ ವಿರೋಧಿಸಲು ಸಭೆ ನಡೆಸಿಲ್ಲ’ ಎಂದು ಈರಣ್ಣ ಕಡಾಡಿ ತಿಳಿಸಿದರು. ಶಾಸಕ ಅಭಯ ಪಾಟೀಲ, ‘ಸ್ಥಳೀಯವಾಗಿ ಅನೇಕರು ಸಮರ್ಥರಿದ್ದಾರೆ. ಸ್ಥಳೀಯರಿಗೆ ಕೊಡಬೇಕೆಂದು ಕಾರ್ಯಕರ್ತರ ಅಪೇಕ್ಷೆ. ರಾಷ್ಟ್ರೀಯ ನಾಯಕರು ಯಾರಿಗೆ ಟಿಕೆಟ್ ನೀಡುತ್ತಾರೆ ಎಂದು ಹೇಳುವವರೆಗೆ ಪ್ರತಿಕ್ರಿಯಿಸುವುದಿಲ್ಲ’ ಎಂದರು.

ಪಕ್ಷದ ರಾಜ್ಯ ವಕ್ತಾರ ಎಂ.ಬಿ. ಝಿರಲಿ, ವಿರೂಪಾಕ್ಷ ಮಾಮನಿ, ರಾಜೇಂದ್ರ ಹರಕುಣಿ ಇದ್ದರು.

ಶೆಟ್ಟರ್ ಪರ ಪ್ರಚಾರ: ಸಂಸದೆ

‘ಬೆಳಗಾವಿಯಲ್ಲಿ ಜಗದೀಶ ಶೆಟ್ಟರ್ ಅವರಿಗೆ ಟಿಕೆಟ್ ಕೊಟ್ಟರೆ, ನನ್ನ ಅಭ್ಯಂತರ ಇಲ್ಲ. ಅವರ ಪರ ನಾನೂ ಪ್ರಚಾರ ಮಾಡುವೆ’ ಎಂದು ಸಂಸದೆ ಮಂಗಲಾ ಅಂಗಡಿ ಹೇಳಿದರು.

‘ಪಕ್ಷದ ವರಿಷ್ಠರ ಭೇಟಿಗೆಂದೇ ನಾವು ದೆಹಲಿಗೆ ಹೋಗಿದ್ದೆವು. ಅಷ್ಟರೊಳಗೆ ಶೆಟ್ಟರ್ ಅವರಿಗೆ ಟಿಕೆಟ್ ನೀಡುವ ಬಗ್ಗೆ ನಿರ್ಧರಿಸಿದ್ದು ಗೊತ್ತಾಯಿತು. ಅದಕ್ಕೆ ಯಾರನ್ನೂ ಭೇಟಿಯಾಗಲಿಲ್ಲ. ಬಿಜೆಪಿಯ ಎರಡನೇ ಪಟ್ಟಿಯಲ್ಲಿ ನಮ್ಮ ಹೆಸರು ಬಂದಿಲ್ಲ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನನ್ನ ಇಬ್ಬರು ಹೆಣ್ಣುಮಕ್ಕಳಲ್ಲಿ ಒಬ್ಬರಿಗೆ ಟಿಕೆಟ್ ಕೊಡಬೇಕು ಎಂಬುದು ನನ್ನ ಆಸೆಯಾಗಿತ್ತು. ಆದರೆ, ಹೈಕಮಾಂಡ್ ನಿರ್ಧಾರ ಬೇರೆಯದ್ದೇ ಇದೆ’ ಎಂದರು. ‘ಖುಷಿಯಿಂದಲೇ ಬಿಜೆಪಿ ಟಿಕೆಟ್ ಬಿಟ್ಟುಕೊಡುವಿರಾ’ ಎಂಬ ಪ್ರಶ್ನೆಗೆ, ‘ಪರಿಸ್ಥಿತಿ ಹಾಗೇ ಬಂದಿದೆ. ಏನೂ ಮಾಡಲಾಗದು’ ಎಂದು ನಕ್ಕರು.

> **ಒಳಗಿನವರು, ಹೊರಗಿನವರು ಎಂಬ ಪ್ರಶ್ನೆ ಬರಲ್ಲ. ಅಲ್ಲಿನ ಕೆಲ ನಾಯಕರು ದೂರವಾಣಿ ಕರೆ ಮಾಡಿ, ನನ್ನನ್ನು ಸ್ವಾಗತಿಸಿದ್ದಾರೆ**
> **ಜಗದೀಶ ಶೆಟ್ಟರ್,** ಬಿಜೆಪಿ ನಾಯಕ

ಕೃಷ್ಣಮೂರ್ತಿಗೆ ಸಚಿವ ಸ್ಥಾನ ತಪ್ಪಿಸಿದ್ದು ಸಿದ್ದರಾಮಯ್ಯ

ನಂಬಿ ಮೋಸಹೋದೆ: ಎಚ್‌.ಡಿ.ಡಿ

ಕಡೂರು (ಚಿಕ್ಕಮಗಳೂರು): ‘ಸಿದ್ದರಾಮಯ್ಯ ಅವರನ್ನು ಜನತಾ ದಳಕ್ಕೆ ಕರೆತಂದು ತಪ್ಪು ಮಾಡಿದೆ. ಮೋಸ ಮಾಡುತ್ತಾನೆ ಎಂದು ರಾಮಕೃಷ್ಣ ಹೆಗಡೆ ಹೇಳಿದರೂ ನಾನು ಕೇಳಲಿಲ್ಲ. ಕೊನೆಗೂ ಮೋಸವಾಯಿತು’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಹೇಳಿದರು.

ಕಡೂರಿನ ಶಾಸಕರಾಗಿದ್ದ ಕೆ.ಎಂ.ಕೃಷ್ಣಮೂರ್ತಿ ಅವರು ಸಹೋದರನ ಪುತ್ರ ಚೇತನ್ ಕೆಂಪರಾಜು ಅವರ ಮನೆಗೆ ಭೇಟಿ ನೀಡಿದ್ದ ಅವರು, ‘ಕೆ.ಎಂ.ಕೃಷ್ಣಮೂರ್ತಿ ಅವರನ್ನು ಮಂತ್ರಿ ಮಾಡಲು ಅವಕಾಶ ಇತ್ತು. ಅವರು ನನ್ನ ಒಡನಾಡಿ, ಅಭಿಮಾನಿ ಎಂಬ ಕಾರಣಕ್ಕೆ ಸಚಿವ ಸ್ಥಾನ ನೀಡಲು ಸಿದ್ದರಾಮಯ್ಯ ಅವಕಾಶ ನೀಡಲಿಲ್ಲ’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಕೆಪಿಎಸ್‌ಸಿ ಸದಸ್ಯರನ್ನಾಗಿ ಮಾಡುವ ಅವಕಾಶ ಬಂದಾಗಲೂ ಅವಕಾಶ ನೀಡಲಿಲ್ಲ. ಮುಕುಡಪ್ಪ ಅವರನ್ನು ಮಾಡುತ್ತೇನೆ, ಇವರನ್ನು ಮಾಡಲ್ಲ ಎಂದು ಸಿದ್ದರಾಮಯ್ಯ ಪಟ್ಟು ಹಿಡಿದರು. ಈ ಮಾತನ್ನು ಇಂದು ಹೇಳುತ್ತೇನೆ, ನಾಳೆಯೂ ಹೇಳುತ್ತೇನೆ, ನಾಡಿದ್ದೂ ಹೇಳುತ್ತೇನೆ. ಮಾತನಾಡಲು ಇನ್ನೂ ಬೇಕಾದಷ್ಟಿದೆ. ನನಗೀಗ 91 ವರ್ಷ ವಯಸ್ಸು, ಸುಳ್ಳು ಹೇಳಿದರೆ ದೇವರು ಒಳ್ಳೆಯದು ಮಾಡುವುದಿಲ್ಲ’ ಎಂದರು.

‘ನಾನು ಸಿದ್ದರಾಮಯ್ಯ ಅವರನ್ನು ಕರೆತಂದಾಗ ಹೆಗಡೆಗೂ ನನಗೂ ಗಲಾಟೆಯೇ ಆಯಿತು. ಇವನನ್ನು ನಂಬಬೇಡ, ನಿನಗೆ ಮೋಸ ಮಾಡುತ್ತಾನೆ. ವಾಲ್ಮೀಕಿ ಸಮುದಾಯದ ತಿಪ್ಪೇಸ್ವಾಮಿಗೆ ಅವಕಾಶ ನೀಡು ಎಂದು ಹೆಗಡೆ ಅವರು ತಮ್ಮ ಮನೆಯಲ್ಲೇ ಕೂರಿಸಿಕೊಂಡು ನನ್ನ ಕೈ ಹಿಡಿದು ಹೇಳಿದರು. ನಾನು ಕೇಳಲಿಲ್ಲ, ಕೊನೆಗೆ ಮೋಸಹೋದೆ’ ಎಂದು ಹೇಳಿದರು.

ಮೇಜು ಗುದ್ದಿ ದೇವೇಗೌಡ ಆಕ್ರೋಶ: ‘ಸಿದ್ದರಾಮಯ್ಯ ಅವರ ಕೆಟ್ಟ ಆಡಳಿತ ಕೊನೆಗಾಣಬೇಕು, ಅದನ್ನು ಮಾಡಲು ದೇವೇಗೌಡನಿಗೆ ಇನ್ನೂ ಶಕ್ತಿ ಇದೆ’ ಎಂದು ದೇವೇಗೌಡ ಮೇಜು ಗುದ್ದಿ ಆಕ್ರೋಶ ವ್ಯಕ್ತಪಡಿಸಿದರು.

ಕಡೂರಿನಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ನಂಬಿದವರನ್ನು ನಾನೆಂದೂ ಕೈಬಿಟ್ಟಿಲ್ಲ. ಈ ಹಿಂದೆ ಕೆ.ಎಂ.ಕೃಷ್ಣಮೂರ್ತಿ ಅವರನ್ನು ಮಂತ್ರಿ ಮಾಡಲು ಮುಂದಾಗಿದ್ದೆವು. ಆಗ ಸಿದ್ದರಾಮಯ್ಯ ಹಟ ಹಿಡಿದು ಅಡ್ಡಿಪಡಿಸಿದರು. ಶಿವಣ್ಣ ಅವರನ್ನು ಮಂತ್ರಿ ಮಾಡಿಸಿದರು’ ಎಂದು ಹೇಳಿದರು.

‘ಹೃದಯ ಬಗೆದರೆ ಮೋದಿ ಕಾಣ್ತಾರೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ’ನನ್ನ ಹೃದಯ ಬಗೆದರೆ ಅಲ್ಲಿ ಶ್ರೀರಾಮ ಹಾಗೂ ನರೇಂದ್ರ ಮೋದಿ ಕಾಣಸಿಗುತ್ತಾರೆ. ಯಡಿಯೂರಪ್ಪ ಅವರ ಎದೆ ಬಗೆದರೆ ಅಲ್ಲಿ ಅವರ ಮಕ್ಕಳು ಹಾಗೂ ಶೋಭಾ ಕರಂದ್ಲಾಜೆ ಕಾಣಿಸುತ್ತಾರೆ ಎಂದು ಕಾರ್ಯಕರ್ತರು ಮಾತಾಡಿಕೊಳ್ಳುತ್ತಾರೆ’ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಶುಕ್ರವಾರ ಇಲ್ಲಿ ಛೇಡಿಸಿದರು.



ಶಿವಮೊಗ್ಗದಲ್ಲಿ ಶುಕ್ರವಾರ ಸಂಜೆ ನಡೆದ ಬೆಂಬಲಿಗರ ಸಭೆಯಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್‌.ಈಶ್ವರಪ್ಪ ಮಾತನಾಡಿದರು

ಪುತ್ರ ಕಾಂತೇಶ ಅವರಿಗೆ ಹಾವೇರಿ-ಗದಗ ಲೋಕಸಭಾ ಕ್ಷೇತ್ರದಿಂದ ಟಿಕೆಟ್ ಸಿಗದಿರುವ ಕಾರಣಕ್ಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧ ಹರಿಹಾಯ್ದಿದ್ದ ಈಶ್ವರಪ್ಪ, ತಾವು ಪಕ್ಷೇತರರಾಗಿ ಸ್ಪರ್ಧಿಸುವ ಕುರಿತು ಬೆಂಬಲಿಗರು, ಅಭಿಮಾನಿಗಳಿಂದ ಅಭಿಪ್ರಾಯ ಸಂಗ್ರಹಣಾ ಸಭೆ ನಡೆಸಿದ ಬಳಿಕ ಪ್ರಕಟಿಸಿದರು.

‘ಪಕ್ಷೇತರರಾಗಿ ಸ್ಪರ್ಧಿಸಿದರೆ ಬಿಜೆಪಿಯಿಂದ ನೋಟಿಸ್ ಕೊಡಬಹುದು. ಇಲ್ಲವೇ ಉಚ್ಚಾಟನೆ ಮಾಡಬಹುದು. ಚುನಾವಣೆಯಲ್ಲಿ ಗೆಲುವು ಸಾಧಿಸಿದರೆ, ಎರಡು ತಿಂಗಳಲ್ಲಿಯೇ ಮತ್ತೆ ಪಕ್ಷಕ್ಕೆ ಮರಳಿ ಸೇರಿಸಿಕೊಳ್ಳುತ್ತಾರೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಭಾಷಣದ ಉದ್ದಕ್ಕೂ ಬಿ.ಎಸ್. ಯಡಿಯೂರಪ್ಪ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು.

‘ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿದರೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ನಿಂತ ರೀತಿ ಆಗಲಿದೆ. ಹೀಗಾಗಿ ಕಾಂತೇಶ ಅವರಿಗೇ ಹಾವೇರಿ ಕ್ಷೇತ್ರದಿಂದ ಮತ್ತೆ ಟಿಕೆಟ್‌ಗೆ ಪ್ರಯತ್ನಿಸೋಣ’ ಎಂದು ಕೆಲವು ಬೆಂಬಲಿಗರು ಸಲಹೆ ನೀಡಿದರು.

‘ಗೆಲ್ಲದಿದ್ದರೂ ಪರವಾಗಿಲ್ಲ. ಅನ್ಯಾಯ ಎಸಗಿದವರನ್ನು ಸೋಲಿಸುವ ಶಕ್ತಿ ನಿಮಗೆ ಇದೆ. ಚುನಾವಣೆಗೆ ನಿಂತುಕೊಳ್ಳಿ ಬೆಂಬಲಿಸುತ್ತೇವೆ’ ಎಂದು ಇನ್ನೂ ಕೆಲವರು ಹುರಿದುಂಬಿಸಿದರು.

ರಸ್ತೆ ಬದಿ ಎಳನೀರು ಕುಡಿದು, ಊಟ ಮಾಡಿದ ಯದುವೀರ

ಮಡಿಕೇರಿ: ಲೋಕಸಭಾ ಚುನಾವಣೆಯ ಮೈಸೂರು– ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಶುಕ್ರವಾರ ಕೊಡಗಿಗೆ ಬಂದು ರಸ್ತೆಬದಿ ಎಳನೀರು ಕುಡಿದು, ಕಾರ್ಯಕರ್ತರೊಂದಿಗೆ ನಿಂತುಕೊಂಡು ಊಟ ಮಾಡಿದರು.

ಇದಕ್ಕೂ ಮುನ್ನ ಅವರು ಕುಶಾಲನಗರದ ಕೊಪ್ಪ ಸೇತುವೆ ಬಳಿ ಕಾವೇರಿ ಮಾತೆಯ ಪ್ರತಿಮೆಗೆ ಪೂಜೆ ಸಲ್ಲಿಸಿದರು. ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯಗೌಡ ಅವರ ಪ್ರತಿಮೆಗಳಿಗೆ ಪುಷ್ಪನಮನ ಸಲ್ಲಿಸಿದರು.

‘ರಾಜವಂಶಸ್ಥರು ಜನಸಾಮಾನ್ಯರಿಗೆ ಸಿಗುವುದಿಲ್ಲ’ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿ, ‘ಸಾರ್ವಜನಿಕ ಜೀವನಕ್ಕೆ ಬಂದ ಮೇಲೆ ಎಲ್ಲರಿಗೂ ಲಭ್ಯರಾಗಬೇಕಾಗುತ್ತದೆ’ ಎಂದರು.

‘ಸಂಸದ ಪ್ರತಾಪ ಸಿಂಹ ಈಗಾಗಲೇ ಶುಭಾಶಯ ಕೋರಿದ್ದು, ಪ್ರಚಾರ ಕಾರ್ಯದಲ್ಲಿ ಭಾಗಿಯಾಗುತ್ತಾರೆ ಎಂಬ ನಿರೀಕ್ಷೆ ಇದೆ. ಅವರು 10 ವರ್ಷ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವೆ’ ಎಂದರು.



ಮಡಿಕೇರಿಯಲ್ಲಿ ಶುಕ್ರವಾರ ರಸ್ತೆಬದಿಯಲ್ಲಿ ಎಳನೀರು ಕುಡಿದ ಯದುವೀರ ಒಡೆಯರ್

ಇದಕ್ಕೂ ಮುನ್ನ ಅವರು ಇಲ್ಲಿ ನಡೆದ ಬಿಜೆಪಿಯ ಹಿಂದುಳಿದ ವರ್ಗಗಳ ಮೋರ್ಚಾದ ಸಭೆಯಲ್ಲಿ ಭಾಗಿಯಾಗಿ, ‘ಪ್ರಕೃತಿಗೆ ಪೂರಕವಾದ ಅಭಿವೃದ್ಧಿ ಯೋಜನೆಗಳನ್ನು ಕೊಡಗಿನಲ್ಲಿ ಜಾರಿಗೆ ತರುವೆ’ ಎಂದು ಭರವಸೆ ನೀಡಿದರು.

ಸೋಮಣ್ಣ ಭೇಟಿಗೆ ಮಾಧುಸ್ವಾಮಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ಟಿಕೆಟ್ ಸಿಗದೆ ಅಸಮಾಧಾನಗೊಂಡಿರುವ ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ತುಮಕೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಭೇಟಿಯಾಗಲು ನಿರಾಕರಿಸಿದ್ದಾರೆ.

ಮಾಧುಸ್ವಾಮಿ ಅವರಿಗೆ ಗುರುವಾರ ಕರೆ ಮಾಡಿ ಮಾತನಾಡಿದೆ. ಅವರು ಬೇಜಾರಿನಲ್ಲಿ ಮಾತನಾಡಿದರು. ‘ಮನೆಗೆ ಬರಬೇಡ’ ಎಂದರು. ‘ನಾಲ್ಕು ದಿನಗಳ ಕಳೆದ ನಂತರ, ನಿನ್ನಲ್ಲಿನ ದುಗುಡ ಕಡಿಮೆ ಆದ ಮೇಲೆ ಬರುತ್ತೇನೆ’ ಎಂದು ಹೇಳಿದೆ. ಮುಂದಿನ ದಿನಗಳಲ್ಲಿ ಅವರ ಮನೆಗೆ ಭೇಟಿ ನೀಡಿ, ಚರ್ಚಿಸಲಾಗುವುದು ಎಂದು ವಿ.ಸೋಮಣ್ಣ ಪ್ರತಿಕ್ರಿಯಿಸಿದರು.

ನಗರದ ಸಿದ್ಧಗಂಗಾ ಮಠಕ್ಕೆ ಶುಕ್ರವಾರ ಭೇಟಿ ನೀಡಿ ಶಿವಕುಮಾರ ಸ್ವಾಮೀಜಿ ಗದ್ದುಗೆ ದರ್ಶನ ಪಡೆದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

‘ಹೈಕಮಾಂಡ್ ನಾಯಕರು ಜಿಲ್ಲೆಯ ಮುಖಂಡರ ಅಸಮಾಧಾನ ಶಮನಗೊಳಿಸುವ ಕೆಲಸ ಮಾಡುತ್ತಾರೆ. ಮಾಧುಸ್ವಾಮಿಗೆ ಟಿಕೆಟ್ ನೀಡಿದ್ದರೂ ಎಲ್ಲರು ಒಟ್ಟಾಗಿ ಕೆಲಸ ಮಾಡುತ್ತಿದ್ದೆವು’ ಎಂದರು.

‘ನಂಬಿಸಿ ಕೈ ಬಿಟ್ಟ ಯಡಿಯೂರಪ್ಪ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಮನೆಯಲ್ಲಿ ಕುಳಿತಿದ್ದವರನ್ನು ಸ್ಪರ್ಧೆಗೆ ತಯಾರಾಗಿ ಅಂತ ಹೇಳಿ ಈಗ ನಡು ನೀರಿನಲ್ಲಿ ಬಿ.ಎಸ್ ಯಡಿಯೂರಪ್ಪ ಕೈ ಬಿಟ್ಟಿದ್ದಾರೆ’ ಎಂದು ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.



ಜೆ.ಸಿ. ಮಾಧುಸ್ವಾಮಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಜೆ.ಸಿ.ಪುರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಡಿಯೂರಪ್ಪ ಅವರಿಗೆ ಬೇಕಾದ ಎರಡು–ಮೂರು ಕ್ಷೇತ್ರಗಳನ್ನು ಹಟ ಮಾಡಿ ತೆಗೆದುಕೊಂಡಿದ್ದಾರೆ. ನನಗೆ ಯಾಕೆ ಟಿಕೆಟ್ ಕೊಡಿಸಲಿಲ್ಲ. ಸೋಮಣ್ಣ ರಾಜ್ಯಸಭೆ ಟಿಕೆಟ್‌ಗಾಗಿ ನವದೆಹಲಿ ತನಕ ಹೋಗಿ ಬಂದರು. ಅಲ್ಲಿ ಟಿಕೆಟ್ ಕೈ ತಪ್ಪಿದರೆ ಇಲ್ಲಿ ಕೊಡಬಹುದಾ? ಅವರೇನು ಈ ಕ್ಷೇತ್ರದ ಸಂಬಂಧಿಕರಾ, ನೆಂಟರಾ’ ಎಂದು ಪ್ರಶ್ನಿಸಿದರು.

‘ಯಡಿಯೂರಪ್ಪ ಅವರು ನಾನು ದೆಹಲಿಗೆ ಹೋಗುವುದನ್ನು ತಡೆದಿದ್ದರು. ನಿನಗೆ ಬಿ.ಫಾರ್ಮ್ ತಂದು ಕೊಡುವ ಜವಾಬ್ದಾರಿ ನನ್ನದು ಅಂತ ಹೇಳಿದ್ದರು. ಸೋಮಣ್ಣನ ನಾಲಿಗೆಗೆ, ಬೈಗುಳಕ್ಕೆ ಯಡಿಯೂರಪ್ಪ ಹೆದರಿಕೊಂಡು ನನ್ನ ಬಲಿ ಮಾಡಿದರು. ಆ ನೋವು ನನಗಿದೆ. ಅಪ್ಪ ಮಕ್ಕಳಿಗೆ ಸ್ವಹಿತಾಸಕ್ತಿಯೇ ಹೆಚ್ಚಾಗಿರಬಹುದು’ ಎಂದು ಕಿಡಿಕಾರಿದರು.

‘ಸೋಮಣ್ಣ ಅವರನ್ನು ಮನೆಗೆ ಬರಬೇಡಿ ಅಂತ ಹೇಳುವಷ್ಟು ಕೆಟ್ಟ ಮನುಷ್ಯ ಅಲ್ಲ. ನನ್ನ ಮನಃಸ್ಥಿತಿ ಸರಿಯಾಗಿಲ್ಲ. ಇಂತಹ ಸಮಯದಲ್ಲಿ ಬರುವುದು ಬೇಡ ಎಂದು ಹೇಳಿದೆ. ನಾನು ಯಾವುದೇ ಮಾತುಕತೆಗೆ ಸಿದ್ಧನಿಲ್ಲ. ಅವರು ಬರುತ್ತಾರೆ ಅಂತ ನಡೆಮುಡಿ ಹಾಸಿಕೊಂಡು ಕುಳಿತುಕೊಳ್ಳಲು ಆಗುತ್ತಾ’ ಎಂದು ಪ್ರಶ್ನಿಸಿದರು.

‘ಸೋಮಣ್ಣ ಪರವಾಗಿ ನಾವು ಪ್ರಚಾರ ಮಾಡುವುದಿಲ್ಲ. ಹೊರಗಿನಿಂದ ಬಂದವರಿಗೆ ಬೆಂಬಲ ನೀಡುವುದಿಲ್ಲ. ಕಾರ್ಯಕರ್ತರು ತಟಸ್ಥವಾಗಿ ಇರೋಣ ಎಂದರೆ ತಟಸ್ಥವಾಗಿ ಇರುತ್ತೇನೆ. ಚುನಾವಣೆ ದಿನಾಂಕ ಘೋಷಣೆಯಾದ ನಂತರ ಕಾರ್ಯಕರ್ತರ ಸಭೆ ಮಾಡಿ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತೇನೆ’ ಎಂದರು.

ಮನೆ ಆಳುಗಳಲ್ಲ: ‘ನಾವು ಬಿಜೆಪಿ ಪಕ್ಷದವರು, ಸಂಸದ ಜಿ.ಎಸ್.ಬಸವರಾಜು ಮನೆ ಆಳುಗಳಲ್ಲ’ ಎಂದು ಮಾಧುಸ್ವಾಮಿ ಇದೇ ಸಂದರ್ಭದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಗೆಲ್ಲಿಸುವುದು ಬಸವರಾಜು ಉದ್ದೇಶ. ನಾನು ಸ್ಪರ್ಧೆ ಮಾಡಿದರೆ ಸೋಲಿಸಲು ಆಗಲ್ಲ ಅಂತ ಅಭ್ಯರ್ಥಿ ಬದಲಾವಣೆ ಮಾಡಿದ್ದಾರೆ. ಈ ಹಿಂದಿನ ವಿಧಾನ ಪರಿಷತ್, ವಿಧಾನಸಭಾ ಚುನಾವಣೆಯಲ್ಲಿ ಉದ್ದೇಶಪೂರ್ವಕವಾಗಿ ಭಾಷಣ ಮಾಡಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ’ ಎಂದು ಆರೋಪಿಸಿದರು.

ಟಿಕೆಟ್ ಗೊಂದಲ ಸಹಜ, ಎಲ್ಲವೂ ಸರಿಯಾಗಲಿವೆ: ಆರ್. ಅಶೋಕ

ದಾವಣಗೆರೆ: ‘ಟಿಕೆಟ್ ಕೊಟ್ಟ ಮೇಲೆ ಎಲ್ಲ ಕಡೆ ಗೊಂದಲಗಳು ಇದ್ದೇ ಇರುತ್ತವೆ. ಒಂದು ವಾರ ಕಳೆದ ನಂತರ ಎಲ್ಲವೂ ಸರಿಯಾಗುತ್ತವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.



ಆರ್‌.ಅಶೋಕ

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿಗೆ ಟಿಕೆಟ್ ನೀಡಿದ್ದು ಹೈಕಮಾಂಡ್. ಏನೇ ಗೊಂದಲ ಇದ್ದರೂ ಅದನ್ನು ಪರಿಹರಿಸಲಾಗುವುದು. ಯಾರೂ ಬಂಡಾಯ ಏಳುವ ಪರಿಸ್ಥಿತಿ ಇಲ್ಲ’ ಎಂದರು.

‘ಮಾಜಿ ಸಚಿವರಾದ ಎಂ.ಪಿ. ರೇಣುಕಾಚಾರ್ಯ, ಎಸ್‌.ಎ. ರವೀಂದ್ರನಾಥ್ ಅವರೊಂದಿಗೆ ಮಾತನಾಡುತ್ತೇನೆ. ರೇಣುಕಾಚಾರ್ಯ ಸಿದ್ದೇಶ್ವರ ಅವರ ಶಿಷ್ಯ, ವಿಧಾನಸಭೆ ಚುನಾವಣೆಯ ಗೊಂದಲದಿಂದ ಹೀಗೆ ಆಗಿದೆ’ ಎಂದರು.

‘ಕೆ.ಎಸ್. ಈಶ್ವರಪ್ಪ ಅವರ ಪುತ್ರನಿಗೆ ಟಿಕೆಟ್ ಸಿಕ್ಕಿಲ್ಲ ಎಂದು ಮಾತನಾಡಿರಬಹುದು. ಕೇಂದ್ರ ನಾಯಕರು ಈಗಾಗಲೇ ಈಶ್ವರಪ್ಪ ಅವರನ್ನು ಸಂಪರ್ಕಿಸಿದ್ದಾರೆ. ಚುನಾವಣೆಗೆ ಯಾವುದೇ ತೊಂದರೆಯಾಗುವುದಿಲ್ಲ. ದೇಶದಲ್ಲಿ 400ಕ್ಕೂ ಹೆಚ್ಚು ಸೀಟ್ ಗೆಲ್ಲಲು ಹೊರಟಿದ್ದೇವೆ. ಎಲ್ಲವನ್ನೂ ಸರಿಪಡಿಸಿಕೊಂಡು ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡುವುದು ನಮ್ಮ ಗುರಿ’ ಎಂದರು.

‘25ರ ಬಳಿಕ ಮಂಡ್ಯ ಅಭ್ಯರ್ಥಿ ನಿರ್ಧಾರ’

ಪ್ರಜಾವಾಣಿ ವಾರ್ತೆ

ಮಂಡ್ಯ: ನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ ಜೆಡಿಎಸ್ ಪೂರ್ವಭಾವಿ ಸಭೆಯು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು.

‘ಲೋಕಸಭಾ ಚುನಾಣೆಯಲ್ಲಿ ಮೈತ್ರಿ ಅಭ್ಯರ್ಥಿಯಾಗಿ ಎಚ್‌.ಡಿ.ಕುಮಾರಸ್ವಾಮಿ ಅಥವಾ ನಿಖಿಲ್ ಸ್ಪರ್ಧಿಸಬೇಕು, ಈ ಬಗ್ಗೆ ಈಗಲೇ ಸ್ಪಷ್ಟಪಡಿಸಬೇಕು’ ಎಂದು ಕಾರ್ಯಕರ್ತರು ಪಟ್ಟು ಹಿಡಿದರು. ಅವರ ಆಗ್ರಹವನ್ನು ನಿಖಿಲ್ ಸ್ಪಷ್ಟವಾಗಿ ನಿರಾಕರಿಸಿದರೆ, ‘ಮಾರ್ಚ್ 21ರಂದು ನಡೆಯಲಿರುವ ನನ್ನ ಶ್ವಾಸಕೋಶದ ಶಸ್ತ್ರಚಿಕಿತ್ಸೆಯ ನಂತರ ನಿರ್ಧರಿಸಲಾಗುವುದು’ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಇಬ್ಬರೂ ವೇದಿಕೆಗೆ ಬರುತ್ತಿದ್ದಂತೆ, ‘ಕುಮಾರಣ್ಣ, ನಿಖಿಲಣ್ಣ ಇಬ್ಬರಲ್ಲಿ ಒಬ್ಬರು ನಿಲ್ಲಬೇಕು’ ಎಂದು ಕಾರ್ಯಕರ್ತರು ಆಗ್ರಹಿಸಿದರು. ಸಭಾಂಗಣದಲ್ಲಿ ಜಾಗ ಸಿಗದೆ ಹೊರಗೆ ಪರದೆಯಲ್ಲಿ ಕಾರ್ಯಕ್ರಮ ವೀಕ್ಷಿಸುತ್ತಿದ್ದ ಜನರೂ ಘೋಷಣೆ ಕೂಗಿದರು.

ಉದ್ಘಾಟನೆ, ಸ್ವಾಗತ ಭಾಷಣಕ್ಕೂ ಅವಕಾಶ ನೀಡದ ಕಾರ್ಯಕರ್ತರು ಘೋಷಣೆ ಕೂಗುತ್ತಲೇ ಇದ್ದರು. ಅವರನ್ನು ಸಮಾಧಾನಪಡಿಸಲು ಕುಮಾರಸ್ವಾಮಿ ಹರಸಾಹಸಪಟ್ಟರು. ನಂತರ ಮಾತನಾಡಿದ ಜೆಡಿಎಸ್ ಮುಖಂಡರು ಕೂಡ ‘ಇಬ್ಬರಲ್ಲಿ ಒಬ್ಬರು ಸ್ಪರ್ಧಿಸಬೇಕು’ ಎಂದು ಒತ್ತಾಯಿಸಿದರು.

ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ‘ಕುಮಾರಸ್ವಾಮಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಕೇಂದ್ರ ಕೃಷಿ ಸಚಿವರಾಗಬೇಕು’ ಎಂದರು.

ಉತ್ತರ ಕೊಟ್ಟ ನಾಯಕರು: ನಂತರ ನಿಖಿಲ್ ಮಾತನಾಡಿ, ‘ಕುಮಾರಣ್ಣನವರು ಚಿಕಿತ್ಸೆ ಪಡೆಯುವಾಗ ಅವರ ಜವಾಬ್ದಾರಿಗಳನ್ನು ನನ್ನ ಹೆಗಲ ಮೇಲೆ ಹಾಕಿಕೊಂಡು ರಾಜ್ಯ ಸುತ್ತಬೇಕು. ಪಕ್ಷ ಉಳಿಸುವ ಜವಾಬ್ದಾರಿ ನನ್ನದೆಂದು ಅಪ್ಪನಿಗೆ ಮಾತು ಕೊಟ್ಟಿದ್ದೇನೆ. ಹೀಗಾಗಿ ಈ ಚುನಾವಣೆಗೆ ನಿಲ್ಲಲು ಮಾತು ಕೊಟ್ಟು ಮೋಸ ಮಾಡಲು ನಾನು ತಯಾರಿಲ್ಲ’ ಎಂದರು.

‘ನನ್ನ ಹಣೆಯಲ್ಲಿ ಬರೆದ ದಿನ ಎಂಎಲ್‌ಎನೋ, ಎಂಪಿನೋ ಆಗುತ್ತೇನೆ. ಎಲ್ಲದಕ್ಕೂ ಯೋಗ, ಯೋಗ್ಯತೆ ಇರಬೇಕು. ಅಧಿಕಾರ, ಸ್ಥಾನ ಬರುವವರೆಗೂ ಕಾಯುತ್ತೇನೆ’ ಎಂದು ಭಾವುಕರಾದರು.

ಕುಮಾರಸ್ವಾಮಿ ಮಾತನಾಡಿ ‘ಕಳೆದ ಚುನಾವಣೆಯಲ್ಲಿ ನಿಖಿಲ್ ಸೋಲನ್ನು ನಾನು ಒಪ್ಪುವುದಿಲ್ಲ. ಎಲ್ಲರೂ ಸೇರಿ ಕುತಂತ್ರ ಮಾಡಿ ಮಗನನ್ನು ಸೋಲಿಸಿದರು. ಸುಮಲತಾ ವಿರುದ್ಧ ಮಾತನಾಡುವುದಿಲ್ಲ, ಅವರು ನನ್ನ ಅಕ್ಕ ಇದ್ದಂತೆ. ಈಗಿನ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರ ಕಳೆದುಕೊಂಡರೆ ನಾವು ಬದುಕಿದ್ದೂ ಸತ್ತಂತೆ. ನನ್ನ ಹೃದಯ ಮಂಡ್ಯಕ್ಕಾಗಿ ಮಿಡಿಯುತ್ತಿದ್ದು ಈ ಚುನಾವಣೆ ಗೆಲ್ಲಲೇಬೇಕು’ ಎಂದು ಶಪಥ ಮಾಡಿದರು.

‘ಹಾವೇರಿ ಅಭ್ಯರ್ಥಿ ಬದಲಾವಣೆಗೆ ಅವಕಾಶವಿದೆ’



ಶಿವಮೊಗ್ಗ: ‘ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬದಲಾವಣೆಗೆ ಇನ್ನೂ ಅವಕಾಶವಿದೆ. ಕೆ.ಎಸ್. ಈಶ್ವರಪ್ಪ ಅವರ ಪುತ್ರ ಕೆ.ಈ. ಕಾಂತೇಶ್ ಅವರಿಗೆ ಟಿಕೆಟ್ ಕೊಡುವಂತೆ ದೆಹಲಿಗೆ ತೆರಳಿ ಪಕ್ಷದ ವರಿಷ್ಠರೊಂದಿಗೆ ಚರ್ಚಿಸುತ್ತೇನೆ’ ಎಂದು ಶಾಸಕ ರಮೇಶ ಜಾರಕಿಹೊಳಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ಪುತ್ರ ಕಾಂತೇಶ ಅವರನ್ನು ಭೇಟಿಯಾಗಿ ಚರ್ಚಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಇನ್ನೂ ಚುನಾವಣೆ ಘೋಷಣೆ ಆಗಿಲ್ಲ. ಅಭ್ಯರ್ಥಿ ಬದಲಾವಣೆಗೆ ಕಾಲಾವಕಾಶ ಇದೆ. ಈಶ್ವರಪ್ಪ ಅವರಿಗೆ ಪದೇಪದೇ ಅನ್ಯಾಯ ಆಗುತ್ತಿದೆ. ಕಾಂತೇಶ್ ಅವರಿಗೆ ಹಾವೇರಿ ಟಿಕೆಟ್ ನೀಡಲು ಈಗಲೂ ಅವಕಾಶ ಇದೆ’ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷರನ್ನು ತಳ್ಳಾಡಿದ ಕಾರ್ಯಕರ್ತರು

ಕಾರ್ಯಕರ್ತರ ಗದ್ದಲ; ಸಭೆ ಮೊಟಕು

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲಾ ಘಟಕದ ಪದಾಧಿಕಾರಿಗಳ ಆಯ್ಕೆ ವಿಚಾರದಲ್ಲಿ ಕಾರ್ಯಕರ್ತರು ಭಾರಿ ಗದ್ದಲ ನಡೆಸಿದ್ದರಿಂದ ಶುಕ್ರವಾರ ಹಾವೇರಿ–ಗದಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಅವರು ಸಭೆ ಮೊಟಕುಗೊಳಿಸಿ, ಹೊರನಡೆದರು.

ಟಿಕೆಟ್ ಘೋಷಣೆಯಾದ ಬಳಿಕ ಮೊದಲ ಬಾರಿಗೆ ಜಿಲ್ಲೆಗೆ ಭೇಟಿ ನೀಡಿದ ಬಸವರಾಜ ಬೊಮ್ಮಾಯಿ ಅವರು ಹಾವೇರಿಯ ಬಿಜೆಪಿ ಜಿಲ್ಲಾ ಕಚೇರಿಗೆ ಬೈಕ್ ರ‍್ಯಾಲಿಯಲ್ಲಿ ಬರುತ್ತಿದ್ದಂತೆಯೇ ನೂರಾರು ಕಾರ್ಯಕರ್ತರು ಗದ್ದಲ ಶುರು ಮಾಡಿದರು.

ಬೊಮ್ಮಾಯಿ ಅವರೊಂದಿಗೆ ಬಂದ ಜಿಲ್ಲಾ ಘಟಕದ ಅಧ್ಯಕ್ಷ ಅರುಣಕುಮಾರ ಪೂಜಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಾವೇರಿ ಗ್ರಾಮೀಣ ಮತ್ತು ನಗರ ಘಟಕದ ಅಧ್ಯಕ್ಷರನ್ನು ಕೂಡಲೇ ಬದಲಿಸಲು ಆಗ್ರಹಿಸಿದರು. ಕೆಲ ಕಾರ್ಯಕರ್ತರು ಜಿಲ್ಲಾ ಘಟಕದ ಅಧ್ಯಕ್ಷರನ್ನು ಹಿಡಿದು, ಎಳೆದಾಡಿದರು. ಪಕ್ಷದ ಕಚೇರಿ ಪ್ರವೇಶಿಸುತ್ತಿದ್ದಂತೆ ಗದ್ದಲ ಹೆಚ್ಚಾಯಿತು.

ಪರಿಸ್ಥಿತಿ ಅರಿತ ಬಸವರಾಜ ಬೊಮ್ಮಾಯಿ ಕಾರ್ಯಕರ್ತರನ್ನು ಸಮಾಧಾನಪಡಿಸಲು ಯತ್ನಿಸಿದರು. ಆದರೆ, ಗದ್ದಲ ತಾರಕಕ್ಕೇರಿತು. ‘ನಿಮ್ಮನ್ನು ಗೆಲ್ಲಿಸುತ್ತೇವೆ. ಆದರೆ, ನಗರದ ವ್ಯಕ್ತಿಯನ್ನು ಗ್ರಾಮೀಣ ಘಟಕದ ಅಧ್ಯಕ್ಷರನ್ನಾಗಿ ಮಾಡಿದ್ದು ನಾವು ಒಪ್ಪಲ್ಲ. ಎರಡೂ ಘಟಕಗಳ ಅಧ್ಯಕ್ಷರನ್ನು ಬದಲಾಯಿಸಲೇಬೇಕು’ ಎಂದು ಒತ್ತಾಯಿಸಿದರು.

ಬಳಿಕ ಮಾತನಾಡಿದ ಬಸವರಾಜ ಬೊಮ್ಮಾಯಿ, ‘ಕಾರ್ಯಕರ್ತರ ಭಾವನೆ ಅರ್ಥವಾಗಿದೆ. ಎಲ್ಲರೂ ನನ್ನ ಅಭಿಮಾನಿಗಳು ಆಗಿದ್ದೀರಿ. ಕೂಡಲೇ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರೊಂದಿಗೆ ಮಾತನಾಡಿ, ಎರಡೂ ಘಟಕಗಳ ಅಧ್ಯಕ್ಷರ ಬದಲಾವಣೆಗೆ ಕ್ರಮ ವಹಿಸಲಾಗುವುದು’ ಎಂದರು. ಆಗಲೂ ಕಾರ್ಯಕರ್ತರ ಗದ್ದಲ ಮುಂದುವರಿದ ಕಾರಣ ಸಭೆ ಅಲ್ಲಿಗೇ ಮೊಟಕುಗೊಳಿಸಿ ಬೊಮ್ಮಾಯಿ ಹೊರನಡೆದರು.



ಹಾವೇರಿ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಗದ್ದಲ ಮಾಡುತ್ತಿದ್ದ ಕಾರ್ಯಕರ್ತರನ್ನು ಸಮಾಧಾನಪಡಿಸಿದ ದೃಶ್ಯ – ಪ್ರಜಾವಾಣಿ ಚಿತ್ರ

ಮೋದಿ ಚುನಾವಣಾ ಪ್ರಚಾರ ಇಂದು

ಕಲಬುರಗಿ: ಲೋಕಸಭಾ ಚುನಾವಣೆಯ ವೇಳಾಪಟ್ಟಿ ಘೋಷಣೆಯಾಗಲು ಕ್ಷಣಗಣನೆ ಆರಂಭವಾಗಿರುವ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಕಲ್ಯಾಣ ಕರ್ನಾಟಕದ ಹೃದಯಭಾಗವಾದ ಕಲಬುರಗಿಯಿಂದ ಇದೇ 16ರಂದು ಬಿಜೆಪಿ ಪರ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಕ್ಷೇತ್ರದಿಂದಲೇ ಮೋದಿ ಅವರು ರಾಜ್ಯದಲ್ಲಿ ಚುನಾವಣಾ ಪ್ರಚಾರ ಆರಂಭಿಸುತ್ತಿದ್ದಾರೆ. ಪ್ರಧಾನಿ ಸ್ವಾಗತಕ್ಕೆ ನಗರ ಸಜ್ಜುಗೊಂಡಿದ್ದು, ಇಲ್ಲಿನ ನೂತನ ವಿದ್ಯಾಲಯ (ಎನ್‌.ವಿ.) ಮೈದಾನದಲ್ಲಿ ಬಿಜೆಪಿ ಆಯೋಜಿಸಿರುವ ಬೃಹತ್ ಸಮಾವೇಶದಲ್ಲಿ ಮಧ್ಯಾಹ್ನ 2ಕ್ಕೆ ಮೋದಿ ಬಹಿರಂಗ ಭಾಷಣ ಮಾಡಲಿದ್ದಾರೆ.

17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪ: ಎಫ್‌ಐಆರ್

ಬಿಎಸ್‌ವೈ ವಿರುದ್ಧ ಪೋಕ್ಸೊ: ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೇಳು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

‘ಫೆಬ್ರುವರಿ 2ರಂದು ನಡೆದಿರುವ ಕೃತ್ಯದ ಬಗ್ಗೆ ಬಾಲಕಿಯ ತಾಯಿ ದೂರು ನೀಡಿದ್ದಾರೆ. ಲೈಂಗಿಕ ದೌರ್ಜನ್ಯ (ಐಪಿಸಿ 354) ಆರೋಪ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಸದಾಶಿವನಗರ ಠಾಣೆಯಲ್ಲಿ ಗುರುವಾರ (ಮಾರ್ಚ್ 14) ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ದೂರಿನ ಸಂಗತಿಗಳನ್ನು ಆಧರಿಸಿ ಸದಾಶಿವನಗರ ಠಾಣೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದರು. ಇದರ ನಡುವೆಯೇ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿ ರಾಜ್ಯ ಸರ್ಕಾರ ಆದೇಶ ವಹಿಸಿದೆ. ಸಿಐಡಿಯ ವಿಶೇಷ ತಂಡ, ತನಿಖೆ ಶುರು ಮಾಡಿದೆ. ಬಾಲಕಿಗೆ ಸಂಬಂಧಪಟ್ಟ ಪ್ರಕರಣ ಇದಾಗಿದ್ದರಿಂದ, ಹೆಚ್ಚಿನ ಮಾಹಿತಿ ಬಹಿರಂಗಪಡಿಸಲಾಗದು’ ಎಂದು ತಿಳಿಸಿದರು.

ದೂರಿನ ವಿವರ: ‘17 ವರ್ಷ ವಯಸ್ಸಿನ ಮಗಳ ಮೇಲೆ ಅತ್ಯಾಚಾರ ಆಗಿತ್ತು. ಮಗಳಿಗೆ ನ್ಯಾಯ ಒದಗಿಸುವಂತೆ ಕೋರಿ ಸಹಾಯ ಕೇಳಲು ಯಡಿಯೂರಪ್ಪ ಅವರ ಮನೆಗೆ ಹೋಗಿದ್ದೆ. ಮಗಳು ಸಹ ನನ್ನ ಜೊತೆಗಿದ್ದಳು’ ಎಂದು ತಾಯಿ ದೂರಿನಲ್ಲಿ ತಿಳಿಸಿದ್ದಾರೆ.

‘ನಮ್ಮ ಜೊತೆ 9 ನಿಮಿಷ ಮಾತನಾಡಿದ್ದ ಯಡಿಯೂರಪ್ಪ, ಚಹಾ ತರಿಸಿ ಕೊಟ್ಟಿದ್ದರು. ಅವರಿಗೆ ನಾನು ಅಪ್ಪಾಜಿ ಎನ್ನುತ್ತಿದ್ದೆ, ನನ್ನ ಮಗಳು, ತಾತ ಎಂದು ಕರೆಯುತ್ತಿದ್ದಳು. ಇದೇ ಸಂದರ್ಭದಲ್ಲಿ ನನ್ನ ಮಗಳ ಕೈ ಹಿಡಿದು ಕೊಠಡಿಗೆ ಕರೆದೊಯ್ದಿದ್ದ ಯಡಿಯೂರಪ್ಪ, ಒಳಗಿನಿಂದ ಬಾಗಿಲು ಹಾಕಿಕೊಂಡಿದ್ದರು. 5 ನಿಮಿಷ ಕೊಠಡಿಯಲ್ಲಿದ್ದರು. ಆಗ ಮಗಳ ಅಂಗಾಂಗಗಳನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಮಗಳು ಹೊರಗೆ ಬಾರದಂತೆ ಅವರು ಅಡ್ಡಗಟ್ಟಿದ್ದರು. ನಂತರ ಅವರೇ ಬಾಗಿಲು ತೆರೆದು ಹೊರಗೆ ಬಂದಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಕೊಠಡಿಯಿಂದ ಹೊರಗೆ ಬರುತ್ತಿದ್ದಂತೆ ಮಗಳು, ಲೈಂಗಿಕ ದೌರ್ಜನ್ಯದ ಬಗ್ಗೆ ನನಗೆ ತಿಳಿಸಿದಳು. ಏಕೆ ಹೀಗೆ ಮಾಡಿದ್ದೀರಿ? ಎಂದು ಕೇಳಿದ್ದಕ್ಕೆ, ‘ಅತ್ಯಾಚಾರ ಆಗಿದೆಯೋ? ಇಲ್ಲವೋ? ಎಂದು ನೋಡಿದೆ’ ಎಂಬುದಾಗಿ ಯಡಿಯೂರಪ್ಪ ಹೇಳಿದ್ದರು. ನಂತರ, ಕ್ಷಮೆ ಸಹ ಕೇಳಿದ್ದರು. ನಮಗೆ ಸಹಾಯ ಮಾಡುವುದಾಗಿ ತಿಳಿಸಿದ್ದರು. ವಿಷಯವನ್ನು ಹೊರಗೆ ಯಾರಿಗೂ ಹೇಳದಂತೆ ತಡೆದಿದ್ದರು. ನನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಯಡಿಯೂರಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಕಾನೂನು ರೀತಿಯೇ ಎದುರಿಸುತ್ತೇನೆ: ಯಡಿಯೂರಪ್ಪ

ಬೆಂಗಳೂರು: ‘ನನ್ನ ವಿರುದ್ಧ ಮಹಿಳೆಯೊಬ್ಬರು ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. ಕಾನೂನು ಪ್ರಕಾರ ಅದನ್ನು ಎದುರಿಸುತ್ತೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಡಾಲರ್ಸ್ ಕಾಲೋನಿಯ ತಮ್ಮ ನಿವಾಸದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಪ್ರಕರಣದಲ್ಲಿ ರಾಜಕೀಯ ಪಿತೂರಿ ಇದೆ ಎಂದು ಭಾವಿಸುವುದಿಲ್ಲ’ ಎಂದು ತಿಳಿಸಿದರು.

‘ನನ್ನ ಮೇಲೆ ಮಹಿಳೆ ದೂರು ಕೊಟ್ಟಿದ್ದಾರೆ ಎಂಬುದು ಗೊತ್ತಾಯಿತು. ಒಂದೂವರೆ ತಿಂಗಳ ಹಿಂದೆ ಮನೆಯ ಬಳಿ ತಾಯಿ– ಮಗಳು ಕಣ್ಣೀರು ಹಾಕುತ್ತಾ ನಿಂತಿದ್ದನ್ನು ನೋಡಿದ್ದೆ. ಸಾಕಷ್ಟು ಬಾರಿ ಬಂದಿದ್ದರೂ ಹತ್ತಿರ ಸೇರಿಸಿರಲಿಲ್ಲ. ಒಂದು ದಿನ ಒಳಗೆ ಕರೆಸಿ ಅವರ ಸಮಸ್ಯೆ ಕೇಳಿದೆ. ಆಗ ತಮಗೆ ಅನ್ಯಾಯವಾಗಿದ್ದು, ನ್ಯಾಯ ಕೊಡಿಸಬೇಕು ಎಂದು ಹೇಳಿಕೊಂಡರು. ಪೊಲೀಸ್ ಕಮಿಷನರ್ ದಯಾನಂದ್ ಅವರಿಗೆ ಕರೆ ಮಾಡಿ, ತಾಯಿ–ಮಗಳು ಅನ್ಯಾಯ ಆಗಿದೆ ಎನ್ನುತ್ತಿದ್ದಾರೆ. ನಿಮ್ಮ ಬಳಿ ಕಳಿಸುತ್ತೇನೆ, ನ್ಯಾಯ ಕೊಡಿಸಿ ಎಂದು ಹೇಳಿ ಕಳಿಸಿದೆ’.



ಯಡಿಯೂರಪ್ಪ

‘ಇದಾದ ಬಳಿಕ ನನ್ನ ವಿರುದ್ಧವೇ ಏನೇನೋ ಮಾತನಾಡಲು ಶುರು ಮಾಡಿದರು. ಈಗ ನನ್ನ ವಿರುದ್ಧ ಬೇರೆಯದೇ ರೀತಿ ದೂರು ದಾಖಲಿಸಿದ್ದಾರೆ. ಉಪಕಾರ ಮಾಡಲು ಹೋದರೆ ಏನಾಗುತ್ತದೆ ಎನ್ನುವುದಕ್ಕೆ ಇದುವೇ ನಿದರ್ಶನ. ಕಷ್ಟ ಇದೆ ಎಂದು ಹಣವನ್ನು ಕೊಟ್ಟು ಕಳುಹಿಸಿದೆ. ಇದನ್ನು ನಿರೀಕ್ಷಿಸಿರಲಿಲ್ಲ. ಕಾನೂನು ರೀತಿಯಲ್ಲೇ ಈ ಪ್ರಕರಣವನ್ನು ಎದುರಿಸುತ್ತೇನೆ’ ಎಂದು ಯಡಿಯೂರಪ್ಪ ಹೇಳಿದರು.

> **ಬಿ.ಎಸ್. ಯಡಿಯೂರಪ್ಪ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿರುವುದರ ಹಿಂದೆ ಷಡ್ಯಂತ್ರ ಅಡಗಿದೆ. ಅವರನ್ನು ಹಣಿಯಲು ಯಾರೋ ಮಾಡಿರುವ ತಂತ್ರವಿದು**
> **ಕೆ.ಎಸ್. ಈಶ್ವರಪ್ಪ,** ಬಿಜೆಪಿ ಮುಖಂಡ


‘ರಾಜಕೀಯ ದುರುದ್ದೇಶವಿಲ್ಲ’

ಬೆಂಗಳೂರು: ಯಡಿಯೂರಪ್ಪ ವಿರುದ್ಧ ಪೋಕ್ಸೊ ಕಾಯ್ದೆಯಡಿ ದಾಖಲಿಸಿದ ಪ್ರಕರಣದಲ್ಲಿ ರಾಜಕೀಯ ದುರುದ್ದೇಶವಿಲ್ಲ. ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಯಡಿಯೂರಪ್ಪ ಹಿರಿಯ ರಾಜಕಾರಣಿ. ದೂರು ಆಧರಿಸಿ ತನಿಖೆ ನಡೆಯುತ್ತಿದೆ. ಈಗ ಹೆಚ್ಚಿನ ಮಾಹಿತಿ ಹಂಚಿಕೊಳ್ಳಲು ಆಗುವುದಿಲ್ಲ’ ಎಂದರು.

‘ಅಗತ್ಯ ಕಂಡುಬಂದರೆ ದೂರುದಾರ ಮಹಿಳೆಗೆ ರಕ್ಷಣೆ ಒದಗಿಸಲಾಗುತ್ತದೆ. ಯಡಿಯೂರಪ್ಪರನ್ನು ವಶಕ್ಕೆ ಪಡೆಯಬೇಕೆ? ಬೇಡವೆ? ಎಂದು ಪೊಲೀಸರು ನಿರ್ಧರಿಸುತ್ತಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,151
ಇಂದಿನ ಅಂತ್ಯ	22,023
▼	123
ದಿನದ ಕನಿಷ್ಠ	21,931

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹445
12 ಕ್ಕೆ	₹60
ಮೈಸೂರು	
100ಕ್ಕೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹1020 (1020)
ಸೂರ್ಯಕಾಂತಿ (ರಿಫೈನ್ಡ್)	₹990 (990)
ಪಾಮೋಲಿನ್	₹962 (970)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹156

(ಪ್ರತಿ ಕೆ.ಜಿ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹300-446
ದ್ವಿತಳಿ (ಕೆ.ಜಿ)	₹315-556

ರಾಜಕೀಯ ಭ್ರಷ್ಟಾಚಾರ: ಹಿರೇಮಠ

ನವದೆಹಲಿ: ಚುನಾವಣಾ ಬಾಂಡ್ ಎಂಬುದು ರಾಜಕೀಯ ಭ್ರಷ್ಟಾಚಾರ ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಆರೋಪಿಸಿದರು.

'ಚುನಾವಣಾ ಆಯೋಗಕ್ಕೆ ಸ್ವಾಯತ್ತತೆ ನೀಡಲು ಸುಪ್ರೀಂ ಕೋರ್ಟ್ ಧೈರ್ಯ ಮಾಡಬೇಕು. ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ' ಎಂದರು.

ರಾಜಕೀಯ ಪಕ್ಷಗಳಿಗೆ ಗರಿಷ್ಠ ಮೊತ್ತ ನೀಡಿರುವ ಮೊದಲ ಮೂರು ಕಂಪನಿಗಳ ಹಿನ್ನೆಲೆ

ಗರಿಷ್ಠ ದೇಣಿಗೆ ನೀಡಿದ್ದ 'ಲಾಟರಿ ಕಿಂಗ್'

ಚೆನ್ನೈ (ಪಿಟಿಐ): ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿದ ಸಂಸ್ಥೆಗಳ ಹೆಸರು ಬಹಿರಂಗವಾದ ಹಿಂದೆಯೇ ಚರ್ಚೆಗೆ ಬಂದಿರುವ ಹೆಸರು ಸ್ಯಾಂಟಿಯಾಗೊ ಮಾರ್ಟಿನ್. ಇವರು ಗರಿಷ್ಠ ದೇಣಿಗೆ ನೀಡಿದ ಫ್ಯೂಚರ್ ಗೇಮ್ಸ್ ಅಂಡ್ ಹೋಟೆಲ್ ಸರ್ವೀಸಸ್ ಕಂಪನಿಯ ಸ್ಥಾಪಕ ಮತ್ತು ಮಾಲೀಕ.

ಯಾರಿದು ಮಾರ್ಟಿನ್, ಅವರ ವಹಿವಾಟಿನ ಸ್ವರೂಪವೇನು?: ಕಾರ್ಮಿಕನ ಸ್ಥಾನದಿಂದ 'ಲಾಟರಿ ಕಿಂಗ್' ಆಗುವ ವರೆಗೆ ಅವರು 'ಸವೆಸಿದ' ಹಾದಿಯೇ ಭಿನ್ನ. ಮಾರ್ಟಿನ್ ತಮಿಳುನಾಡಿನ ಕೊಯಮತ್ತೂರಿನವರು. ಆರಂಭದಲ್ಲಿ ಸಾಮಾನ್ಯ ಕಾರ್ಮಿಕ.

ತಮಿಳುನಾಡಿನಲ್ಲಿ ಲಾಟರಿ ವಹಿವಾಟನ್ನು 2003ರಲ್ಲೇ ನಿಷೇಧಿಸಲಾಗಿದೆ. ಆದರೆ, ಈಗಲೂ ತಮಿಳುನಾಡಿನ ಬಹುತೇಕ ಜನರು ಮರೆಯದ ಹೆಸರು 'ಮಾರ್ಟಿನ್ ಲಾಟರಿ'. ಹಲವು ನಕಾರಾತ್ಮಕ ಕಾರಣಗಳಿಗಾಗಿಯೂ ಈ ಹೆಸರು ನೆನಪಿನಲ್ಲಿದೆ ಎಂಬುದು ಗಮನಾರ್ಹ.

ಮಾರ್ಟಿನ್ ನಡೆಸುತ್ತಿದ್ದ ಕಾಲೇಜೊಂದರಲ್ಲಿ ಅಕೌಂಟೆಂಟ್ ಆಗಿದ್ದವರೊಬ್ಬರು ಆದಾಯ ತೆರಿಗೆ ಇಲಾಖೆಯ ದಾಳಿ ಬಳಿಕ ಶಂಕಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಇವರ 'ಫ್ಯೂಚರ್ ಗೇಮಿಂಗ್ ಸಲ್ಯೂಷನ್ಸ್', ಸಿಕ್ಕಿಂ ಲಾಟರಿಗಳ ಪ್ರಮುಖ ವಿತರಕ ಸಂಸ್ಥೆಯಾಗಿತ್ತು. ಸುದೀರ್ಘ ಕಾಲ ಲಾಟರಿ ವಹಿವಾಟು ನಡೆಸಿದ ಮಾರ್ಟಿನ್, ಕೇರಳ ಮತ್ತು ತಮಿಳುನಾಡಿನಲ್ಲಿ ಹಲವು ರಾಜಕೀಯ ಪ್ರಮುಖರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು.

ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆಯು ಇವರ ವಹಿವಾಟು ಕುರಿತು ತನಿಖೆ ಆರಂಭಿಸಿದ್ದವು. 2023ರಲ್ಲಿ ಇ.ಡಿಯು ಸುಮಾರು ₹ 457 ಕೋಟಿ ಮೊತ್ತದ ಆಸ್ತಿಯನ್ನು ಜಪ್ತಿ ಮಾಡಿತ್ತು. ಕೇರಳದಲ್ಲಿ ನಕಲಿ ಲಾಟರಿಗಳ ಮಾರಾಟದ ಮೂಲಕ ಸಿಕ್ಕಿಂ ರಾಜ್ಯ ಸರ್ಕಾರಕ್ಕೆ ಸುಮಾರು ₹ 900 ಕೋಟಿ ನಷ್ಟ ಉಂಟು ಮಾಡಿದ ಪ್ರಕರಣದಲ್ಲಿ ಈ ಆಸ್ತಿಯನ್ನು ಇ.ಡಿ ಜಪ್ತಿ ಮಾಡಿತ್ತು. ಇದೇ ಪ್ರಕರಣ ಸಂಬಂಧ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ಮಾರ್ಟಿನ್ ಮತ್ತು ಇತರರ ವಿರುದ್ಧ ಸಿಬಿಐ ಆರೋಪಪಟ್ಟಿ ದಾಖಲಿಸಿತ್ತು.

ತಮಿಳುನಾಡಿನಲ್ಲಿ ಮಾರ್ಟಿನ್‌ನ ಅಳಿಯ ಆಧವ್ ಅರ್ಜುನ ಅವರಿಗೆ ಸೇರಿದ್ದ ಸ್ಥಳಗಳ ಮೇಲೆ ಅಕ್ರಮ ಮರಳು ಕಳ್ಳಸಾಗಣೆ ಪ್ರಕರಣದ ಸಂಬಂಧ ದಾಳಿ ನಡೆದಿತ್ತು. ಭಾರತೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷರಾಗಿದ್ದ ಅರ್ಜುನ ಅವರನ್ನು ಇತ್ತೀಚೆಗೆ ತಮಿಳುನಾಡಿನ ವಿಡುತಲೈ ಚಿರುತ್ತೈಗಲ್ ಕಾಟ್ಚಿ ಸಂಘಟನೆಯ ಉಪ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು.

'ತೆರಿಗೆ ವಂಚನೆ ಪ್ರಕರಣಗಳಿದ್ದ ಸಂಸ್ಥೆಯಿಂದ ₹ 1368 ಕೋಟಿ ದೇಣಿಗೆ'

ಮುಂಬೈ (ಎಎಫ್‌ಪಿ): ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳಿಗೆ ಗರಿಷ್ಠ ದೇಣಿಗೆ ನೀಡಿರುವ ಕಂಪನಿಯ ಪ್ರಮುಖ ವಹಿವಾಟು, 'ಲಾಟರಿ'. ವಂಚನೆ, ತೆರಿಗೆ ವಂಚನೆ ಕುರಿತ ಗಂಭೀರ ಆರೋಪಗಳು ಈ ಕಂಪನಿಯ ಮೇಲಿವೆ. ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ನೀಡಿದ ಕಂಪನಿಗಳ ವಿವರಗಳನ್ನು ಚುನಾವಣಾ ಆಯೋಗ ಪ್ರಕಟಿಸಿದೆ. ಈ ಪಟ್ಟಿಯಲ್ಲಿರುವ ಮೊದಲ ಹೆಸರು: ಫ್ಯೂಚರ್ ಗೇಮಿಂಗ್ ಅಂಡ್ ಹೋಟೆಲ್ ಸರ್ವೀಸಸ್.

ದೇಶದಾದ್ಯಂತ ಈ ಕಂಪನಿಯು ಮೊದಲು ಲಾಟರಿ ವಹಿವಾಟು ನಡೆಸುತ್ತಿತ್ತು. ಈ ಕಂಪನಿಯ ಸ್ಥಾಪಕ ಸ್ಯಾಂಟಿಯಾಗೊ ಮಾರ್ಟಿನ್ ಅವರನ್ನು ಭಾರತೀಯ ಮಾಧ್ಯಮಗಳು 'ಲಾಟರಿ ಕಿಂಗ್' ಎಂದೇ ಗುರುತಿಸುತ್ತವೆ. ಅಂಕಿ ಅಂಶಗಳ ಪ್ರಕಾರ, ಈ ಕಂಪನಿಯು 2019ರ ಏಪ್ರಿಲ್‌ನಿಂದ ಈ ವರ್ಷದ ಜನವರಿವರೆಗೆ ಒಟ್ಟು ₹ 1368 ಕೋಟಿ ಮೊತ್ತದ ಬಾಂಡ್ ಖರೀದಿಸಿದೆ. ಇದು, ಎಸ್‌ಬಿಐ ವಿತರಿಸಿದ್ದ ಬಾಂಡ್‌ಗಳ ಒಟ್ಟು ಮೌಲ್ಯದ ಶೇ 11ರಷ್ಟಾಗಿದೆ.

ಮಾಧ್ಯಮ ವರದಿಗಳ ಪ್ರಕಾರ, 2011ರಿಂದ ಈ ಕಂಪನಿಯ ಮೇಲೆ ತೆರಿಗೆ ವಂಚನೆ, ತೆರಿಗೆ ಬಾಕಿ ಉಳಿಸಿಕೊಂಡಿರುವುದು, ಹಣ ಅಕ್ರಮ ವರ್ಗಾವಣೆ, ವಂಚನೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ತನಿಖೆ ನಡೆಯುತ್ತಿದೆ.

₹21.72 ಕೋಟಿ ನಿವ್ವಳ ಲಾಭ, ₹360 ಕೋಟಿಯ ಬಾಂಡ್‌ಗಳ ಖರೀದಿ!

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಮೂಲಕ ಗರಿಷ್ಠ ದೇಣಿಗೆ ನೀಡಿದ ಸಂಸ್ಥೆಗಳ ಪಟ್ಟಿಯಲ್ಲಿರುವ ಮೂರನೇ ಹೆಸರು ರಿಲಯನ್ಸ್ ಜೊತೆಗೆ ಸಂಪರ್ಕವಿರುವ ಕ್ವಿಕ್ ಸಪ್ಲೈ ಚೈನ್ ಪ್ರೈವೇಟ್ ಲಿಮಿಟೆಡ್.

ನವಿ ಮುಂಬೈನ 'ಧೀರೂಭಾಯಿ ಅಂಬಾನಿ ನಾಲೆಡ್ಜ್ ಸಿಟಿ'ಯಲ್ಲಿ (ಡಿಎಕೆಸಿ) ಇದರ ನೋಂದಾಯಿತ ಕಚೇರಿ ಇದೆ. ಈ ಕಂಪನಿಯು 2021–22 ಮತ್ತು 2023–24ನೇ ಹಣಕಾಸು ವರ್ಷದಲ್ಲಿ ಒಟ್ಟು ₹ 410 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ, ಕ್ವಿಕ್ ಸಪ್ಲೈ ಸಂಸ್ಥೆಯು ಗೋದಾಮು ಮತ್ತು ದಾಸ್ತಾನು ಘಟಕಗಳ ಉತ್ಪಾದನಾ ಸಂಸ್ಥೆಯಾಗಿದೆ. 2000ರ ನವೆಂಬರ್ 9ರಲ್ಲಿ ಇದರ ಅಧಿಕೃತ ಷೇರು ಬಂಡವಾಳ ಮೊತ್ತ ₹ 130.99 ಕೋಟಿ. ಪಾವತಿ ಬಂಡವಾಳ ₹129.99 ಕೋಟಿ.

ಕಂಪನಿಯು 2022–23ನೇ ಹಣಕಾಸು ವರ್ಷದಲ್ಲಿ ಸುಮಾರು ₹ 500 ಕೋಟಿ ಆದಾಯ ಗಳಿಸಿದೆ. ಆದರೆ, ನಿವ್ವಳ ಲಾಭದ ಮಾಹಿತಿ ಲಭ್ಯವಾಗಿಲ್ಲ.

ಈ ಕಂಪನಿಯು 2021–22ರಲ್ಲಿ ₹ 360 ಕೋಟಿ ಮೌಲ್ಯದ ಬಾಂಡ್ ಖರೀದಿಸಿದೆ. ಆದರೆ, ಆ ವರ್ಷ ಕಂಪನಿಯ ನಿವ್ವಳ ಲಾಭದ ಮೊತ್ತ ₹ 21.72 ಕೋಟಿ. 23–24ನೇ ಹಣಕಾಸು ವರ್ಷದಲ್ಲಿ ಮತ್ತೆ ₹ 50 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ.

ಸಂಬಂಧ ನಿರಾಕರಣೆ: ಈ ಮಧ್ಯೆ ರಿಲಯನ್ಸ್ ಇಂಡಸ್ಟ್ರೀಸ್ ವಕ್ತಾರರು ಹೇಳಿಕೆಯನ್ನು ನೀಡಿದ್ದು ಕ್ವಿಕ್ ಸಪ್ಲೈ ಚೈನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ರಿಲಯನ್ಸ್ ಸಮೂಹದ ಅಂಗಸಂಸ್ಥೆಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಎಸ್‌ಬಿಐಗೆ 'ಸುಪ್ರೀಂ' ತರಾಟೆ

ಒಂದನೇ ಪುಟದಿಂದ...

'ಬಾಂಡ್‌ಗಳ ವಿಶಿಷ್ಟ ಗುರುತು ಸಂಖ್ಯೆಯ ಮೂಲಕ ಅವುಗಳನ್ನು ಖರೀದಿಸಿದವರು ಯಾರು ಹಾಗೂ ಅದನ್ನು ನಗದೀಕರಣ ಮಾಡಿಕೊಂಡ ಪಕ್ಷ ಯಾವುದು ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಈಗ ಒದಗಿಸಿರುವ ವಿವರಗಳನ್ನು ವಿಶೇಷವಾಗಿ ಪರಿಗಣಿಸುವ ಅಗತ್ಯವಿಲ್ಲ. ಅದು ಬ್ಯಾಂಕ್‌ನವರ ಕರ್ತವ್ಯವಾಗಿದೆ' ಎಂದು ಹೇಳಿದರು.

ಬಾಂಡ್‌ಗಳ ಪ್ರಕರಣದಲ್ಲಿ ಮಾರ್ಚ್ 11ರಂದು ನೀಡಿದ್ದ ಆದೇಶದ ಕೆಲವು ಅಂಶಗಳ ಪರಿಷ್ಕರಣೆ ಕೋರಿ ಆಯೋಗವು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಈ ಸೂಚನೆ ನೀಡಿತು.

'ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದ ವಿವರಗಳಲ್ಲಿ ಯಾವುದೇ ಪ್ರತಿಯನ್ನು ಆಯೋಗ ಬಾಕಿ ಉಳಿಸಿಕೊಂಡಿಲ್ಲ' ಎಂದು ಆಯೋಗವನ್ನು ಪ್ರತಿನಿಧಿಸಿದ್ದ ವಕೀಲರು ಪೀಠದ ಗಮನಕ್ಕೆ ತಂದರು.

ಬಾಂಡ್‌ಗಳ ಅಂಕಿ–ಅಂಶ ಕುರಿತಂತೆ ಕೋರ್ಟ್‌ನ ರಿಜಿಸ್ಟ್ರಿಗೆ ಸಲ್ಲಿಕೆಯಾಗಿರುವ ಎಲ್ಲ ದಾಖಲೆಗಳ ಪ್ರತಿಗಳನ್ನು ಆಯೋಗಕ್ಕೆ ನೀಡಲಾಗುವುದು ಎಂದು ಪೀಠ ಹೇಳಿತು.

ಪೀಠದ ಮಧ್ಯಂತರ ಆದೇಶಕ್ಕೆ ಅನುಗುಣವಾಗಿ ಆಯೋಗವು ಸಲ್ಲಿಸಿರುವ ಅಂಕಿ ಅಂಶದ ಪ್ರತಿಗಳನ್ನು ಸ್ಕ್ಯಾನ್ ಹಾಗೂ ಡಿಜಿಟಲೀಕರಣ ಮಾಡಲಾಗಿದೆ ಎಂಬುದನ್ನು ಕೋರ್ಟ್‌ನ ರಿಜಿಸ್ಟ್ರಾರ್ ಖಾತರಿಪಡಿಸಿಕೊಳ್ಳಬೇಕು. ಈ ಪ್ರಕ್ರಿಯೆ ಶನಿವಾರ ಸಂಜೆ 5 ಗಂಟೆಯೊಳಗೆ ಆಗಬೇಕು ಎಂದು ಪೀಠ ಸೂಚಿಸಿತು. ಈ ಪ್ರಕ್ರಿಯೆ ಬಳಿಕ ದಾಖಲೆಗಳ ಮೂಲ ಪ್ರತಿಗಳನ್ನು ಆಯೋಗದ ಪರ ವಕೀಲರಿಗೆ ಹಸ್ತಾಂತರಿಸಬೇಕು. ತದನಂತರ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಅದೇ ದಿನ ಅಥವಾ ಮಾರನೇ ದಿನ ಅದನ್ನು ಪ್ರಕಟಿಸಬೇಕು ಎಂದು ಸ್ಪಷ್ಟ ನಿರ್ದೇಶನ ನೀಡಿತು.

ದೇಣಿಗೆ: ಯಾವ ಪಕ್ಷಕ್ಕೆ ಎಷ್ಟು? (ಬಾಂಡ್ ಮೊತ್ತ ₹ಕೋಟಿಗಳಲ್ಲಿ)

ಬಿಜೆಪಿ	6,060.51	ಎನ್‌ಸಿಪಿ	31
ಕಾಂಗ್ರೆಸ್	1,421.86	ಜನಸೇನಾ ಪಾರ್ಟಿ	21
ಆಮ್ ಆದ್ಮಿ ಪಕ್ಷ (ಎಎಪಿ)	65.45	ಸಮಾಜವಾದಿ ಪಕ್ಷ	14.05
ತೃಣಮೂಲ ಕಾಂಗ್ರೆಸ್	1,606.53	ಜೆಡಿಯು	14
ಭಾರತ ರಾಷ್ಟ್ರ ಸಮಿತಿ	1,214.70	ಜೆಎಂಎಂ	13.5
ಬಿಜೆಡಿ	775.50	ಅಕಾಲಿದಳ	7.2
ಡಿಎಂಕೆ	639	ಎಐಎಡಿಎಂಕೆ	6.05
ವೈಎಸ್‌ಆರ್‌ಸಿಪಿ	337	ಸಿಕ್ಕಿಂ ಪ್ರಜಾಸತ್ತಾತ್ಮಕ ರಂಗ	5.5
ತೆಲುಗುದೇಶಂ ಪಕ್ಷ	218.88	ಮಹಾರಾಷ್ಟ್ರವಾದಿ ಗೋಮಾಂತಕ್ ಪಕ್ಷ	01
ಶಿವಸೇನಾ	159.38	ನ್ಯಾಷನಲ್ ಕಾನ್ಫರೆನ್ಸ್	01
ಆರ್‌ಜೆಡಿ	73.5	ಗೋವಾ ಫಾರ್ವರ್ಡ್	01
ಜೆಡಿಎಸ್	43.40		
ಸಿಕ್ಕಿಂ ಕ್ರಾಂತಿದಳ	36.5		

ಸಿಎಎ ಜಾರಿ: ಅಮೆರಿಕ ಕಳವಳ

ವಾಷಿಂಗ್ಟನ್/ ನವದೆಹಲಿ (ಪಿಟಿಐ): 'ಭಾರತದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಗೊಳಿಸಿರುವುದು ಕಳವಳ ಉಂಟುಮಾಡಿದೆ' ಎಂದು ಅಮೆರಿಕ ಗುರುವಾರ ಹೇಳಿದೆ.

ಆದರೆ, ಅಮೆರಿಕ ವ್ಯಕ್ತಪಡಿಸಿರುವ ಕಳವಳ ಸೇರಿದಂತೆ ಸಿಎಎ ವಿರುದ್ಧ ಕೇಳಿಬರುತ್ತಿರುವ ಎಲ್ಲ ಟೀಕೆಗಳನ್ನು ಭಾರತ ಬಲವಾಗಿ ತಳ್ಳಿಹಾಕಿದೆ.

'ಭಾರತದಲ್ಲಿ ಸಿಎಎ ಜಾರಿ ಸಂಬಂಧ ಮಾರ್ಚ್ 11 ರಂದು ಹೊರಡಿಸಿರುವ ಅಧಿಸೂಚನೆ ಕಳವಳಕ್ಕೆ ಕಾರಣವಾಗಿದೆ. ಈ ಕಾಯ್ದೆಯನ್ನು ಯಾವ ರೀತಿ ಅನುಷ್ಠಾನಗೊಳಿಸಲಾಗುತ್ತದೆ ಎಂಬುದನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಧಾರ್ಮಿಕ ಸ್ವಾತಂತ್ರ್ಯವನ್ನು ಗೌರವಿಸುವುದು ಮತ್ತು ಕಾನೂನಿನಡಿಯಲ್ಲಿ ಎಲ್ಲಾ ಸಮುದಾಯಗಳನ್ನು ಸಮಾನವಾಗಿ ಕಾಣುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ತತ್ವಗಳಾಗಿವೆ' ಎಂದು ಅಮೆರಿಕ ವಿದೇಶಾಂಗ ಸಚಿವಾಲಯದ ವಕ್ತಾರ ಮ್ಯಾಥ್ಯೂ ಮಿಲ್ಲರ್ ಹೇಳಿದ್ದಾರೆ.

ಅಮೆರಿಕದ ಹೇಳಿಕೆಗೆ ಭಾರತವು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ಸಂಕಷ್ಟದಲ್ಲಿರುವವರಿಗೆ ನೆರವಾಗುವ ಉದ್ದೇಶದೊಂದಿಗೆ ಕೈಗೊಂಡಿರುವ 'ಒಳ್ಳೆಯ ಉಪಕ್ರಮ'ವೊಂದರ ಬಗೆಗಿನ ಅಭಿಪ್ರಾಯಗಳನ್ನು 'ವೋಟ್ ಬ್ಯಾಂಕ್' ರಾಜಕಾರಣವು ನಿರ್ಧರಿಸಬಾರದು ಎಂದಿದೆ.

'ದೇಶ ವಿಭಜನೆ ಬಳಿಕದ ಇತಿ ಹಾಸ ಮತ್ತು ಭಾರತದ ಬಹುತ್ವ ಪರಂಪರೆಯ ಕುರಿತು ಸೀಮಿತ ತಿಳಿವಳಿಕೆ ಹೊಂದಿರುವವರು ಅಭಿಪ್ರಾಯಗಳನ್ನು ನೀಡಲು ಪ್ರಯತ್ನಿಸದಿರುವುದೇ ಉತ್ತಮ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಹೇಳಿದರು.

ಸಿಎಎ ಜಾರಿ ಭಾರತದ ಆಂತರಿಕ ವಿಚಾರ ಎಂಬುದನ್ನು ಒತ್ತಿಹೇಳಿದ ಅವರು, 'ಈ ಕಾಯ್ದೆಯು ಪೌರತ್ವವನ್ನು ನೀಡಲಿದೆಯೇ ಹೊರತು, ಪೌರತ್ವವನ್ನು ಕಿತ್ತುಕೊಳ್ಳುವುದಿಲ್ಲ. ಯಾವುದೇ ರಾಷ್ಟ್ರದ ಪೌರತ್ವ ಹೊಂದಿಲ್ಲದವರಿಗೆ ಇದು ನೆರವಾಗಲಿದೆ. ಅವರಿಗೆ ಘನತೆಯಿಂದ ಜೀವನ ಸಾಗಿಸಲು ಅನುವು ಮಾಡಿಕೊಡಲಿದೆ' ಎಂದಿದ್ದಾರೆ.

'2014ರ ಡಿಸೆಂಬರ್ 31ಕ್ಕೆ ಮೊದಲು ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಿಂದ ಭಾರತಕ್ಕೆ ಬಂದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಹಾಗೂ ಕ್ರೈಸ್ತ ಸಮುದಾಯದವರಿಗೆ ಭಾರತದ ಪೌರತ್ವವನ್ನು ನೀಡುತ್ತದೆ' ಎಂದು ತಿಳಿಸಿದ್ದಾರೆ.

ಪೇಟಿಎಂ ಷೇರಿನ ಮೌಲ್ಯ ಏರಿಕೆ

ನವದೆಹಲಿ/ಮುಂಬೈ (ಪಿಟಿಐ): ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರಿನ ಮೌಲ್ಯ ಶೇ 5ರಷ್ಟು ಏರಿಕೆ ಆಗಿದೆ.

ಪೇಟಿಎಂ ಯುಪಿಐ ಸೇವೆಯನ್ನು ಒದಗಿಸಬಹುದು ಎಂದು ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಒನ್97 ಕಮ್ಯುನಿಕೇಷನ್ ಲಿಮಿಟೆಡ್‌ಗೆ ಗುರುವಾರ ಅನುಮತಿ ನೀಡಿತ್ತು. ಇದರಿಂದ ಪೇಟಿಎಂ ಷೇರಿನ ಮೌಲ್ಯ ಶುಕ್ರವಾರ ಏರಿಕೆ ಆಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 5ರಷ್ಟು ಹೆಚ್ಚಳವಾಗಿದೆ. ಷೇರಿನ ಬೆಲೆ ಕ್ರಮವಾಗಿ ₹370.90 ಮತ್ತು ₹370.70ಕ್ಕೆ ಮುಟ್ಟಿದೆ.

ಷೇರು ಸೂಚ್ಯಂಕಗಳು ಕುಸಿತ: ಜಾಗತಿಕ ಮಾರುಕಟ್ಟೆಯ ದುರ್ಬಲ ಪ್ರವೃತ್ತಿ ಮತ್ತು ವಿದೇಶಿ ಬಂಡವಾಳ ಹೊರಹರಿವಿನಿಂದ ಷೇರು ಸೂಚ್ಯಂಕಗಳು ಶುಕ್ರವಾರ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 453 ಇಳಿದು, 72,643ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 612 ಅಂಶ ಕುಸಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 123 ಅಂಶ ಕಡಿಮೆಯಾಗಿ 22,023ಕ್ಕೆ ಅಂತ್ಯಗೊಂಡಿತು.

ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಎನ್‌ಟಿಪಿಸಿ, ಎಚ್‌ಸಿಎಲ್ ಟೆಕ್ನಾಲಜೀಸ್, ಲಾರ್ಸನ್ ಆ್ಯಂಡ್ ಟೊಬ್ರೊ, ಇನ್ಫೊಸಿಸ್, ಟೆಕ್ ಮಹೀಂದ್ರ ಮತ್ತು ಎಸ್‌ಬಿಐ ಷೇರಿನ ಮೌಲ್ಯ ಕಂಡಿವೆ. ಭಾರ್ತಿ ಏರ್‌ಟೆಲ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಟಿಸಿಎಸ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಷೇರಿನ ಮೌಲ್ಯ ಏರಿಕೆಯಾಗಿವೆ. ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.51 ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.25ರಷ್ಟು ಇಳಿಕೆ ಆಗಿದೆ.

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)		ಚಾಲಿ	35000-36699
ಕೋಕ	18000-28500	ಕೋಕ	24099-26099
ಹೊಸತು	28500-34500	ಹೊಸಚಾಲಿ	32089-35899
ಹಳತು	34500-43500	ಕೆಂಪುಗೋಟು	31689-34299
ಕುಮಟ		ರಾಶಿ	42899-46600
ಚಿಪ್ಪು	23089-28019	ತಟ್ಟಿಬೆಟ್ಟೆ	37099-42099
ಕೋಕ	12099-23599	**ಶಿರಸಿ**	
ಫ್ಯಾಕ್ಟರಿ	11509-21129	ಬೆಟ್ಟೆ	36218-44561
ಹಳೆಚಾಲಿ	33899-37099	ಬಿಳಿಗೋಟು	22199-31399
ಹೊಸಚಾಲಿ	30099-34199	ಚಾಲಿ	31698-36899
ಪುತ್ತೂರು		ಕೆಂಪುಗೋಟು	25891-34868
ಹೊಸತು	26500-35000	ರಾಶಿ	42199-46899
ಶಿವಮೊಗ್ಗ		**ಯಲ್ಲಾಪುರ**	
ಬೆಟ್ಟೆ	43599-54100	ಅಪಿ	54399-54419
ಗೊರಬಲು	15169-35669	ಬಿಳಿಗೋಟು	21899-32131
ರಾಶಿ	32569-48500	ಚಾಲಿ	33305-38189
ಸರಕು	46600-80100	ಕೋಕ	14899-31099
ಸಿದ್ದಾಪುರ		ಕೆಂಪುಗೋಟು	24899-36299
ಬಿಳಿಗೋಟು	24909-29099		

ಮುಂಬೈ ಧಾರಣೆ

ಶೇಂಗಾ

15-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	1010 (1005)
ಪಾಮ್ ವಾರದ ಡೆಲಿವರಿ	960 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹65,200 (65,150)
ಬೆಳ್ಳಿ ಕೆ.ಜಿ ₹74,200 (73,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಡಬ್ಲ್ಯುಪಿಎಲ್: ಪೆರಿ ಅರ್ಧಶತಕ • ಹಾಲಿ ಚಾಂಪಿಯನ್ ಮುಂಬೈಗೆ ಸೋಲು

ಫೈನಲ್‌ಗೆ ಮುನ್ನಡೆದ ಆರ್‌ಸಿಬಿ

ನವದೆಹಲಿ: ಕೊನೆಯ ಕೆಲವು ಓವರುಗಳನ್ನು ಬಿಗುವಾಗಿ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ಮಹಿಳಾ ಪ್ರೀಮಿಯರ್ ಲೀಗ್‌ನ ಪ್ಲೇ ಆಫ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ಮೇಲೆ ಶುಕ್ರವಾರ ಐದು ರನ್‌ಗಳ ರೋಚಕ ಜಯ ಪಡೆದು ಮೊದಲ ಸಲ ಫೈನಲ್ ತಲುಪಿತು.

ಆಲ್‌ರೌಂಡರ್ ಎಲಿಸ್ ಪೆರಿ (66 ಮತ್ತು 29ಕ್ಕೆ1) ಮತ್ತೊಮ್ಮೆ ಇದೇ ಎದುರಾಳಿಯ ವಿರುದ್ಧ ಗಮನಸೆಳೆದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 136 ರನ್‌ಗಳ ಗುರಿ ಎದುರಿಸಿದ್ದ ಮುಂಬೈ ಕೊನೆಯ ಮೂರು ಓವರ್‌ಗಳಿದ್ದಾಗ 3 ವಿಕೆಟ್‌ಗೆ 115 ರನ್ ಗಳಿಸಿದ್ದು ಉತ್ತಮ ಸ್ಥಿತಿಯಲ್ಲಿತ್ತು.

ಆದರೆ ಕನ್ನಡತಿ ಶ್ರೇಯಾಂಕ ಪಾಟೀಲ ಮತ್ತು ಸೋಫಿ ಮೊಲಿನೆಕ್ಸ್ ಕ್ರಮವಾಗಿ 18 ಮತ್ತು 19ನೇ ಓವರ್‌ನಲ್ಲಿ ತಲಾ ನಾಲ್ಕು ರನ್ ಮಾತ್ರ ನೀಡಿ ಒಂದೊಂದು ವಿಕೆಟ್ ಪಡೆದು ಎದುರಾಳಿ ಮೇಲೆ ಒತ್ತಡ ಹೇರಿದ್ದರು. ಶ್ರೇಯಾಂಕ ಎದುರಾಳಿ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ (33) ವಿಕೆಟ್ ಕೂಡ ಪಡೆದು ಹೊಡೆತ ನೀಡಿದ್ದರು.

ಕೊನೆಯ ಓವರ್‌ನಲ್ಲಿ ಮುಂಬೈ ಗೆಲುವಿಗೆ 12 ರನ್‌ಗಳ ಅಗತ್ಯವಿತ್ತು. ಆದರೆ ಆಶಾ ಶೋಭನಾ ಬರೇ ಆರು ರನ್ ಮಾತ್ರ ನೀಡಿ ಪೂಜಾ ವಸ್ತ್ರಕಾರ್ ವಿಕೆಟ್ ಪಡೆದರು.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎಲ್ಲಿಸ್ ಪೆರಿ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಅಮೇಲಿಯಾ ಕೆರ್ ಔಟಾಗದೇ 27 ರನ್ ಗಳಿಸಿದರು. ಉಳಿದಂತೆ ಯಾರೂ ಪ್ರತಿರೋಧ ತೋರಲಿಲ್ಲ.

ಆರ್‌ಸಿಬಿ ತಂಡ ಭಾನುವಾರ (ಮಾ. 17) ನಡೆಯುವ ಫೈನಲ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟ್ ಮಾಡಿದ್ದ ಬೆಂಗಳೂರು ತಂಡಕ್ಕೆ ಎಲಿಸ್ ಪೆರಿ ಮತ್ತೊಮ್ಮೆ ಅರ್ಧಶತಕದ ಮೂಲಕ ಆಸರೆಯಾದರು.

ಅವರ 66 ರನ್‌ಗಳನ್ನು (50 ಎಸೆತ, 4x8, 1X6) ಬಿಟ್ಟರೆ ಉಳಿದವರಿಂದ ಉಪಯುಕ್ತ ಆಟ ಬರಲಿಲ್ಲ. ಮುಂಬೈ ಬೌಲರ್‌ಗಳು ಶಿಸ್ತುಬದ್ಧ ದಾಳಿಯಿಂದ ಬೆಂಗಳೂರು ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಆಫ್‌ಬ್ರೇಕ್ ಬೌಲರ್ ಹೇಯ್ಲಿ ಮ್ಯಾಥ್ಯೂಸ್ (4 ಓವರುಗಳಲ್ಲಿ 18ಕ್ಕೆ2) ಮೊದಲ ಓವರ್‌ನಲ್ಲೇ ಅನುಭವಿ ಸೋಫಿ ಡಿವೈನ್ ಅವರ ವಿಕೆಟ್ ಪಡೆದರು. ಮೂರನೇ ಓವರ್‌ನಲ್ಲಿ ನಾಯಕಿ ಮಂದಾನ ಆಕ್ರಮಣದ ಆಟಕ್ಕೆ ಮುಂದಾಗಿ, ಶಿವರ್ ಬ್ರಂಟ್ ಬೌಲಿಂಗ್‌ನಲ್ಲಿ ಡೀಪ್ ಕವರ್‌ನಲ್ಲಿ ಕ್ಯಾಚಿತ್ತರು.

ಒಂದೆಡೆ ವಿಕೆಟ್‌ಗಳು ಬೀಳುತ್ತಿದ್ದರೂ, ಇನ್ನೊಂದೆಡೆ ಪೆರಿ ಅವರು ಉತ್ತಮ ಲಯದಲ್ಲೇ ಆಡಿದರು. ಎಂಟು ಸೊಗಸಾದ ಬೌಂಡರಿಗಳನ್ನು ಬಾರಿಸಿದ ಅವರು, ಶಬ್ನಿಮ್ ಇಸ್ಮಾಯಿಲ್ ಎಸೆತದಲ್ಲಿ ಪಾಯಿಂಟ್ ಮತ್ತು ಶಾರ್ಟ್‌ಥರ್ಡ್ ಮ್ಯಾನ್ ನಡುವಿನಿಂದ ಬಾರಿಸಿದ ಲೇಟ್ ಕಟ್ ಬೌಂಡರಿ ಆಕರ್ಷಕವಾಗಿತ್ತು.

ಕೊನೆಯಲ್ಲಿ ಜಾರ್ಜಿಯಾ ವೇರ್‌ಹ್ಯಾಮ್ (ಔಟಾಗದೇ 18, 10 ಎಸೆತ) ರನ್ ಗಳಿಕೆಗೆ ಕೊಂಚ ವೇಗ ನೀಡಿದರು.

ಸ್ಕೋರುಗಳು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರುಗಳಲ್ಲಿ 6 ವಿಕೆಟ್‌ಗೆ 135 (ಎಲ್ಲಿಸ್ ಪೆರಿ 66, ಜಾರ್ಜಿಯಾ ವೇರ್‌ಹ್ಯಾಮ್ ಔಟಾಗದೇ 18; ಹೇಯ್ಲಿ ಮ್ಯಾಥ್ಯೂಸ್ 18ಕ್ಕೆ2, ನಾಟ್ ಶಿವರ್ ಬ್ರಂಟ್ 18ಕ್ಕೆ2, ಸೈಕಾ ಇಶಾಖ್ 27ಕ್ಕೆ2); ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 130 (ನಾಟ್ ಶಿವರ್ ಬ್ರಂಟ್ 23, ಹರ್ಮನ್‌ಪ್ರೀತ್ ಕೌರ್ 33, ಅಮೇಲಿಯಾ ಕೆರ್ ಔಟಾಗದೇ 23; ಶ್ರೇಯಾಂಕ ಪಾಟೀಲ 16ಕ್ಕೆ2, ಪೆರಿ 29ಕ್ಕೆ1).

ಪಂದ್ಯದ ಆಟಗಾರ್ತಿ: ಎಲ್ಲಿಸ್ ಪೆರಿ

ಐಸಿಸಿ ವಾರ್ಷಿಕ ಮಹಾಸಭೆಯಲ್ಲಿ ಸಮ್ಮತಿ: ಟಿ20 ವಿಶ್ವಕಪ್‌ನಿಂದ ಜಾರಿ

ಏಕದಿನ, ಟಿ20ಗೆ 'ಸ್ಟಾಪ್ ಕ್ಲಾಕ್' ಜಾರಿ

ದುಬೈ (ಪಿಟಿಐ): ಕಾಲಹರಣ ತಡೆಗಟ್ಟುವ ಕ್ರಮವಾಗಿ 'ಸ್ಟಾಪ್ ಕ್ಲಾಕ್' ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ಪ್ರಕಟಿಸಿದೆ.

ಇದರ ಅನ್ವಯ ಫೀಲ್ಡಿಂಗ್ ಮಾಡುವ ತಂಡ ಹಿಂದಿನ ಓವರ್ ಮುಗಿಸಿ ಹೊಸ ಓವರನ್ನು 60 ಸೆಕೆಂಡುಗಳ ಒಳಗೆ ಆರಂಭಿಸಬೇಕಾಗುತ್ತದೆ. ಇಲ್ಲವಾದರೆ ದಂಡದ ರೂಪದಲ್ಲಿ ರನ್‌ಗಳನ್ನು ನೀಡಬೇಕಾಗುತ್ತದೆ.

ಇದು ಈ ವರ್ಷದ ಜೂನ್‌ನಿಂದಲೇ ಏಕದಿನ, ಟಿ20 ಪಂದ್ಯದಿಂದಲೇ ಜಾರಿಗೆ ಬರಲಿದೆ.

ಈಗ ಪ್ರಾಯೋಗಿಕ ಹಂತದಲ್ಲಿರುವ ಸ್ಟಾಪ್ ಕ್ಲಾಕ್ ವ್ಯವಸ್ಥೆಯನ್ನು 2023ರ ಡಿಸೆಂಬರ್‌ನಲ್ಲಿ ಪರಿಚಯಿಸಲಾಗಿತ್ತು. ಜೂನ್ 1ರಿಂದ ಆರಂಭವಾಗುವ ಟಿ20 ವಿಶ್ವಕಪ್ ನಿಂದ ಆಟದ ಪ್ರಮಾಣೀಕೃತ ನಿಯಮಗಳಲ್ಲಿ ಸ್ಟಾಪ್ ಕ್ಲಾಕ್ ಅನ್ನು ಸೇರ್ಪಡೆ ಮಾಡಲಾಗುತ್ತದೆ. ಈ ಬಾರಿಯ ಟಿ20 ವಿಶ್ವಕಪ್ ವೆಸ್ಟ್ ಇಂಡೀಸ್ ಮತ್ತು ಅಮೆರಿಕದ ಜಂಟಿ ಆತಿಥ್ಯದಲ್ಲಿ ನಡೆಯಲಿದೆ.

60 ಸೆಕೆಂಡುಗಳ ಒಳಗೆ ತಂಡ ಓವರ್ ಆರಂಭಿಸಲು ವಿಫಲವಾದಲ್ಲಿ ಎರಡು ಸಲ ಎಚ್ಚರಿಕೆ ನೀಡಲಾಗುತ್ತದೆ. ನಂತರದ ಪ್ರತಿ ಉಲ್ಲಂಘನೆಗೆ ಐದು ರನ್‌ಗಳನ್ನು ಎದುರಾಳಿ ತಂಡಕ್ಕೆ ದಂಡವಾಗಿ ನೀಡಬೇಕಾಗುತ್ತದೆ.

'ಜೂನ್ 2024ರಿಂದ ಅನ್ವಯವಾಗುವಂತೆ ಎಲ್ಲ ಏಕದಿನ ಮತ್ತು ಟಿ20 ಪಂದ್ಯಗಳಲ್ಲಿ ಸ್ಟಾಪ್‌ಕ್ಲಾಕ್ ವ್ಯವಸ್ಥೆ ಅನುಷ್ಠಾನವಾಗಲಿದೆ. ಇದರಂತೆ ಮೊದಲು ಟಿ20 ವಿಶ್ವಕಪ್‌ನಿಂದ ಇದು ಆರಂಭವಾಗಲಿದೆ' ಎಂದು ಐಸಿಸಿ ತನ್ನ ವಾರ್ಷಿಕ ಮಹಾಸಭೆಯ ನಂತರ ಹೇಳಿಕೆಯಲ್ಲಿ ತಿಳಿಸಿದೆ.

'ಇದರ ಟ್ರಯಲ್ ಬರುವ ಏಪ್ರಿಲ್‌ವರೆಗೆ ನಡೆಯಬೇಕಿತ್ತು. ಆದರೆ ಈ ಪ್ರಯೋಗ ಈಗಾಗಲೇ ನಿರೀಕ್ಷಿತ ಫಲಿತಾಂಶಗಳನ್ನು ನೀಡಿದೆ. ಪಂದ್ಯಗಳು ನಿಗದಿ ಅವಧಿಯಲ್ಲಿ ಮುಗಿಯುತ್ತಿದ್ದು, ಪ್ರತಿ ಪಂದ್ಯದಲ್ಲಿ 20 ನಿಮಿಷಗಳವರೆಗೆ ಉಳಿತಾಯವಾಗುತ್ತಿದೆ' ಎಂದು ಹೇಳಿಕೆ ತಿಳಿಸಿದೆ. 60 ರಿಂದ 0ವರೆಗೆ ಕೌಂಟ್‌ಡೌನ್ ಮಾಡುವ ಎಲೆಕ್ಟ್ರಾನಿಕ್ ಗಡಿಯಾರವನ್ನು ಕ್ರೀಡಾಂಗಣದಲ್ಲಿ ಅಳವಡಿಸಲಾಗುತ್ತದೆ. ಕ್ಲಾಕ್‌ನ ಅರಂಭವನ್ನು ಮೂರನೇ ಅಂಪೈರ್ ನಿರ್ಧರಿಸಲಿದ್ದಾರೆ. ಆದರೆ ಐಸಿಸಿಯು ನಿಯಮಗಳಿಗೆ ಕೆಲವು ಅಪವಾದಗಳನ್ನೂ ನಿಗದಿಪಡಿಸಿದೆ. ಆರಂಭವಾದ ಕೌಂಟ್‌ಡೌನ್‌ಅನ್ನು ಕೆಲವು ಸಂದರ್ಭಗಳಲ್ಲಿ ರದ್ದುಗೊಳಿಸಲು ಅವಕಾಶವಿದೆ. ಓವರುಗಳ ನಡುವೆ ಹೊಸ ಬ್ಯಾಟರ್ ಆಡಲು ಬಂದಲ್ಲಿ, ಅಧಿಕೃತ ಡ್ರಿಂಕ್ಸ್ ವಿರಾಮದ ವೇಳೆ, ಫೀಲ್ಡರ್ ಅಥವಾ ಬ್ಯಾಟರ್ ಗಾಯಾಳಾದಾಗ ಮೈದಾನದಲ್ಲೇ ಚಿಕಿತ್ಸೆ ನೀಡುವ ವೇಳೆ ಕ್ಷಣಗಣನೆ ರದ್ದುಮಾಡಲಾಗುತ್ತದೆ. ಕೆಲಸಂದರ್ಭಗಳಲ್ಲಿ ಪರಿಸ್ಥಿತಿ, ಕ್ಷೇತ್ರರಕ್ಷಣೆ ಮಾಡುವ ತಂಡದ ಕೈಮೀರಿದಲ್ಲಿ ಆಗಲೂ ಕ್ಲಾಕ್‌ನ ಕ್ಷಣಗಣನೆ ಸಕ್ರಿಯಗೊಳ್ಳುವುದಿಲ್ಲ' ಎಂದೂ ಐಸಿಸಿ ತಿಳಿಸಿದೆ.

ಫೀಲ್ಡಿಂಗ್ ಮಾಡುವ ತಂಡಗಳು, ತಂತ್ರದ ಭಾಗವಾಗಿ ಪ್ರತಿ ಎಸೆತಗಳ ಮಧ್ಯೆ ಕ್ಷೇತ್ರರಕ್ಷಕರನ್ನು ಬದಲಾಯಿಸಿ ಪಂದ್ಯವನ್ನು ನಿಧಾನಗೊಳಿಸುತ್ತವೆ. ಇದುವರೆಗೆ ತಂಡ ಮತ್ತು ನಾಯಕನಿಗೆ ಹಣದ ರೂಪದಲ್ಲಿ ದಂಡ ವಿಧಿಸಲಾಗುತಿತ್ತು. ಆದರೆ ಇದು ಕಾಲಹರಣ ತಂತ್ರವನ್ನು ಪೂರ್ಣಪ್ರಮಾಣದಲ್ಲಿ ತಡೆಗಟ್ಟುವಲ್ಲಿ ವಿಫಲವಾಗಿದೆ.

ಟಿ20 ವಿಶ್ವಕಪ್: ಫೈನಲ್, ಸೆಮಿಗೆ ಮೀಸಲು ದಿನ

ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯಗಳಿಗೆ (ಜೂನ್ 27) ಮತ್ತು ಫೈನಲ್‌ಗೆ (ಜೂನ್ 29) ಮೀಸಲು ದಿನ ನಿಗದಿಪಡಿಸಲು ಐಸಿಸಿ ಅಂಗೀಕಾರ ನೀಡಿದೆ. ಲೀಗ್ ಮತ್ತು ಸೂಪರ್ ಎಂಟು ಹಂತದಲ್ಲಿ ಪಂದ್ಯವೊಂದು ಪೂರ್ಣ ಎನಿಸಿಕೊಳ್ಳಬೇಕಾದರೆ ಎರಡನೆಯದಾಗಿ ಬ್ಯಾಟ್ ಮಾಡುವ ತಂಡ ಕಡೇಪಕ್ಷ ಐದು ಓವರ್‌ಗಳನ್ನಾದರೂ ಆಡಬೇಕಾಗುತ್ತದೆ. ಆದರೆ, ನಾಕೌಟ್ ಪಂದ್ಯಗಳಿಗೆ ಎರಡನೇಯದಾಗಿ ಬ್ಯಾಟ್ ಮಾಡುವ ತಂಡವೊಂದು ಕನಿಷ್ಠ 10 ಓವರುಗಳನ್ನಾದರೂ ಆಡಬೇಕಾಗುತ್ತದೆ.

ಭಾರತ ಮತ್ತು ಶ್ರೀಲಂಕಾ ಜಂಟಿ ಆತಿಥ್ಯದಲ್ಲಿ ನಡೆಯುವ 2026ರ ವಿಶ್ವಕಪ್‌ಗೆ ಅರ್ಹತಾ ಪ್ರಕ್ರಿಯೆಗೂ ಐಸಿಸಿ ಸಮ್ಮತಿಯ ಮುದ್ರೆಯೊತ್ತಿದೆ. ಟೂರ್ನಿಯಲ್ಲಿ 20 ತಂಡಗಳು ಆಡಲಿದ್ದು, 12 ತಂಡಗಳು ನೇರವಾಗಿ ಪ್ರವೇಶ ಪಡೆಯುತ್ತವೆ. 2024ರ ವಿಶ್ವಕಪ್‌ನಲ್ಲಿ ಮೊದಲ ಎಂಟು ಸ್ಥಾನ ಪಡೆಯುವ ತಂಡಗಳ ಜೊತೆಗೆ ಸ್ವಯಂ ಆಗಿ ಅರ್ಹತೆ ಗಳಿಸುವ ಭಾರತ ಮತ್ತು ಶ್ರೀಲಂಕಾ ಇರಲಿವೆ. 2024ರ ಜೂನ್ 30ರ ರ್‍ಯಾಂಕಿಂಗ್‌ನಲ್ಲಿ ನಂತರದ ಎರಡು ಉತ್ತಮ ಸ್ಥಾನ ಪಡೆಯುವ ತಂಡಗಳು ಈ ಹತ್ತು ತಂಡಗಳನ್ನು ಸೇರಿಕೊಳ್ಳಲಿವೆ.

ಉಳಿದ ಎಂಟು ಸ್ಥಾನಗಳನ್ನು ಐಸಿಸಿ ಪ್ರಾದೇಶಿಕ ಅರ್ಹತಾ ಟೂರ್ನಿಗಳ ಮೂಲಕ ಭರ್ತಿ ಮಾಡಲಾಗುತ್ತದೆ.

ಅಭ್ಯಾಸ ಪಂದ್ಯದಲ್ಲಿ ಆರ್ಚರ್ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷ ಮೇ ತಿಂಗಳಲ್ಲಿ ಕೊನೆಯ ಬಾರಿ ಸ್ಪರ್ಧಾತ್ಮಕ ಕ್ರಿಕೆಟ್ ಆಡಿದ್ದ ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್ ಅವರು ತಮ್ಮದೇ ಕೌಂಟಿ ತಂಡವಾದ ಸಸ್ಸೆಕ್ಸ್ ಕ್ಲಬ್ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಉತ್ತಮ ಲಯದಿಂದ ಬೌಲಿಂಗ್ ಮಾಡಿದರು. ಕೆಎಸ್‌ಸಿಎ ಇಲೆವನ್ ಪರ ಏಳು ಓವರ್ ಬೌಲಿಂಗ್ ಮಾಡಿ 22 ರನ್‌ಗೆ ಎರಡು ವಿಕೆಟ್ ಪಡೆದು ಮಾಮೂಲಿ ಲಯಕ್ಕೆ ಮರಳುತ್ತಿರುವುದನ್ನು ನಿರೂಪಿಸಿದರು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ 2 ದಿನಗಳ ಪಂದ್ಯ ಡ್ರಾದಲ್ಲಿ ಮುಕ್ತಾಯವಾಯಿತು. ಈ ಪಂದ್ಯದಲ್ಲಿ ಆರ್ಚರ್ ಬೌಲಿಂಗ್ ಗಮನ ಸೆಳೆಯಿತು. ಕಳೆದ ಐಪಿಎಲ್ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದ 28 ವರ್ಷದ ಆರ್ಚರ್ ಟೂರ್ನಿಯ ಮಧ್ಯದಲ್ಲೇ ನಿರ್ಗಮಿಸಿದ್ದರು. ಮೇ ತಿಂಗಳಲ್ಲಿ ಅವರು ಮೊಣಕೈ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.



ಜೋಫ್ರಾ ಆರ್ಚರ್

ಸಸ್ಸೆಕ್ಸ್ ಮುನ್ನಡೆ: ಆರ್ಚರ್ ಅತಿಥಿ ಆಟಗಾರನಾಗಿ ಆಡಿದರೂ ಕೆಎಸ್‌ಸಿಎ ಇಲೆವನ್, ಸಸೆಕ್ಸ್ ಕೌಂಟಿ ತಂಡ ಈ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಪಡೆಯುವುದನ್ನು ಮತ್ತು ಒಟ್ಟಾರೆ ಮೇಲುಗೈ ಪಡೆಯುವುದನ್ನು ತಡೆಯಲು ಆಗಲಿಲ್ಲ.

ಜೇಮ್ಸ್ ಕೋಲ್ಸ್ ಮತ್ತು ಟಾಮ್ ಅಲ್ಸೂಪ್ ಅವರ ಅರ್ಧಶತಕದ ನೆರವಿನಿಂದ ಸಸ್ಸೆಕ್ಸ್ ಕ್ಲಬ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 162 ರನ್ ಮುನ್ನಡೆ ಪಡೆಯಿತು. ಆರ್ಚರ್ ಎಕ್ಸ್‌ಪ್ರೆಸ್ ವೇಗದಲ್ಲಿ ಬೌಲ್ ಮಾಡಿದರು.

ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 49.1 ಓವರ್‌ಗಳಲ್ಲಿ 201 ರನ್ ಗಳಿಸಿತು. ಇದಕ್ಕೆ ಪ್ರತಿಯಾಗಿ ಸಸ್ಸೆಕ್ಸ್ ತಂಡವು ಜೇಮ್ಸ್ ಕೋಲ್ಸ್ (87;107ಎ), ಟಾಮ್ ಅಲ್ಸೂಪ್ (60; 109ಎ) ಅವರ ಬ್ಯಾಟಿಂಗ್ ಬಲದಿಂದ 71.4 ಓವರ್‌ಗಳಲ್ಲಿ 365 ರನ್ ಕಲೆಹಾಕಿತು. ಕೆಎಸ್‌ಸಿಎ ಪರವಾಗಿ ಎಡಗೈ ಸ್ಪಿನ್ನರ್ ಪಾರಸ್ ಗುರುಬಕ್ಷ್ ಆರ್ಯ ಐದು ವಿಕೆಟ್ ಪಡೆದು ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕೆಎಸ್‌ಸಿಎ ಇಲೆವನ್ 201. ಸಸ್ಸೆಕ್ಸ್ ಕ್ಲಬ್: 71.4 ಓವರ್‌ಗಳಲ್ಲಿ 365 (ಜೇಮ್ಸ್ ಕೋಲ್ಸ್ 87, ಟಾಮ್ ಅಲ್ಸೂಪ್ 60; ಪಾರಸ್ ಗುರುಬಕ್ಷ್ ಆರ್ಯ 80ಕ್ಕೆ 5, ಜೋಫ್ರಾ ಆರ್ಚರ್ 22ಕ್ಕೆ 2. ಎರಡನೇ ಇನಿಂಗ್ಸ್: ಕೆಎಸ್‌ಸಿಎ ಇಲೆವನ್ 4 ವಿಕೆಟ್‌ಗೆ 162

ಐಪಿಎಲ್: ಡೆಲ್ಲಿಗೆ ಗಿಡಿ ಬದಲು ಮೆಕ್‌ಗುರ್ಕ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕದ ವೇಗದ ಬೌಲರ್ ಲುಂಗಿ ಗಿಡಿ ಅವರು ಗಾಯದ ಕಾರಣ ಐಪಿಎಲ್‌ನಿಂದ ಹಿಂದೆ ಸರಿದಿದ್ದಾರೆ. ಅವರು ಡೆಲ್ಲಿ ಕ್ಯಾಪಿಟಲ್ಸ್ ಪರ ಆಡಬೇಕಿತ್ತು.

ಗಿಡಿ ಬದಲು ಡೆಲ್ಲಿ ಕ್ಯಾಪಿಟಲ್ಸ್, ಆಸ್ಟ್ರೇಲಿಯಾದ ಆಲ್‌ರೌಂಡರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಡೆಲ್ಲಿ ಅವರನ್ನು ಸೇರಿಸಿಕೊಂಡಿದೆ. ಬಿರುಸಿನ ಹೊಡೆತಗಳ ಆರಂಭ ಆಟಗಾರ ಮತ್ತು ಲೆಗ್ ಸ್ಪಿನ್ನರ್ ಆಗಿರುವ, 21 ವರ್ಷದ ಮೆಕ್‌ಗುರ್ಕ್ ಕಳೆದ ತಿಂಗಳಷ್ಟೇ ವಿಂಡೀಸ್ ವಿರುದ್ಧ ಏಕದಿನ ಸರಣಿಯಲ್ಲಿ ಆಸ್ಟ್ರೇಲಿಯಾ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಮೀಸಲು ನಿಧಿಯಲ್ಲಿ ಅವರು ₹50 ಲಕ್ಷಕ್ಕೆ ಡೆಲ್ಲಿ ತಂಡ ಸೇರಿಕೊಂಡಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಭಾರತ ಪ್ರವಾಸದ ವೇಳೆ ಗಿಡಿ ಪಾದದ ನೋವಿಗೆ ಒಳಗಾಗಿದ್ದರು. ಎರಡು ವರ್ಷ ಐಪಿಎಲ್ ಆಡಿದ್ದ ಗಿಡಿ 25 ವಿಕೆಟ್‌ಗಳನ್ನು ಪಡೆದಿದ್ದಾರೆ.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಸಾತ್ವಿಕ್‌- ಚಿರಾಗ್ ಜೋಡಿಗೆ ಆಘಾತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ವಿಶ್ವದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಗುರುವಾರ ತಡರಾತ್ರಿ ನಡೆದ ಪುರುಷರ ಡಬಲ್ಸ್ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಸಾತ್ವಿಕ್–ಚಿರಾಗ್ ಜೋಡಿಯು 16-21, 15-21 ರಲ್ಲಿ ಮೂರನೇ ಶ್ರೇಯಾಂಕದ ಮೊಹಮ್ಮದ್ ಶೋಹಿಬುಲ್ ಫಿಕ್ರಿ ಮತ್ತು ಬಗಾಸ್ ಮೌಲಾನಾ ಅವರಿಗೆ ನೇರ ಗೇಮ್‌ಗಳಿಂದ ತಲೆಬಾಗಿತು.

ಮೊದಲ ಸುತ್ತಿನಲ್ಲಿ ಸಾತ್ವಿಕ್– ಚಿರಾಗ್ ಅವರು 21–18, 21–14 ರಿಂದ ಇಂಡೊನೇಷ್ಯಾದ ಹೆಂಡ್ರಾ ಸೆಟಿವಾನ್ ಮತ್ತು ಮೊಹಮ್ಮದ್ ಅಹ್ಸನ್ ಅವರನ್ನು ಮಣಿಸಿ ಶುಭಾರಂಭ ಮಾಡಿದ್ದರು. ಆದರೆ, 16ರ ಘಟ್ಟದ ಪಂದ್ಯದಲ್ಲಿ ಅದೇ ದೇಶದ ಜೋಡಿಯ ವಿರುದ್ಧ ಲಯ ಕಂಡುಕೊಳ್ಳಲು ವಿಫಲವಾದರು.

ಮಹಿಳೆಯರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ ಮತ್ತು ಅಶ್ವಿನಿ ಪೊನ್ನಪ್ಪ ಅವರೂ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೂರು ಗೇಮ್‌ಗಳ ಹೋರಾಟದಲ್ಲಿ ಪರಾಭವಗೊಂಡರು. ಅವರು 21-11, 11-21, 11-21ರಿಂದ ಚೀನಾದ ಜಾಂಗ್ ಶು ಷಿಯಾನ್ ಮತ್ತು ಜೆಂಗ್ ಯು ಅವರಿಗೆ ಶರಣಾದರು. ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ ಭಾರತದ ಆಟಗಾರ್ತಿಯರು ನಂತರ ಎಡವಿದರು.

ಟೂರ್ನಿಯಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆ ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಹಂತ ತಲುಪಿದ್ದು, ಮುಂದಿನ ಪಂದ್ಯದಲ್ಲಿ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಎದುರಿಸುವರು.

ಟಿಟಿ: ಶರತ್ ನಿರ್ಗಮನ

ಸಿಂಗಪುರ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ ಶರತ್ ಕಮಲ್ ಅವರು ಸಿಂಗಪುರ ಸ್ಮ್ಯಾಷ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಫ್ರಾನ್ಸ್‌ನ ಫೆಲಿಕ್ಸ್ ಲೆಬ್ರನ್ ವಿರುದ್ಧ ಪರಾಭವಗೊಂಡರು. ಈ ಮೂಲಕ ಟೂರ್ನಿಯಲ್ಲಿ ಭಾರತದ ಆಟಗಾರರ ಸವಾಲು ಅಂತ್ಯಗೊಂಡಿದೆ.



ಶರತ್ ಕಮಲ್

ಶುಕ್ರವಾರ ನಡೆದ ಪಂದ್ಯದಲ್ಲಿ ಶರತ್ ಅವರು 9–11, 2–11, 7–11, 11–9, 8–11ರಿಂದ ಫೆಲಿಕ್ಸ್ ಅವರ ಎದುರು ಸೋತರು. ಮೊದಲು ಮೂರು ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತದ ಆಟಗಾರ, ನಾಲ್ಕನೇ ಗೇಮ್‌ನಲ್ಲಿ ತಿರುಗೇಟು ನೀಡಿದರು. ಆದರೆ, ಐದನೇ ಗೇಮ್‌ನಲ್ಲಿ ಮತ್ತೆ ಮುಗ್ಗರಿಸಿದರು.

ಅರ್ಹತಾ ಸುತ್ತಿನಲ್ಲಿ ಗೆದ್ದು ಪ್ರಧಾನ ಸುತ್ತಿಗೆ ತಲುಪಿದ್ದ ವಿಶ್ವದ 88ನೇ ಕ್ರಮಾಂಕದ ಶರತ್ ಅವರು 16ರ ಘಟ್ಟದ ಪಂದ್ಯದಲ್ಲಿ ವಿಶ್ವದ 22ನೇ ಕ್ರಮಾಂಕದ ಒಮರ್ ಅಸ್ಸಾರ್ (ಈಜಿಪ್ಟ್) ಅವರನ್ನು ಸೋಲಿಸಿದ್ದರು.

ಬೆಂಗಳೂರು ತಂಡ ಜಯಭೇರಿ

ಬೆಂಗಳೂರು: ಹಾಕ್ಲೋಲೆನ್ ಕಿಪ್ಜೆನ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಂಗಳೂರು ಸಿಟಿ ಎಫ್‌.ಸಿ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 1–0ಯಿಂದ ರೂಟ್ಸ್ ಎಫ್‌ಎಸ್ ತಂಡವನ್ನು ಮಣಿಸಿತು.

ಗುರುವಾರ ನಡೆದ ಇತರ ಪಂದ್ಯದಲ್ಲಿ ಆರ್‌ಡಬ್ಲ್ಯುಎಫ್ ಎಫ್‌ಸಿ ತಂಡವು 4–2ರಿಂದ ಶ್ರೀ ಗಜಾನನ ಎಫ್‌ಸಿ ತಂಡದ ವಿರುದ್ಧ; ಎಜಿಒಆರ್‌ಸಿ ಎಫ್‌ಸಿ ತಂಡವು 5–0ಯಿಂದ ಬೆಂಗಳೂರು ಗನ್ನರ್ಸ್ ಎಫ್‌ಸಿ ವಿರುದ್ಧ ಜಯ ಸಾಧಿಸಿತು.

ಬಿ ಡಿವಿಷನ್: ಶುಕ್ರವಾರ ನಡೆದ ಬಿಡಿಎಫ್‌ಎ ಬಿ ಡಿವಿಷನ್‌ನ ಪಂದ್ಯದಲ್ಲಿ ಅಲ್ ಫತೇಹ್ ಎಫ್‌ಸಿ ತಂಡವು 2–1ರಿಂದ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ ತಂಡವನ್ನು ಸೋಲಿಸಿತು.



ಮಂಗಳೂರು ವಿ.ವಿ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತುಮಕೂರು: ಮಂಗಳೂರು ವಿಶ್ವವಿದ್ಯಾಲಯ ತಂಡವು ಇಲ್ಲಿನ ಸಾಹೇ ವಿಶ್ವವಿದ್ಯಾಲಯದ ವತಿಯಿಂದ ನಗರದ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಅಖಿಲ ಭಾರತ ಪುರುಷರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಮಂಗಳೂರು ತಂಡವು 30–27 ಅಂತರದಿಂದ ಹಾಲಿ ಚಾಂಪಿಯನ್ ಬೆಂಗಳೂರು ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು.

ಸೂಪರ್ ಲೀಗ್ ಹಂತದ ಪಂದ್ಯಗಳಲ್ಲಿ ಬೆಂಗಳೂರು ವಿ.ವಿಯು 32–27ರಿಂದ ಮಹಾರಾಷ್ಟ್ರದ ಸಾವಿತ್ರಿಬಾಯಿ ಫುಲೆ ವಿ.ವಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು ತಂಡವು 42–32ರಿಂದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿರುದ್ಧ ಜಯ ಗಳಿಸಿತು. ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ತಂಡವು ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ ತಂಡವನ್ನು ಸೋಲಿಸಿ ಮೂರನೇ ಸ್ಥಾನ ಪಡೆಯಿತು. ವಿವಿಧ ರಾಜ್ಯಗಳ 61 ತಂಡಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.7 ಕ್ರೀಡಾಪಟುಗಳು ಉತ್ತಮ ಕ್ರೀಡಾಪಟು ಪ್ರಶಸ್ತಿಗೆ ಭಾಜನಾದರು.





‘ಧೋನಿ ಜೊತೆ ಹೋಲಿಕೆ ಒಪ್ಪಲ್ಲ’

ನವದೆಹಲಿ (ಪಿಟಿಐ): ಧ್ರುವ್ ಜುರೇಲ್ ಅವರನ್ನು ಮಹೇಂದ್ರ ಸಿಂಗ್ ಧೋನಿ ಅವರೊಂದಿಗೆ ಹೋಲಿಕೆ ಮಾಡಲಾಗುತ್ತಿದೆ. ಆದರೆ ವಿಕೆಟ್ ಕೀಪರ್–ಬ್ಯಾಟರ್ ಜುರೇಲ್ ಇದನ್ನು ಒಪ್ಪುವುದಿಲ್ಲ. ಧೋನಿ ಅವರೊಂದಿಗೆ ಯಾರನ್ನೂ ತುಲನೆ ಮಾಡಲು ಸಾಧ್ಯವಿಲ್ಲ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮದೇ ಛಾಪು ಮೂಡಿಸುವತ್ತ ಗಮನಹರಿಸುವುದಾಗಿ ಅವರು ಶುಕ್ರವಾರ ಹೇಳಿದ್ದಾರೆ.

ಇಂಗ್ಲೆಂಡ್ ವಿರುದ್ಧ ಇತ್ತೀಚಿನ ಟೆಸ್ಟ್ ಸರಣಿಯಲ್ಲಿ ಪದಾರ್ಪಣೆ ಮಾಡಿದ್ದ ಜುರೇಲ್, ವಿಕೆಟ್ ಹಿಂದುಗಡೆ ಚುರುಕಾಗಿದ್ದರು. ಬ್ಯಾಟಿಂಗ್‌ನಲ್ಲೂ ಉಪಯುಕ್ತ ಕೊಡುಗೆ ನೀಡಿದ್ದರು. ಡಿಆರ್‌ಎಸ್ ಸಂದರ್ಭದಲ್ಲೂ ರೋಹಿತ್ ಶರ್ಮ ಅವರಿಗೆ ಸೂಕ್ಷ್ಮವಾಗಿ ಸಲಹೆ ನೀಡುತ್ತಿದ್ದರು.

ಹೀಗಾಗಿ, ವೀಕ್ಷಕ ವಿವರಣೆಗಾರ ಹಾಗೂ ದಿಗ್ಗಜ ಬ್ಯಾಟರ್ ಆಗಿದ್ದ ಸುನಿಲ್ ಗಾವಸ್ಕರ್ ಅವರು ಜುರೇಲ್ ಅವರನ್ನು ಧೋನಿಗೆ ಹೋಲಿಸಿದ್ದರು. ಆದರೆ, 23 ವರ್ಷದ ಜುರೇಲ್ ಈ ಹೋಲಿಕೆಯನ್ನು ನಯವಾಗಿ ನಿರಾಕರಿಸಿದರು.

‘ಧೋನಿ ಸರ್ ಜೊತೆ ನನ್ನನ್ನು ಹೋಲಿಸಿದ್ದಕ್ಕೆ ಕೃತಜ್ಞತೆಗಳು ಗಾವಸ್ಕರ್ ಸರ್. ಧೋನಿ ಸರ್ ಏನು ಮಾಡಿದ್ದಾರೆ ಅದನ್ನು ಬೇರೊಬ್ಬರು ಪುನರಾವರ್ತಿಸಲು ಆಗದು ಎಂದು ವೈಯಕ್ತಿಕವಾಗಿ ಹೇಳಬಯಸುವೆ’ ಎಂದು ಅವರು ಇಂಡಿಯಾ ಟುಡೇ ಕಾಂಕ್ಲೇವ್‌ನಲ್ಲಿ ತಿಳಿಸಿದ್ದಾರೆ. ‘ಧೋನಿ ಅವರಿಗೆ ಸಾಟಿಯಾಗಲು ಎಂದೆಂದೂ ಸಾಧ್ಯವಿಲ್ಲ. ನಾನು ಜುರೇಲ್ ಆಗಿಯೇ ಇರಬಯಸುತ್ತೇನೆ. ನಾನೇನು ಮಾಡುವೆನೊ, ಜುರೇಲ್ ಆಗಿಯೇ ಮಾಡುವೆ. ಧೋನಿ ಸರ್ ದಂತಕತೆ. ಅವರು ಹಾಗೆಯೇ ಇರುತ್ತಾರೆ’ ಎಂದು ಯುವ ವಿಕೆಟ್ ಕೀಪರ್ ಬಣ್ಣಿಸಿದರು.




ಭಾರತದ ವಿಕೆಟ್ ಕೀಪರ್ ಧ್ರುವ್ ಜುರೇಲ್. ಎಎಫ್‌ಪಿ ಚಿತ್ರ



20 ವರ್ಷದ ಬಳಿಕ ತ್ರಿಕೋನ ಸರಣಿ

ಕರಾಚಿ (ಎಎಫ್‌ಪಿ) : ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ನಡುವಿನ ಏಕದಿನ ಅಂತರರಾಷ್ಟ್ರೀಯ ತ್ರಿಕೋನ ಸರಣಿಗೆ ಆತಿಥ್ಯ ವಹಿಸುವುದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಶುಕ್ರವಾರ ತಿಳಿಸಿದೆ. ಇದು 20 ವರ್ಷಗಳ ನಂತರ ಪಾಕಿಸ್ತಾನದಲ್ಲಿ ನಡೆಯುವ ಮೊದಲ ಸರಣಿ ಆಗಿದೆ. ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸಭೆಯಲ್ಲಿ ಈ ಸರಣಿಗೆ ಹಸಿರು ನಿಶಾನೆ ತೋರಲಾಯಿತು ಎಂದು ಪಾಕಿಸ್ತಾನದ ಮಂಡಳಿಯು ತಿಳಿಸಿದೆ. 2009ರಲ್ಲಿ ಲಾಹೋರ್‌ನಲ್ಲಿ ಶ್ರೀಲಂಕಾ ತಂಡದ ಬಸ್ ಮೇಲೆ ಉಗ್ರರ ದಾಳಿ ನಡೆದಿತ್ತು. ಎರಡು ವರ್ಷಗಳ ನಂತರ ಪಾಕಿಸ್ತಾನವು ವಿಶ್ವಕಪ್ ಸಹ-ಆತಿಥ್ಯ ವಹಿಸುವ ಹಕ್ಕು ಕಳೆದುಕೊಂಡಿತು. ಆ ದಾಳಿಗಳ ನಂತರ ಭದ್ರತಾ ಕಳವಳ ಮುಂದುವರೆದವು.

2004 ರಲ್ಲಿ ಶ್ರೀಲಂಕಾ ಮತ್ತು ಜಿಂಬಾಬ್ವೆ ಒಳಗೊಂಡ ತ್ರಿಕೋನ ಸರಣಿಯನ್ನು ದೇಶವು ಕೊನೆಯದಾಗಿ ಆಯೋಜಿಸಿತ್ತು. 1996 ರ ವಿಶ್ವಕಪ್ ನಂತರ ದೇಶದಲ್ಲಿ ನಡೆದ ಮೊದಲ ಐಸಿಸಿ ಪಂದ್ಯಾವಳಿಯಾದ ಎಂಟು ರಾಷ್ಟ್ರಗಳ ಚಾಂಪಿಯನ್ಸ್ ಟ್ರೋಫಿಗೆ ಈ ತ್ರಿಕೋನ ಸರಣಿಯು ಸಿದ್ಧತೆಯಾಗಲಿದೆ ಎಂದು ಹೊಸದಾಗಿ ಆಯ್ಕೆಯಾದ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಹೇಳಿದ್ದಾರೆ.



ಪ್ರಜಾವಾಣಿ ಶನಿವಾರ • ಮಾರ್ಚ್ 16, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

BDA SITE For Sale, Anjanapura 5th G Block 30×40 North Facing, 10th Block 30×40 East Facing. Contact: 9008844447

ANJANAPURA 2ND Block BDA North facing Plot for SALE, 20×30, 30 Feet ROAD. Call: 8088799686

SALE BDA Anjanapura 5th G Block 30x40 south facing 95lakh also 20x30 East facing 2nd Block 55 lakh, Contact 9620041313/ 9945373839

BDA Allotted site for sale 60x40 north facing Anjanapura 5th block call Raju 9980493495/ 9483754853

Arkavathi Layout

ARKAVATHI LAYOUT 20x30 East, 20x30 West 2nd Block, 27x30 Corner 7th block, USR 7019770736/ 8951614989.

Banashankari

BANASHANKARI 2ND Stage, 30x40 FOUR BHK DUPLEX HOUSE, PADMANABHANAGAR 30×40 W/F, INDIVIDUAL HOUSE and R.R. NAGAR, BHEL LAYOUT, RESIDENTIAL SITES 30×40, 40×60 E/W/N. 9448684258

BANASHANKARI 6TH Stage, BDA 30X40, North Facing Site For Sale Contact : 9916809188 9606226222

SALE BSK 6th Stage 4th H Block 30x40 west facing 95 lakh also 40x60 facing 6th Block 1.72Cr Negotiable, all owners site 9945373839, 9620041313

Bannerghatta Road

SALE DC CONVERTED



30x40 BBMP 'A' Khata

30x40 East, West 39x21 Near Vijaya Bank Layout RTO, Avani Shringeri Nagar 35x60 Rs. 9250/- psft Agents Excuse. Call : 9343361697

AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

Devanahalli

30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

Hebbal

M.S.RAMAIAH NORTH City Behind Elements Mall, 40x60 West facing A Katha site sale Rs.12,500 psqft: 9886679696

Hanumanthnagar

30X40 EAST-FACING Site-Sale BBMP 'A'KATHA Nagendra Block_near PES.College, Hanumanthanagar 15,500/- P.Sft Negotiable. "AVM.REAL_ESTATE" 9945783334/ 9513666788"

HRBR Layout

ARKAVATHY LAYOUT BDA SITE SALE 30X40 19TH BLOCK 30 FEET ROAD RS 12500 SFT: 9886633233

Jigani

LAND FOR Sale, 65000 sqft. 1400/- psft. Koppa Ramasandra Road, Near Nirman Layout, Jigani Hobli, Bengaluru. 9845204368, 9945143615

Jayanagar

JAYANAGAR 2ND BLOCK 2BHK Flat 1414 Sft 1.60 Cr, 5th BLOCK Residential 45x90 West Facing 16Cr negotiate. Contact: ESHWERI ENTERPRISES 98454-97163

45/40 WEST facing Jayanagar 1st Block, Near Ashoka Pillar, Rs.6.30 Crore, KK REALTORSS KRISHNA 9741437555, 6366623666

Kengeri

40X60 SITE for sale near Raghavendra Swamy Matta, Kengeri Rs. 12500/- East facing. Lokesh- 9886201690.

Kumaraswamy Layout

BDA N/F 40x60 Site Sale #543 69th Cross 1st Stage Kumarswamy Layout. Near Vasavi Hospital & Bus Stand: 9844009086/ 9845344754

Kanakapura Road

SITE FOR Sale at Kanakapura Road 40x51 West, South Corner A-Khatha Gated Community Layout, Good Location, attached to Bank Officer Layout, walkable distance from Doddakallasandra Metro Station 1km from Prestige Falcon City-Forum Mall Konanakunte. Contact: 9964557280

SALE NARAYANA Nagar 1st Block 40x60 South facing 500 metres Metro station, Kanakapura Road, Contact: 9945373839/ 9620041313

Kempegowda Layout

"SEMI-COMMERCIAL"SITE SALE,NADAPRABHU KEMPEGOWDA LAYOUT 8th Block,'D' Sector, 55X100,W/F BDA,NOC, NNA,Conversion land,Legal Documents,₹5250/-sqft. Ph:9686469799

BDA APPROVED SITES SALE @ 4750 ARE ATTACHED TO 300FT ROAD KEMPEGOWDA LAYOUT: 9538330089/ 9538332103

Mallathalli

SITE FOR SALE NGEF MALLATHALLI 45x36 EAST FACING GOOD LOCATION CONTACT: 9980433004/ 8217392686

Nagarabhavi

25X40 EF Site for Sale BBMP A Katha Near Manasa Gangotri School Mudalapalya 9448050938/ 9035304455

North

FOR SALE
Residential property
East facing 65x40 Plot Well developed Residential layout in established Priyank Villas Community Near Main Road on route to DPS North, near Baglur Cross, Jala Hobli, Bangalore
FOR QUICK SALE BROKERS EXCUSE
Contact
99001 11838

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

VISVESHWARAIAH 7TH Block Attach BBMP A Katha 20x40 (East) 6800000/- Negotiable, Near Eastwest College: 9845550606

VISVESWARAIAH BDA 1st Block 30x40 Near 100ft Road and SMV 4th Block BDA 6750/-: 9964971895

30X40 BDA Site Sale Vishweshwariah Layout 2nd Block 8400 Negotiable, 4th Block 40x60 South 6800 Negotiable: 8892901567

BDA PLOT 60x40 SALE Rs. 12600/- Psft 40 Feet Road 1st Block Visweshwaraiah Layout SF: 9840793664/ 9790777639

AVAILABLE/ WANTED BDA Sites Vishweshwariah Layout 50x80, 40X60, 30X40, 20X30 Genuine Buyers And Sellers: 9743381719

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

VISVESWARIAH LAYOUT 5th Block near KLE College & 100 feet Rd BDA West facing 30X40 Site for immediate sale. HN 9900339878/ 9844039878.

Vidyaranyapura

SITE WITH Flats for Sale. 7000 sqft, Eight Apartments, a Good Water Supply, a Prime Site next to 1200 acres GKVK's Pristine Lungspace on the 6th Block of Vidyaranyapura, Bangalore. 9611293671.

House

BTM Layout

SALE G+2 HOUSE HBR LAYOUT 4TH BLOCK WEST FACING PLOT-1200SFT BUILTUP-2400SFT. 9535434647

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles at BEML Layout, Basaveshwaranagar, Bangalore. Clear Titles & 'A' Katha. Rs.5.75 Crores. Party going out of station, Immediate Registration. Contact: 9845765559/ 9845043282

HOUSE SALE Behind Chord Road Hospital Ground One BHK, First and Second 3 BHK Duplex East Facing on 550 Sqft 1.20 Cr. 9880443362

Chamarajpet

CHAMARAJPET ANANTHARAMAIAH Compound 11 Rooms Building, 4,000 Sqft. (4 Floors). Site 1425 Sqft. Contact: 9341260793.

Jayanagar

AVAILABLE PRIME Property Near Madhavan Park, 2400 sqft South Facing, Immediate Possession. Brokers Excuse. Contact: 7022705656

J P Nagar

J.P.NAGAR 6TH PHASE 22x30 NORTH 4 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

Nagarabhavi

"BRAND-NEW 4BHK Triplex House GF 1.shop, 2car parking, fully furnished,all amenities,Sale, RHCS Layout Annapoorneshwari-Nagar, N/E.Corner, Both'Side 40'Feet-Road. 9845463951"

Vasanth Nagar

HOUSE FOR sale in Vasanth Nagar near MCC contact Kushal 8105838503 or Thejus 8105569606.

Mysore

"SALE CORNER South-East Muda House 40x55 Lalithmahal Nagara/Alanahalli Layout 8500/- P.sq.ft negotiable. 7899708676

Flat

Kengeri

1 BHK BDA Flat for Sale at Kengeri East facing Rs. 15 lakhs. Lokesh- 9886201690.

Mysore Road

AVAILABLE LEASE 3BHK APARTMENT FLAT MYSORE ROAD OCCUPANCY 31ST MARCH 2024 RUPEES. 25 LAKHS: 9738223432

General

South

30X45 SOUTH/WEST facing corner site on MM Road for sale at Byatarayanapura, Mysore Road. Contact: 9845900432

FOR SALE: PRIME PROPERTY IN DEFENCE COLONY

Prime 8000 Sqft. Land for Sale in Defence Colony, Indiranagar, Bangalore. Excellent Visibility, Corner Plot Facing 80 Feet Road, Opposite Shell Petrol Bunk. Ideal for Developers/ Offices. Full Cheque Payment.

Call: 9448314766, 9886419080

FLAT FOR SALE

2 BHK +1 Room Bathroom Attached at BASAVANAGUDI

(Upper Floor) + Car Parking Carpet Area 1,000 Sq.ft. 1.3 Cr. Slightly Negotiable Bull Temple Road, Bangalore. Available for Visit Tomorrow from 11 am To 4 pm.

CALL: 9663890570

Prime Residential Plot for Sale



DC Converted Sites
Before HIRANANDANI Project Devanahalli
₹ 2599 per sqft
Upto 80% Bank Loan Available
❖ Black Top Roads
❖ Under Ground Drainage
❖ Fully Covered Compound for Entire Layout
❖ Individual Water Connection for Each Plot
Ready for Registration
7022160615 / 7993847390

FULL APARTMENT FOR SALE

Total 15 Flats, Site Measurement 35 x 90 Each Flat - 900 sq. ft Total Buildup 19000 sq ft (All 2 BHK, Parking, Lift, Borewell Facilities) Total Amount Rs. 3,25,00,000/- nego (Three Crore Twenty Five Lakh), (5 Years Old) (7 KM from Hennur Ring Road, Nagenahalli Kannur Panchayat, 300 mts Main Road for Apartment.) Present Rent : 1,70,000/- for College

Contact : M. Subramani (Owner): 9341242570

Office: # 21/2, Near Kullappa Circle, Subbannapalya, M.S. Nagar Post, Bengaluru - 560033

Agricultural Land

Kanakpura

10 ACRES Kannakpura only 35lakhs, 112 Acres Chamarajnagar only 13lakhs Contact only Buyers: 6364436973

Commercial Building

HSR Layout

HSR LAYOUT prime location Brand New Commercial Building For sale pls Contact Genuine buyers 9986447735

Jayanagar

"JAYANAGAR" 9TH Block Commercial 5150sqft Site Build-up350000sqft Rental income 10.5Lakhs, price 21Cr. Contact: 9945079777

Commercial Land

Outskirts

7 ACRES Industrial Conversion Harohalli Industrial Area, First Stage 6Cr per Acre. KK REALTORSS KRISHNA 9741437555, 6366623666

Commerical

Sarjapur Road

COMMERCIAL33000 SFT Suitable For Complex Near Dommasandra Circle Rs 6500/-Buyers Contact:8884501767

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

Farm House/ Land/ Resorts

Rajarajeshwari Nagar

LOOKING FOR Investors Upcoming Project Apartment With Mutual Benefit BEML 5th Stage Rajarajeshwari Nagar BBMP Approved A Khata 8300 Land Area Call: 7090909022/ 9108910278

Industrial & Factory

Jigani

INDUSTRIAL SITEFOR Sale in Jigani,Bangalore.Plot area:6000 sqft, Rate: 3800 sqft, Legal Documents. Contact: 9448793428

Residential/ Commercial

HRBR Layout

HOUSE SALE 600 SFT NEAR EMPIRE HOTEL. GROUND 1BHK, FIRST AND SECOND EACH 2 BHK. RENTAL INCOME RUPEES 60,000. 1.35 CRORES: 9886633233

REAL ESTATE BUYING

House

Jayanagar

WANTED HOUSE, FLAT FOR OWN USE JAYANAGAR ORJP NAGAR OR PADMANABNAGAR, NORTH FACING.7892576763.

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

WANTED 20X30 or 30x40 Site Anjanapura BDA Layout any Block & any Facing Contact: 9980978986

Kanakapura Road

WANTED SITE: 40x60, 30x40 NarayanaNagar, BCMC Layout, Anjanapura BDA, Banashankari 6th Stage, Gubbala, Agents Excuse. 6363726250.

Multiple Locations

WANTED BDA SITES Anjanapura- Arkavathi Banashankari 6th Stage, Vishweshwaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073

Vishweshwariah Layout

"BUYING/ SELLING" 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BDA-SITES WANTED Visheshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

GROUND AND First Floor 4000sqft each Available For Rent in Banashankari 2stage.Suitable For Offices/Hospital etc.Contact: 9845016868

Flats

SF 3BHK FLAT RENT in Sumukha Meadows on VishnuVardhan Road, Channsandra, Bangalore. 24hrs water supply, carpark,Lift. Contact: 9533339694, 9246369439.

Industrial And Factory

INDUSTRIAL SHED for RENT. Near Srirangapatna Mandya Beside New Bangalore Mysore Road. Contact: 9008739737

Godown

GODOWN/WAREHO USE FOR RENT: 10000 sqft, NH-66, main road Surathkal to Mangalore. Rent negotiable. Godown can be modified as per requirements; Contact: 7483465940

JOB OPPORTUNITIES

General

EMPLOYEE NEEDED! Business Development Officer for property developer company No investment, age above 30 years No experienced required, Earning Rs. 50,000/- per month Retired persons are eligible. Contact:- 9845334751.

ಮುಂಬರುವ ಹೊಸ ತಮಿಳು ಚಿತ್ರಕ್ಕೆ ಹೊಸ ಮುಖಗಳ ಹುಡುಗ-ಹುಡುಗಿಯರಿಗಾಗಿ ಆಡಿಶನ್ ಆಹ್ವಾನಿಸಲಾಗಿದೆ. (ಪಯಸ್ಸಿನ ಆದ್ಯತೆಯಿಲ್ಲ). ಆಸಕ್ತರು ಸಂಪರ್ಕಿಸಿ.
ಬೆಂಗಳೂರು ಕನ್ನಡದಲ್ಲಿ:
ನಂ.27, 5ನೇ ಮಹಡಿ, 4ನೇ ಕ್ರಾಸ್, 1ನೇ ಮುಖ್ಯ ರಸ್ತೆ, ಆಟ್ಟೂರು ಲೇಔಟ್, ಯಲಹಂಕ, ಬೆಂಗಳೂರು-64
Ph: 7338935353

Security & Detectives

WANTED FIELD OFFICER and OPERATION MANAGER for security company for White Field, Electronic City area. salary depends on experience- 9980911233,9980311233

Teachers/ Professors

REQUIRED EXPERIENCED Teachers for CBSE and State Board PRE-KG to Grade 10 All Subjects NTT/ DTT/ UG/ PG with B.Ed. Lecturers for PUC Science and Commerce: PHYSICS, CHEMISTRY MATHS, CS, ECO, B/S, ACCOUNTS, STATISTICS, HISTORY, KANNADA ENGLISH, HINDI PG with B.Ed CET/NEET level for Science MAHADEVA GROUP OF INSTITUTIONS Hoskote. 9980618815/ 9901070140/ 9740177907. Forward your resume to srisaieducationtrust2015@gmail.com

Part-Time Jobs

PART TIME Job SMS Typing work Laptop Sellphone Simcard Company Provide (Fee 1099): 7505708776/ 9389525534

OTHERS

For Sale

OWNER LEAVING IMMEDIATE SALE Leather Sofa Cots Dinning Fridge Cupboard Lot's More. Contact: 9845414482/ 7975436976

PUBLIC NOTICE

ಪ್ರಕಟಣೆ

ಲ್ಯೂಮಿಯರ್ ವೆಂಚರ್ಸ್ ಪ್ರೈ ಲಿ., ಜಿಗಣಿ, ಬೆಂಗಳೂರು ಇವರು ಹೇರುವಾರ ಶೇರುಗಳ ಮೂಲಕ ನಿಧಿ ಸಂಗ್ರಹಣೆಗಾಗಿ 16 ಮಾರ್ಚ್ 2024 ರಂದು ಇಜಿಎಂ ಏರ್ಪಡಿಸುತ್ತಿದ್ದಾರೆ.

CORRIGENDUM

In the Public Notice got issued through us by our client Sri. M.N. Ramesh, S/o. Sri. Narasimhaiah, S-6, "Dhanu" 1st Main, 2nd Cross, Vishwanna Layout, Shanthinagar, Tumkur Karnataka - 572102, in relation to the purchase of the property bearing No.598, 3rd Block, 2nd Stage, Rajamahal Vilas Extension, Corporation Ward No.100, Bengaluru City, while describing the property to be purchased by him in the schedule, due to oversight and inadvertence, it has been stated that "All that piece and parcel of 50% undivided share in the property instead of saying the entire property.

The schedule of the property to be purchased by our client be read as hereunder:

SCHEDULE

All that piece and parcel of the entire property bearing No.598, 3rd Block, 2nd Stage, Rajmahal Vilas Extension, Bangalore, Corporation Ward No.100, measuring East to West 15 Mtrs. And North to South 28 Mtrs. together with all rights, appurtenances whatsoever whether underneath or above surface and bounded on: East by: Property No. 599, West by: Property No.597, North by : Road, South by: Property No.583

M/s. C.V. Nagesh Associates, Advocates, No.33, Patalamma Temple Street, Basavanagudi, Bangalore-560 004.

Place : Bengaluru
Date : 14.03.2024

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ರಾಷ್ಟ್ರೋತ್ಥಾನ ಪರಿಷತ್

ನಂ. 93/1, ನೇಸರಪಡು, ಕೇಶವಶಿಲ್ಪ, ಕೆಂಪೇಗೌಡ ನಗರ, ಬೆಂಗಳೂರು – 560004
ಫೋನ್: 080 2661 2730/ 31/ 32, 94482 84602
ನಂ: RP/Tender/01/2024-25 ದಿನಾಂಕ: 16.03.2024

ಸಿವಿಲ್ ಕಾಮಗಾರಿಗಾಗಿ ಟೆಂಡರ್ ಆಹ್ವಾನ

(ರಾಷ್ಟ್ರೋತ್ಥಾನ ಪರಿಷತ್ ವೆಬ್ಸೈಟ್ ಮುಖಾಂತರ ಮಾತ್ರ)

ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳು ಶಾಲಾಕಟ್ಟಡ ನಿರ್ಮಾಣ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಅನ್ನು ಆಹ್ವಾನಿಸುತ್ತಿದ್ದಾರೆ. ಗುತ್ತಿಗೆದಾರರು ರಾಷ್ಟ್ರೋತ್ಥಾನ ಪರಿಷತ್‌ನ ವೆಬ್ಸೈಟ್ – www.rashtrotthana.org ಯಿಂದ ಟೆಂಡರ್ – ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಿಂಟ್ ಮಾಡಲಾದ ಪ್ರತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.03.2024 ಶನಿವಾರ, ಸಂಜೆ 5.30ರ ಒಳಗೆ ಪರಿಷತ್ತಿನ ಕೇಂದ್ರ ಕಚೇರಿಗೆ ಸಲ್ಲಿಸುವುದು.

ಸೂಚನೆ : ನಿಯಮ ಹಾಗೂ ಷರತ್ತು ವಿವರಗಳಿಗೆ ಹಾಗೂ ಟೆಂಡರ್ ವಿವರಗಳಿಗೆ ರಾಷ್ಟ್ರೋತ್ಥಾನ ಪರಿಷತ್ ವೆಬ್ಸೈಟ್‌ಗೆ ಭೇಟಿಕೊಡಿ:
www.rashtrotthana.org

ಸಹಿ/-
ಪ್ರಧಾನ ಕಾರ್ಯದರ್ಶಿಗಳು
ರಾಷ್ಟ್ರೋತ್ಥಾನ ಪರಿಷತ್

PERSONAL

Change of Name

I PRAVIN PRABHAKAR RAUT, Residing at C-1508, Alembic Urban Forest, AB Vajpayee Road, Kadugodi, Bangalore- 560 067, have changed my Minor daughter's name PRATYUSHA RAUT to New name PRATYUSHA PRAVIN RAUT, vide affidavit dated 14/03/2024 before notary Veena J., Bangalore

CHANGE OF NAME
I, VEENA SATISH, Residing at # 99, Anugraha, 2nd Main, 7th Cross, Ashwathnagar, RMV 2nd Stage, Bangalore-94 have changed my name to VEENA GURUSHANTHAIAH vide affidavit dt:14/03/2024 before Notary Meer Hassan, Bangalore. Henceforth I shall be called as VEENA GURUSHANTHAIAH Only.

I, RAGHAVENDRA SIRA LAKSHMIN ARAYANA, residing at Tumakuru have changed my name as RAGHAVENDRA SIRA LAKSHMINARAYANA,vide affidavit dated 15/03/2024 before Notary K.S.Bammappanavar, Bengaluru

CHANGE OF NAME
We, M.N. Shivaraj S/o Mysore Nagaraj, Vijayalakshmi S. W/o M.N. Shivaraj R/a No. 3, 1st Main, 5th Block, Kumara Park West, Bengaluru-560020 Our daughter's name has been wrongly mentioned as SANGHVI S, instead of SANGHAVI S. correct speling of my daughter's name is SANGHAVI S. vide affidavit dated 14-06-2023 Sworn before Notary S. Eswara Reddy, Bengaluru.

CHANGE OF NAME
I, LORRAINE VEONA AKHIL Residing at # 39, Aiman Villa, Behind RR School, Krishnappa Layout, Doddabommasandra, Vidyaranyapura Post, Bangalore-97 have changed my name to LORRAINE VEONA AIMAN vide affidavit dt:12/03/2024 before Notary V. Rangaramu Bangalore. Henceforth I shall be called as LORRAINE VEONA AIMAN Only.

Lost

DOCUMENT LOST
My client Shekar M S/o Madanna R/at PC Extension, Kolar - 563101, have lost his Original Lease cum Sale Deed of Reg No. 5327/ 1968-69, Dt: 25/3/1969 (Deed from KHB to Govinda Murthy on 25/12/2023) near Hoodi. Finder Please contact: SLN LAW Associates, K.R. Puram, Bangalore, Ph: 9481828264

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331